ಸ್ವಸಹಾಯ ಸಂಘಗಳು ಮತ್ತು ಮಹಿಳಾ ಸಬಲೀಕರಣ

ಸುಳ್ಯ ತಾಲೂಕಿನಲ್ಲಿ ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾನಿಲಯ

ಹಂಪಿ

ಎಂ. ಫಿಲ್ ಪದವಿಗಾಗಿ ಸಾದರಪಡಿಸಿದ ನಿಬಂಧ

ಸಂಶೋಧಕರು

ಅಮೃತಾ ಎ

ನೋಂದಣಿ ಸಂಖ್ಯೆ : ಕೆಟಿಎಸ್‌ಎಂಡಿಎಸ್/೧೫೧೧೧೧೦೩೦೦೫೮

ಮಾರ್ಗದರ್ಶಕರು

ಡಾ. ವಾಲ್ಟರ್ ಡಿಸೋಜ

೨೦೧೬

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು. ೫೭೫೦೦೧

ಸ್ವಸಹಾಯ ಸಂಘಗಳು ಮತ್ತು ಮಹಿಳಾ ಸಬಲೀಕರಣ

ಸುಳ್ಯ ತಾಲೂಕಿನಲ್ಲಿ ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾನಿಲಯ

ಹಂಪಿ

ಎಂ. ಫಿಲ್ ಪದವಿಗಾಗಿ ಸಾದರಪಡಿಸಿದ ನಿಬಂಧ

ಸಂಶೋಧಕರು

ಅಮೃತಾ ಎ

ನೋಂದಣಿ ಸಂಖ್ಯೆ : ೧೫೧೧೧೧೦೩೦೦೫೮

ಮಾರ್ಗದರ್ಶಕರು

ಡಾ. ವಾಲ್ಟರ್ ಡಿಸೋಜ

೨೦೧೬

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು. ೫೭೫೦೦೧

ಮಾರ್ಗದರ್ಶಕರ ದೃಢೀಕರಣ

ಅಮೃತಾ ಎ ಇವರು **ಸ್ವಸಹಾಯ ಸಂಘಗಳು ಮತ್ತು ಮಹಿಳಾ ಸಬಲೀಕರಣ : ಸುಳ್ಯ ತಾಲೂಕಿನಲ್ಲಿ ಒಂದು ಅಧ್ಯಯನ** ಎಂಬ ವಿಷಯದ ಕುರಿತಾಗಿ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಎಂ. ಫಿಲ್ ಪದವಿಗಾಗಿ ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ಇವರಿಗೆ ಸಲ್ಲಿಸಲು ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಸಂಶೋಧಕರ ಸ್ವಂತ ಅಧ್ಯಯನದ ಮೇಲೆ ರೂಪುಗೊಂಡಿದ್ದು ಈ ನಿಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶಕ್ಕಾಗಿಯಾಗಲಿ ಅಥವಾ ಪದವಿಗಾಗಿಯಾಗಲಿ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

(ಡಾ. ವಾಲ್ಟರ್ ಡಿಸೋಜ)
ಸಂಶೋಧನಾಮಾರ್ಗದರ್ಶಕರು

ಸ್ಥಳ: ಮಂಗಳೂರು
ದಿನಾಂಕ: 20. 7. 2016

Dr. Walter D Souza
Assistant Professor
Govt. First Grade College For Women
Balmatta, MANGALURU - 575 001

ಅಭ್ಯರ್ಥಿ ಪ್ರಮಾಣಪತ್ರ

ಡಾ. ವಾಲ್ಟರ್ ಡಿಸೋಜ ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯ ವಿಭಾಗ, ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಮಂಗಳೂರು ಇವರ ಮಾರ್ಗದರ್ಶನದಲ್ಲಿ **ಸ್ವಸಹಾಯ ಸಂಘಗಳು ಮತ್ತು ಮಹಿಳಾ ಸಬಲೀಕರಣ: ಸುಳ್ಯ ತಾಲೂಕಿನಲ್ಲಿ ಒಂದು ಅಧ್ಯಯನ** ಎಂಬ ವಿಷಯದ ಕುರಿತು ನಿಬಂಧವನ್ನು ಎಂ. ಫಿಲ್ ಪದವಿಗಾಗಿ ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ಇವರಿಗೆ ಸಲ್ಲಿಸಲು ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವನ್ನು ಅಥವಾ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಿ ಅಥವಾ ಇನ್ನಿತರ ಉದ್ದೇಶಕ್ಕಾಗಿ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

Amrutha

(ಅಮೃತಾ ಎ)
ಸಂಶೋಧನಾಅಭ್ಯರ್ಥಿ

ಸ್ಥಳ : ಕಾಸರಗೋಡು
ದಿನಾಂಕ : 20.07.2016

ಸ್ವಸಹಾಯ ಸಂಘಗಳು ಮತ್ತು ಮಹಿಳಾ ಸಬಲೀಕರಣ

ಸುಳ್ಯ ತಾಲೂಕಿನಲ್ಲಿ ಒಂದು ಅಧ್ಯಯನ

ಪರಿವಿಡಿ

ಅಧ್ಯಾಯ ೧

ಪೀಠಿಕೆ, ಅಧ್ಯಯನದ ಸ್ವರೂಪ

೧.೧ ಪೀಠಿಕೆ

೧.೨ ಸಾಹಿತ್ಯ ಪರಾಮರ್ಶನ

೧.೩ ಮಹಿಳಾ ಸಬಲೀಕರಣ

೧.೪ ಸ್ವಸಹಾಯ ಸಂಘ ಮತ್ತು ಮಹಿಳೆ

೧.೫ ಅಧ್ಯಯನದ ಉದ್ದೇಶಗಳು

೧.೬ ಅಧ್ಯಯನದ ಊಹೆಗಳು

೧.೭ ಅಧ್ಯಯನದ ವಿಧಾನ

೧.೮ ಅಧ್ಯಯನದ ವ್ಯಾಪ್ತಿ ಹಾಗೂ ಇತಿಮಿತಿಗಳು

೧.೯ ಅಧ್ಯಾಯಗಳು

೧.೧ ಪೀಠಿಕೆ

ಮನುಕುಲದ ಮಾತೆ, ಮಹಿಳೆ ಮಾತೃದೇವತೆಯಾಗಿ ಭಾರತದಲ್ಲಿ ಆರಾಧಿಸಲ್ಪಡುತ್ತಾಳೆ. ಮನು ಮಹಾರಾಜ "ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ" ಎಂದು ಸಾರಿದ್ದಾನೆ. ಅವನ ಮಾತಿನ ಅಕ್ಷರಶಃ ಪಾಲನೆಯಿಂದಾಗಿ ಆಕೆ ಗೃಹವೆಂಬ ಗರ್ಭಗುಡಿಯೊಳಗಿನ ಮೂರ್ತಿಯಾದಳು. ಆಕೆಯ ಮಾತೃಶಕ್ತಿ ಯಾವಕಾಲಕ್ಕೂ ಅಳಿಯದೆ ಶಾಶ್ವತವಾಗಿ ಉಳಿಯಿತು. ಯಾವೊಂದು ಆಚಾರ, ವಿಚಾರಗಳು, ನಂಬಿಕೆ, ಶಾಸನಗಳು ಕಾಲಧರ್ಮಕ್ಕನುಗುಣವಾಗಿಯೇ ಸಾಗುವುದರಿಂದ ಇವುಗಳಲ್ಲಿ ಬದಲಾವಣೆ ಅನಿವಾರ್ಯವಾಗುತ್ತದೆ. ವೇದೋಪನಿಷತ್ತುಗಳ ಕಾಲದಲ್ಲಿ ಮಹಿಳೆಗೆ ಪುರುಷ ಸಮಾನವಾದ ಎಲ್ಲಾ ಅವಕಾಶಗಳೂ, ಸಂಸ್ಕಾರಗಳೂ ಇದ್ದುದು ತಿಳಿದುಬರುತ್ತದೆ. ವಿವಾಹವಾಗದೆ ಉಳಿಯಬಹುದಾದ, ವಿವಾಹವಾದರೂ ಮಕ್ಕಳನ್ನು ಪಡೆಯದಿರುವ ಅವಕಾಶವೂ ಇತ್ತು ಎನ್ನುವುದು ಅಷ್ಟೇ ಪ್ರಾಮುಖ್ಯವಾದ ವಿಷಯ.

ಮುಂದೆ ರಾಜಕೀಯ ಅನಿಶ್ಚಿತತೆಯ ಹೊಡೆತವನ್ನು ಎದುರಿಸಬೇಕಾದಾಗ ಸಮಾಜದಲ್ಲಿ ಹೆಣ್ಣಿನ ರಕ್ಷಣೆ ಪುರುಷರಿಗೆ ಅನಿವಾರ್ಯವಾಯಿತು. ಬಾಲ್ಯದಲ್ಲಿ ತಂದೆಯೂ, ವೃದ್ಧಾಪ್ಯದಲ್ಲಿ ಮಕ್ಕಳೂ ಆಕೆಯನ್ನು ರಕ್ಷಿಸಬೇಕು ಎಂಬುದು ಶಾಸನವಾಯಿತು. 'ನ ಸ್ತ್ರೀ ಸ್ವಾತಂತ್ರ್ಯಮರ್ಹತೀ' ಎಂಬುದು ಸ್ಥಿತಿಯಾಯಿತು. ಇಲ್ಲಿ ಆಕೆ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎಂಬುದಕ್ಕಿಂತ ಆಕೆಯ ಸ್ವಾತಂತ್ರ್ಯ ರಕ್ಷಣೆ ಉಳಿದವರ ಕರ್ತವ್ಯವಾದ್ದರಿಂದ ಅವಳಿಗೆ ಸ್ವಾತಂತ್ರ್ಯದ ಅವಶ್ಯಕತೆ ಇಲ್ಲವಾಯಿತು ಎನ್ನುವುದು ಮುಖ್ಯ.

೧.೨ ಸಾಹಿತ್ಯ ಪರಾಮರ್ಶನ

ಸ್ತ್ರೀಯ ಸ್ಥಾನಮಾನಗಳು ಸಮಾಜದಿಂದ ನಿರ್ಧರಿತವಾಗುತ್ತದೆ. ತಮ್ಮ ಬಗ್ಗೆ ಇರುವ ಸಮಾಜದ ಕಲ್ಪನೆಗಳು, ಮೌಲ್ಯನಿರ್ಧಾರಗಳು, ಭಾವನೆಗಳು, ಸಾಂಪ್ರದಾಯಿಕ ನಂಬಿಕೆ, ಕಟ್ಟಳೆ, ಆದರ್ಶ ಇವುಗಳಿಂದ ಪ್ರಭಾವಿತರಾಗಿ ಮತ್ತು ಅವುಗಳನ್ನೊಪ್ಪಿಕೊಂಡು ಸ್ತ್ರೀಪುರುಷರು ತಮ್ಮ ಜೀವಿತವನ್ನು ರೂಪಿಸಿಕೊಳ್ಳುತ್ತಾರೆ. ವೇದಗಳ ಕಾಲದ ನಂತರ ಸ್ವಾತಂತ್ರ್ಯ ಪೂರ್ವದಲ್ಲಿ ಸ್ತ್ರೀಯರ ಸ್ಥಾನಮಾನ

ಚೆನ್ನಾಗಿರಲಿಲ್ಲ. ಸ್ತ್ರೀಯರ ಸ್ಥಾನಮಾನಗಳು ಅವನತಿಯ ಹಾದಿಯಲ್ಲಿ ನಡೆದಿದ್ದು ಇನ್ನಷ್ಟು ಅಧೋಗತಿಗಿಳಿದವು. ಮುಂದೆ ಪರಿಸ್ಥಿತಿ ಬದಲಾವಣೆಯತ್ತ ಸಾಗಿತು.

ರಾಷ್ಟ್ರೀಯ ನೇತಾರರಾಗಿ ಗಾಂಧೀಜಿ ದೇಶದ ರಾಜಕಾರಣವನ್ನು ಪ್ರವೇಶಿಸಿದ ನಂತರ ಸ್ತ್ರೀಯರ ಸಮಗ್ರ ಪರಿಸ್ಥಿತಿಯನ್ನು ಪುನಃ ಪರಿಶೀಲಿಸಿ ಅದನ್ನು ಉತ್ತಮಪಡಿಸಲು ಒಬ್ಬ ವ್ಯಕ್ತಿ ದೊರಕಿದಂತಾಯಿತು. ಸ್ವಾತಂತ್ರ್ಯ ಪೂರ್ವದಲ್ಲಿ ಸ್ತ್ರೀಯರು ತಮ್ಮ ಸ್ಥಾನಮಾನಗಳನ್ನು ಉತ್ತಮಪಡಿಸಿಕೊಳ್ಳಲು ಮಾಡಿದ ಸತತ ಪ್ರಯತ್ನಗಳಿಂದ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅವರ ಸ್ಥಾನಮಾನಗಳ ಬಗ್ಗೆ ಹೊಸ ಆಶೋತ್ತರಗಳು ಮೂಡಲು ಪ್ರಾರಂಭವಾಯಿತು. ೧೯೫೦ರಲ್ಲಿ ಜಾರಿಗೆ ಬಂದ ಹೊಸ ಸಂವಿಧಾನ ಸ್ತ್ರೀಯರಿಗೊಂದು ಆಶಾಕಿರಣವಾಗಿ ಪರಿಣಮಿಸಿತು. ಶಿಕ್ಷಣ, ಕೈಗಾರಿಕೆ ಇವುಗಳಲ್ಲಿ ಉಂಟಾದ ಬದಲಾವಣೆಯೂ ಸಹ ಸ್ತ್ರೀಯರ ಸ್ಥಾನಮಾನಗಳನ್ನು ಉನ್ನತ ಮಟ್ಟಕ್ಕೆ ಏರಿಸಲು ಅವಕಾಶಗಳನ್ನು ಕಲ್ಪಿಸಿತು. ೨೦ನೇ ಶತಮಾನವು ಸ್ತ್ರೀಗೆ ಸಮಾನ ವಿದ್ಯಾಭ್ಯಾಸ, ಸಮಾನ ದುಡಿಮೆಗೆ ಅವಕಾಶ, ಸ್ವಾತಂತ್ರ್ಯ, ಕ್ರಿಯಾತ್ಮಕ ಚಟುವಟಿಕೆಗಳು ಮೊದಲಾದುವನ್ನು ತಂದುಕೊಟ್ಟಿದೆ. ವಿಜ್ಞಾನ, ಸಂಶೋಧನೆ, ಉದ್ಯಮ, ವೈದ್ಯಕೀಯ, ಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲಿ ಅವರು ಪುರುಷರಂತೆಯೇ ಪುರುಷರೊಂದಿಗೆ ಸರಿಸಮನಾಗಿ ದುಡಿಯುತ್ತಿದ್ದಾರೆ. ಮೇಲ್ನೋಟಕ್ಕೆ ಈ ರೀತಿ ಸಮಾನತೆ ಕಂಡುಬಂದರೂ ಗ್ರಾಮೀಣ ಪ್ರದೇಶದಲ್ಲಿ ಪರಿಸ್ಥಿತಿ ಇನ್ನೂ ಈ ಮಟ್ಟಕ್ಕೆ ತಲುಪಿಲ್ಲ. ಅವರು ಇನ್ನೂ ಕೂಡಾ ಕಷ್ಟಕಾರ್ಪಣ್ಯಗಳಿಂದ ಮುಕ್ತರಾಗಿಲ್ಲ. ಇದೂ ಕೂಡಾ ನಮ್ಮ ದೇಶ ಇನ್ನೂ ಮುಂದುವರಿಯುತ್ತಿರುವ ದೇಶವಾಗಿಯೇ ಉಳಿಯಲು ಒಂದು ಕಾರಣವಾಗಿದೆ ಎನ್ನಬಹುದು.

'ಒಂದು ದೇಶದ ಪ್ರಗತಿ ಅಲ್ಲಿಯ ಮಹಿಳೆಯರ ಸ್ಥಿತಿಗತಿಗಳನ್ನು ಅವಲಂಬಿಸಿದೆ' ಎಂಬುದು ಕಾರ್ಲ್‌ಮಾರ್ಕ್ಸ್‌ನ ಅಭಿಪ್ರಾಯ. ಅಂದರೆ ಸ್ತ್ರೀಯರಿಗೆ ಗೌರವ ಸಲ್ಲುವ ಮೂಲಕ ಸಮಾಜದಲ್ಲಿ ಶಾಂತಿ, ಸಮಾಧಾನ, ತೃಪ್ತಿಗಳು ನೆಲೆಗೊಳ್ಳುತ್ತವೆ. ಮಹಿಳೆಯ ಸ್ಥಿತಿಗತಿ ಉತ್ತಮಗೊಂಡರೆ ದೇಶದ ಪ್ರಗತಿ ಸಾಧ್ಯ. ಮಹಿಳೆ ತೃಪ್ತಳಾದರೆ, ಸಮಾಧಾನಳಾದರೆ ದೇಶವೂ ತೃಪ್ತಿ ಹೊಂದುವುದು. ಮಹಿಳೆ ತಾನು

ಬದುಕಿನಲ್ಲಿ ತೃಪ್ತಳಾಗಬೇಕು. ಆ ಮೂಲಕ ತನ್ನ ಕುಟುಂಬ, ಸಮಾಜ, ದೇಶಗಳ ತೃಪ್ತಿಗೆ ಮೂಲವಾಗುತ್ತಾಳೆ. ಹಾಗೆಯೇ ದೇಶದ ಪ್ರಗತಿಗೆ ಕಾರಣಳೂ ಆಗುತ್ತಾಳೆ.

ಅನಾದಿ ಕಾಲದಿಂದಲೂ ಪುರುಷ ಪ್ರಧಾನ ದೇಶವಾದ ಭಾರತದಲ್ಲಿ (ಯು. ಎನ್. ಡಿ. ಪಿ. ವರದಿಯ ಪ್ರಕಾರ ಯಾವ ದೇಶದಲ್ಲೂ ಮಹಿಳೆಯರ ಸ್ಥಾನ ಪುರುಷನ ಸ್ಥಾನದಷ್ಟು ಉನ್ನತ ಮಟ್ಟದಲ್ಲಿಲ್ಲ) ಸಮಾಜವೇ ಸೃಷ್ಟಿಸಿದ ಅಸಮಾನತೆಯಿಂದಾಗಿ ಆಸ್ತಿಯ ಹಕ್ಕಿನಲ್ಲಿ, ವಿದ್ಯಾಭ್ಯಾಸ ಮಟ್ಟದಲ್ಲಿ, ಉದ್ಯೋಗ ಅವಕಾಶದಲ್ಲಿ ಸತತವಾಗಿ ಆಕೆ ವಂಚಿತಳಾಗುತ್ತಿದ್ದಾಳೆ. ಈ ಎಲ್ಲಾ ಅನನುಕೂಲಗಳಿಂದ ಹೊರಬರಲು ಮಹಿಳೆಗೆ ಸ್ವಾವಲಂಬನೆ ಅತ್ಯಗತ್ಯ. ಸ್ವಾಭಿಮಾನ ಕಾಪಾಡಲು, ಭವಿಷ್ಯದ ಭದ್ರತೆಯ ದೃಷ್ಟಿಯಿಂದ, ಸಮಾಜದಲ್ಲಿ ಗೌರವದ ಬಾಳು ಬಾಳಲು, ಪುರುಷನೊಂದಿಗೆ ಸಮಾನ ಹಕ್ಕುಗಳನ್ನು ದೃಢಪಡಿಸಲು ಆಕೆಯು ಸ್ವಾವಲಂಬಿಯಾಗಬೇಕು. ಮಹಿಳಾ ಸ್ವಾವಲಂಬನೆಯು ಆಕೆಯ ಗೌರವ ಹೆಚ್ಚಿಸಲು, ಭವಿಷ್ಯದ ಭದ್ರತೆಯನ್ನು ಗಟ್ಟಿಗೊಳಿಸಲು ಅಗತ್ಯ. ಸ್ವ ಉದ್ಯೋಗವನ್ನು ಹೊಂದುವುದು ಇದಕ್ಕೆ ಅತಿ ಮುಖ್ಯ ದಾರಿ. ಇದಕ್ಕೆ ಮುಖ್ಯವಾಗಿ ಆಗಬೇಕಿರುವುದು ಮಹಿಳಾ ಸಬಲೀಕರಣ.

೧.೩ ಮಹಿಳಾ ಸಬಲೀಕರಣ

'ಸಬಲೀಕರಣ' ಎಂಬುದು 90ರ ದಶಕದ ವಿದ್ಯಮಾನವಾಗಿದ್ದು ಇದನ್ನು 'ಅಧಿಕಾರ ನೀಡುವುದು', 'ತನ್ನೊಳಗೆ ಅಧಿಕಾರ ಸೃಷ್ಟಿಸುವುದು' ಮತ್ತು 'ಸಮರ್ಥರನ್ನಾಗಿಸುವುದು' ಎಂದೆಲ್ಲಾ ವ್ಯಾಖ್ಯಾನಿಸಲಾಗುತ್ತದೆ. ಇದೊಂದು ಬಹುಆಯಾಮವುಳ್ಳ ಪ್ರಕ್ರಿಯೆಯಾಗಿದ್ದು, ವ್ಯಕ್ತಿಗಳು ಮತ್ತು ಗುಂಪುಗಳು ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ತಮ್ಮ ಪೂರ್ಣ ವ್ಯಕ್ತಿತ್ವ ಮತ್ತು ಅಧಿಕಾರಗಳನ್ನು ಮನಗಾಣುವಂತೆ ಮಾಡುತ್ತದೆ. ಸಬಲೀಕರಣವು ಒಂದು ಪ್ರಕ್ರಿಯೆಯಾಗಿದ್ದು ಮಹಿಳೆಯರು ತಮ್ಮ ಸ್ವಾವಲಂಬನೆಯನ್ನು ವೃದ್ಧಿಸುವುದಕ್ಕೋಸ್ಕರ, ಆಯ್ಕೆಗಳನ್ನು ಮಾಡಿಕೊಳ್ಳಲು, ತಮಗಿರುವ ವೈಯಕ್ತಿಕ

ಹಕ್ಕನ್ನು ಪ್ರತಿಪಾದಿಸುವುದಕ್ಕೋಸ್ಕರ ಮತ್ತು ಅಧೀನತೆಯನ್ನು ಪ್ರಶ್ನಿಸುವ ಮತ್ತು ನಿಯಂತ್ರಣಕ್ಕಾಗಿ ತಮ್ಮೊಳಗೆ ಸಂಘಟಿಸುವುದಾಗಿದೆ ಎಂದು ಕೆಲ್ಲರ್ ಮತ್ತು ಮ್ಬೆವೆ (೧೯೯೧) ವರ್ಣಿಸಿದ್ದಾರೆ.

ದೇಶದಲ್ಲಿ ಒಟ್ಟು ಮಹಿಳಾ ಜನಸಂಖ್ಯೆಯಲ್ಲಿ ಗ್ರಾಮೀಣ ಮಹಿಳೆಯರ ಪಾಲು ಹೆಚ್ಚು ಕಡಿಮೆ ೭೫ ಪ್ರತಿಶತದಷ್ಟಿದೆ. ಆದರೆ ನಗರ ಪ್ರದೇಶಗಳ ಮಹಿಳೆಯರಿಗೆ ಹೋಲಿಸಿದರೆ ಗ್ರಾಮೀಣ ಪ್ರದೇಶದ ಮಹಿಳೆಯರು ಹೆಚ್ಚಿನೆಲ್ಲಾ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಹೆಚ್ಚಿನ ಗ್ರಾಮೀಣ ಮಹಿಳೆಯರು ಬಡವರೂ, ಮುಗ್ಧರೂ, ಅನಕ್ಷರಸ್ಥರೂ ಮತ್ತು ತುಳಿತಕ್ಕೊಳಗಾದವರಾಗಿದ್ದಾರೆ. ಗ್ರಾಮೀಣ ಮಹಿಳೆಯರು ಅಸಂಘಟಿತರಾಗಿದ್ದು ಸೂಕ್ತ ಪ್ರಾತಿನಿಧ್ಯವನ್ನು ಹೊಂದಿಲ್ಲ. ಅವರಿಗೆ ತರಬೇತಿ ನೀಡುವುದರ ಮೂಲಕ, ಸಂಘಟಿತರನ್ನಾಗಿಸುವುದರ ಮೂಲಕ ಅವರನ್ನು ಹೆಚ್ಚು ಸಶಕ್ತರನ್ನಾಗಿಸಬಹುದು.

ಮಹಿಳಾ ಸಬಲೀಕರಣದ ಪ್ರಕ್ರಿಯೆಯಲ್ಲಿ ಸಮಾಜಕ್ಕೆ ಮತ್ತು ಸರಕಾರಕ್ಕೆ ಮಹತ್ವದ ಪಾತ್ರವಿದೆ. ಇದಕ್ಕಾಗಿ ಸಮಾಜ ಮತ್ತು ಸರಕಾರಗಳು ಅನೇಕ ಮುಖ್ಯ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಶಿಕ್ಷಣ, ಆಸ್ತಿಹಕ್ಕು, ಆರೋಗ್ಯ ಸೇವೆಗಳು, ಸಾಲ ಒದಗಿಸುವುದು ಇತ್ಯಾದಿ. ರಾಜಕೀಯ ಪ್ರಾತಿನಿಧ್ಯ ಕಲ್ಪಿಸುವಿಕೆಯು ಮಹಿಳಾ ಸಬಲೀಕರಣಕ್ಕೆ ಅವಶ್ಯವೆಂದು ೧೯೯೫ ರ ವಿಶ್ವ ಮಾನವಾಭಿವೃದ್ಧಿ ವರದಿ ಹೇಳುತ್ತದೆ. ವಿಶ್ವಬ್ಯಾಂಕ್ ಇತ್ತೀಚೆಗೆ ತನ್ನ ಸಾಲ ನೀಡಿಕೆ ಕಾರ್ಯಕ್ರಮಗಳಲ್ಲಿ ಮಹಿಳಾ ಹಿತಾಸಕ್ತಿಗಳನ್ನು ಸೇರ್ಪಡೆಗೊಳಿಸುತ್ತಿದೆ. ಭಾರತವು ೧೯೮೫ ರಿಂದೀಚೆಗೆ ಮಹಿಳಾ ಸಬಲೀಕರಣಕ್ಕಾಗಿ ಹಲವು ನಿರ್ದಿಷ್ಟ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಮಹಿಳಾ ಶಿಕ್ಷಣ ಅಭಿಯಾನ, ಮಹಿಳಾ ಸ್ವಸಹಾಯ ಗುಂಪುಗಳ ರಚನೆ ಇತ್ಯಾದಿ ಹೀಗೆ ಆರ್ಥಿಕ ನೆಲೆಯಲ್ಲಿ ಮಹಿಳಾ ಸಬಲೀಕರಣದ ಪ್ರಯತ್ನಗಳು ಸಾಗಿವೆ.

ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಅನೇಕ ಸಾಮಾಜಿಕ ಸಮಸ್ಯೆಗಳು ಅಭಿವೃದ್ಧಿ ಹೊಂದಲು ತೊಡರುಗಳಾಗಿವೆ. ಇದಕ್ಕೆ ಪೂರಕವೆಂಬಂತೆ ಭಾರತದಲ್ಲಿ ಹಲವು ಧರ್ಮ, ವರ್ಗ, ವರ್ಣ, ಜಾತಿ ಹಾಗೂ ಲಿಂಗಗಳ ಆಧಾರದ ಮೇಲೆ ಅನೇಕ ರೀತಿಗಳನ್ನು, ವಿಭಿನ್ನತೆಗಳನ್ನು

ಕಾಣುತ್ತಿದ್ದೇವೆ. ಇವುಗಳಲ್ಲಿ ಲಿಂಗ ತಾರತಮ್ಯವು ಅತ್ಯಂತ ಮುಖ್ಯವಾದುದಾಗಿದೆ. ಇಂತಹ ಸಮಸ್ಯೆಗಳನ್ನು ಹೋಗಲಾಡಿಸಲು ಕಳೆದ ೫೦ – ೬೦ ವರ್ಷಗಳಿಂದ ಮಹಿಳೆಯರಿಗಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಇದರ ಜೊತೆಗೆ ವಿಶ್ವದ ಅನೇಕ ಅಂತರಾಷ್ಟ್ರೀಯ ಸಂಘಸಂಸ್ಥೆಗಳು ಇವುಗಳೊಂದಿಗೆ ಕೈಜೋಡಿಸಿದೆ. ಅವುಗಳಲ್ಲಿ ವಿಶ್ವಸಂಸ್ಥೆ, ಯುನೆಸ್ಕೋ, ವಿಶ್ವ ಆರೋಗ್ಯ ಸಂಸ್ಥೆ ಮುಖ್ಯವಾದವು. ಇಂತಹ ನಿಯೋಗಗಳೊಂದಿಗೆ ಭಾರತ ಸರಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಇನ್ನಿತರ ಸರಕಾರೇತರ ಸಂಸ್ಥೆಗಳು ಮಹಿಳಾ ಸಬಲೀಕರಣಕ್ಕಾಗಿ ಕಾರ್ಯನಿರ್ವಹಿಸುತ್ತಿವೆ. ಇದರಿಂದ ಮಹಿಳೆಯರು ಇಂದು ಸಬಲೀಕರಣದ ಪ್ರಕ್ರಿಯೆಗೆ ಒಳಗಾಗಿ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯವಾಗಿ ಬೆಳೆಯಲು ಸಹಾಯವಾಗಿದೆ.

'ಮಹಿಳಾ ಸಬಲೀಕರಣದ' ವಿಷಯದಲ್ಲಿ ಜಾಗತಿಕ ಮಟ್ಟದಲ್ಲಿ ಆಗುತ್ತಿರುವ ಚರ್ಚೆಗಳು, ವಿಶ್ವಬ್ಯಾಂಕಿನಿಂದ ದೊರೆತ ಪ್ರೋತ್ಸಾಹ ಮತ್ತು ದೇಶದ ಬೆಳವಣಿಗೆಯಲ್ಲಿ ಮಹಿಳೆಯ ಸಬಲೀಕರಣದ ಅವಶ್ಯಕತೆ ಇವುಗಳೆಲ್ಲದುದರಿಂದಾಗಿ ಭಾರತ ಸರ್ಕಾರವು ತನ್ನ ೮ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳೆಯ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿತು. ಹೀಗೆ ಪ್ರಾರಂಭವಾದ ಸರಕಾರದ 'ಮಹಿಳಾ ಸಬಲೀಕರಣ'ದ ಪ್ರಯತ್ನ ೯ನೇ ಪಂಚವಾರ್ಷಿಕ ಯೋಜನೆಯಲ್ಲೂ ಮುಂದುವರಿಯಿತು. ಈ ಪ್ರಯತ್ನಗಳ ಒಂದು ಫಲವೇ "ಸ್ವಸಹಾಯ ಸಂಘಗಳು".

೧.೪ ಸ್ವಸಹಾಯ ಸಂಘ ಮತ್ತು ಮಹಿಳೆ

'ಸ್ವಸಹಾಯ ಸಂಘಗಳು ಮತ್ತು ಮಹಿಳಾ ಸಬಲೀಕರಣ : ಸುಳ್ಯ ತಾಲೂಕಿನಲ್ಲಿ ಅಧ್ಯಯನ' ಎಂಬ ಶೀರ್ಷಿಕೆಯಾಧಾರಿತ ಅಧ್ಯಯನವು ಇದಾಗಿದೆ. ಮುಖ್ಯವಾಗಿ ಸುಳ್ಯ ತಾಲೂಕಿನಲ್ಲಿರುವ ಸರಕಾರ ಮತ್ತು ಸರಕಾರೇತರ ಸ್ವಸಹಾಯ ಸಂಘಗಳನ್ನು ಕೇಂದ್ರವಾಗಿರಿಸಿ ಈ ಸಂಘಗಳ ಮೂಲಕ ಗ್ರಾಮೀಣ ಪ್ರದೇಶದ ಮಹಿಳೆಯರಲ್ಲಿನ ಸಬಲೀಕರಣವನ್ನು ಗುರುತಿಸುವುದು ಈ ಅಧ್ಯಯನದ ಹಿಂದಿರುವ ಮುಖ್ಯ ಕಾಳಜಿಯಾಗಿದೆ.

ನಮ್ಮ ಸಮಾಜದಲ್ಲಿ ಮಹಿಳೆಯರ ಇರುವಿಕೆ, ಅವರ ಸ್ಥಾನಮಾನ, ಜೀವನ ಶೈಲಿಯನ್ನು ಹಳೆಯ ಸಂಪ್ರದಾಯಗಳು, ರೀತಿ, ರಿವಾಜುಗಳು ನಿರ್ಧರಿಸುತ್ತವೆ. ಇಂದು ಸಮಾಜ ಎಷ್ಟು ಮುಂದುವರಿಯುತ್ತಿದ್ದರೂ ಎಷ್ಟೋ ಮಹಿಳೆಯರು ಇನ್ನೂ ಕೂಡಾ ನಾಲ್ಕು ಗೋಡೆಯ ಮಧ್ಯೆಯೇ ತಮ್ಮ ಅಸ್ತಿತ್ವವನ್ನು ಕಂಡುಕೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ ಮಹಿಳೆಯರ ಒಳಿತಿಗಾಗಿ ಸರಕಾರ ಮತ್ತು ಸರಕಾರೇತರ ಸಂಸ್ಥೆಗಳು ಯಾವ ರೀತಿಯಾಗಿ ಬದಲಾವಣೆ ತರುವಲ್ಲಿ ಪ್ರಯತ್ನಿಸುತ್ತಿದೆ ಹಾಗೂ ಇದು ಮಹಿಳೆಯರ ಸ್ಥಿತಿಗತಿ ಬದಲಾವಣೆಗೆ ಎಷ್ಟರಮಟ್ಟಿಗೆ ಸಹಾಯಕವಾಗಿದೆ ಎಂದು ಸಂಶೋಧನಾತ್ಮಕವಾಗಿ ಅಧ್ಯಯನ ನಡೆಸಿದಾಗ ಮಾತ್ರ ನೈಜ ಸ್ಥಿತಿ ತಿಳಿಯಲು ಸಾಧ್ಯ. ಆದುದರಿಂದ ಈ ಅಧ್ಯಯನವು ಸೂಕ್ತವೆನಿಸುತ್ತದೆ.

ಸ್ವಸಹಾಯ ಸಂಘಗಳು, ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ, ಗ್ರಾಮೀಣ ಮಹಿಳೆಯರ ಸಬಲೀಕರಣ, ಮಹಿಳಾ ಉದ್ಯಮಶೀಲತೆ, ರಾಜಕೀಯದಲ್ಲಿ ಮಹಿಳೆಯರ ಪಾತ್ರ ಹೀಗೆ ಹಲವಾರು ವಿಷಯಗಳ ಕುರಿತು ಈಗಾಗಲೇ ಸಾಕಷ್ಟು ಅಧ್ಯಯನಗಳು ನಡೆದಿವೆ, ನಡೆಯುತ್ತಲೇ ಇವೆ. ಸರಕಾರವು ಗ್ರಾಮೀಣಾಭಿವೃದ್ಧಿ, ಮಹಿಳಾ ಅಭಿವೃದ್ಧಿಗಾಗಿ ಹಲವಾರು ಯೋಚನೆ, ಯೋಜನೆಗಳನ್ನು ರೂಪಿಸಿದೆ, ಜಾರಿಗೆ ತಂದಿದೆ. ಆದರೆ ಇವುಗಳ ಸರಿಯಾದ ಅನುಷ್ಠಾನ ಇನ್ನೂ ಸಾಧ್ಯವಾಗಿಲ್ಲ. ಯೋಜನೆಗಳು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿಲ್ಲ. ಸರಕಾರಿ ಸಂಘಗಳಲ್ಲದೆ ಸಾಕಷ್ಟು ಸರಕಾರೇತರ ಸಂಸ್ಥೆಗಳು ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿವೆ. ಆದರೆ ಇವುಗಳು ಹಳ್ಳಿಗಳ ಜನರನ್ನು ಇನ್ನೂ ಮುಟ್ಟಿಲ್ಲ. ಗ್ರಾಮೀಣ ಜನರು ಅನಕ್ಷರತೆ, ಮೂಢನಂಬಿಕೆ ಕಾರಣಗಳಿಂದಾಗಿ ತಮ್ಮ ಹಕ್ಕುಗಳನ್ನು, ಸರಕಾರ ಸಂಘಸಂಸ್ಥೆಗಳಿಂದಾಗುವ ಅನುಕೂಲಗಳನ್ನು ತಿಳಿಯುವಲ್ಲಿ ವಿಫಲರಾಗಿದ್ದಾರೆ.

ಕ್ಲಿಷ್ಟಕರ ಸನ್ನಿವೇಶಗಳಿಂದ ಮಹಿಳೆಯರಿಗೆ ವಿಮೋಚನೆ ಮತ್ತು ಬದಲಾವಣೆ ತರಲು ವಿಶ್ವಸಂಸ್ಥೆ ಅನೇಕ ರೀತಿಯ ಕಾರ್ಯತಂತ್ರಗಳನ್ನು ರಚಿಸುತ್ತಾ ಬಂದಿದೆ. ಮಹಿಳೆಯರ ಹಕ್ಕು ಬಾಧ್ಯತೆಗಳನ್ನು ಗೌರವಿಸಲು ತಿಳಿಸಿದೆ. ಈ ನಿಟ್ಟಿನಲ್ಲಿ ಜಾರಿಗೆ ಬಂದ ಹೊಸ ರೂಪವೇ 'ಮಹಿಳಾ ಸಬಲೀಕರಣ'. ಇದರ ಒಳಗಿನ ಆಯಾಮಗಳಿಂದ ಮಹಿಳಾ ಸ್ವಸಹಾಯ ಸಂಘಗಳ ಸ್ಥಾಪನೆಯಾಗಿದೆ. ಅವುಗಳ ಮೂಲಕ

ಸರ್ವತೋಮುಖ ಬೆಳವಣಿಗೆಗೆ ಕಾರಣೀಭೂತವಾಗಿದೆ. ಸ್ವಸಹಾಯ ಸಂಘಗಳ ಸ್ಥಾಪನೆ ನಂತರ ಹತ್ತು ಹಲವು ಬದಲಾವಣೆಗಳು ಮಹಿಳೆಯರಲ್ಲಿ ಉಂಟಾಗಿ ಅಲ್ಪ ಮಟ್ಟಿನ ಯಶಸ್ಸು ಸ್ಥಾಪನೆಯಾಗಿದೆ. ಆದರೆ ಇನ್ನೂ ಅಭಿವೃದ್ಧಿಗೊಳ್ಳಬೇಕಾದ ಅಂಶಗಳು ತುಂಬಾ ಇವೆ. ಹೀಗಾಗಿ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಸಂಶೋಧನೆಯು ಮುಖ್ಯ ಅಸ್ತ್ರವಾಗಿದೆ. ಆದುದರಿಂದ ಈ ಕುರಿತ ಅಧ್ಯಯನವು ಸಮಂಜಸವೆನಿಸುತ್ತದೆ.

೧.೫ ಅಧ್ಯಯನದ ಉದ್ದೇಶಗಳು

- ಮಹಿಳಾ ಸಬಲೀಕರಣದಲ್ಲಿ ಸ್ವಸಹಾಯ ಸಂಘಗಳ ಪಾತ್ರವನ್ನು ವಿಶ್ಲೇಷಿಸುವುದು.
- ಸ್ವಸಹಾಯ ಸಂಘಗಳು ಮಹಿಳೆಯರಿಗೆ ಹಣಕಾಸಿನ ಪಾಲ್ಗೊಳ್ಳುವಿಕೆಯಲ್ಲಿ ಎಷ್ಟರಮಟ್ಟಿಗೆ ಸಹಾಯಕವಾಗಿದೆ ಎಂದು ಪರಿಶೀಲಿಸುವುದು.
- ಸ್ವಸಹಾಯ ಸಂಘಗಳು ಮಹಿಳಾ ಸ್ವ ಉದ್ಯೋಗಕ್ಕೆ ಹೇಗೆ ಸಹಾಯಕವಾಗಿದೆ ಎಂದು ತಿಳಿಯುವುದು.
- ಗ್ರಾಮೀಣ ಬಡತನ ಮತ್ತು ನಿರುದ್ಯೋಗ ನಿರ್ಮೂಲನೆಯಲ್ಲಿ ಸ್ವಸಹಾಯ ಸಂಘಗಳು ಪರಿಣಾಮಕಾರಿಯೇ ಎಂದು ಅರಿಯುವುದು.

೧.೬ ಅಧ್ಯಯನದ ಊಹೆಗಳು

- ಸ್ವಸಹಾಯ ಸಂಘಗಳ ಕಾರ್ಯಕ್ರಮಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯ ರೀತಿ ಉತ್ತಮವಾಗಿದೆ.
- ಸ್ವಸಹಾಯ ಸಂಘಗಳಲ್ಲಿ ನಿರತರಾಗಿರುವ ಮಹಿಳೆಯರ ಸಬಲೀಕರಣವಾಗಿದೆ.

೧.೭ ಅಧ್ಯಯನದ ವಿಧಾನಗಳು

ಪ್ರಸ್ತುತ ಅಧ್ಯಯನವು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಹಿಳಾ ಸ್ವಸಹಾಯ ಗುಂಪುಗಳ ಕುರಿತಾಗಿ ಆಗಿದೆ. ಈ ಅಧ್ಯಯನ ನಡೆಸಲು ಪ್ರಾಥಮಿಕ ಹಾಗೂ ಆನುಷಂಗಿಕ ಎರಡೂ ವಿಧಾನಗಳ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ.

ಪ್ರಾಥಮಿಕ ವಿಧಾನವಾಗಿ ಫಲಾನುಭವಿಗಳನ್ನು ಭೇಟಿ ಮಾಡುವುದು, ಸಂದರ್ಶನ ಮಾಡುವ ಮುಖಾಂತರ ಮಾಹಿತಿ ಸಂಗ್ರಹಿಸಲಾಗಿದೆ. ಅಲ್ಲದೆ ಪ್ರಶ್ನಾವಳಿಗಳನ್ನು ಪ್ರಾಥಮಿಕ ಆಕರವಾಗಿ ಬಳಸಿಕೊಳ್ಳಲಾಗಿದೆ. ಈ ಅಧ್ಯಯನವು ಬಹುತೇಕವಾಗಿ ಕ್ಷೇತ್ರಕಾರ್ಯ ಅಧಾರಿತವಾಗಿದೆ. ಕ್ಷೇತ್ರಕಾರ್ಯದಲ್ಲಿ ಸ್ವಸಹಾಯ ಸಂಘದ ಮಹಿಳಾ ಸದಸ್ಯರಿಂದ ಮಾಹಿತಿ ಪಡೆಯಲಾಗಿದೆ.

ಆನುಷಂಗಿಕ ವಿಧಾನವಾಗಿ ಈಗಾಗಲೇ ನಡೆಸಿರುವ ಕೆಲವೊಂದು ಅಧ್ಯಯನಗಳು, ಪ್ರಕಟಣೆಗೊಂಡಿರುವ ಪುಸ್ತಕಗಳ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ. ಅಲ್ಲದೆ ದಿನಪತ್ರಿಕೆಗಳಲ್ಲಿ ಬರುವ ಮಾಹಿತಿಗಳು, ನಬಾರ್ಡ್‌ನ ವರದಿಗಳು, ಅಂತರ್ಜಾಲ ಇವುಗಳಿಂದ ಕೂಡಾ ಮಾಹಿತಿ ಸಂಗ್ರಹಿಸಲಾಗಿದೆ.

ಈ ಅಧ್ಯಯನದಲ್ಲಿ ಸರಕಾರೇತರ ಸಂಸ್ಥೆಯಾದ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಸಂಘಗಳು, ಸಹಕಾರಿ ಸಂಸ್ಥೆಯ ಅಡಿಯಲ್ಲಿ ಬರುವ ನವೋದಯ ಸ್ವಸಹಾಯ ಸಂಘಗಳು ಹಾಗೂ ಸರಕಾರದ ಯೋಜನೆಯಾದ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳು ಈ ಮೂರು ಗುಂಪುಗಳನ್ನು ಅಧ್ಯಯನ ದೃಷ್ಟಿಯಿಂದ ಆಯ್ಕೆ ಮಾಡಲಾಗಿದೆ. ಈ ಮೂರು ಸಂಘಗಳ ಸದಸ್ಯರನ್ನು ನಮೂನೆಯಲ್ಲಿ ಸೇರಿಸಿಕೊಳ್ಳುವ ಉದ್ದೇಶದಿಂದ ಪ್ರತಿಯೊಂದು ಸಂಘದಿಂದ ಕ್ರಮವಾಗಿ ೩೩, ೩೩, ೩೪ ಹೀಗೆ ಒಟ್ಟು ೧೦೦ ಸದಸ್ಯರನ್ನು ಮಾದರಿ ಸದಸ್ಯರನ್ನಾಗಿ ಆಯ್ಕೆಮಾಡಲಾಗಿದೆ.

ಕೋಷ್ಟಕ

ಸಂಘಗಳ ಹೆಸರು	ಆಯ್ಕೆ ಮಾಡಿದ ಸಂಘಗಳ ಸಂಖ್ಯೆ	ಆಯ್ಕೆ ಮಾಡಿದ ಸದಸ್ಯರ ಸಂಖ್ಯೆ
ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ	೫	೩೩
ನವೋದಯ ಸ್ವಸಹಾಯ ಸಂಘಗಳು	೫	೩೩
ಸ್ತ್ರೀಶಕ್ತಿ ಸ್ವಸಹಾಯ ಸಂಘಗಳು	೫	೩೪
ಒಟ್ಟು ಸಂಖ್ಯೆ	೧೫	೧೦೦

೧.೮ ಅಧ್ಯಯನದ ವ್ಯಾಪ್ತಿ ಹಾಗೂ ಇತಿಮಿತಿಗಳು

ಈ ಅಧ್ಯಯನವು 'ಸ್ವಸಹಾಯ ಸಂಘಗಳು ಮತ್ತು ಮಹಿಳಾ ಸಬಲೀಕರಣ' ಎಂಬ ವಿಷಯಾಧಾರಿತವಾಗಿದ್ದು ಸುಳ್ಯ ತಾಲೂಕು ವ್ಯಾಪ್ತಿಗೆ ಮಾತ್ರ ಸೀಮಿತಗೊಂಡಿದೆ. ಸುಳ್ಯ ತಾಲೂಕಿನ ಎಲ್ಲಾ ಗ್ರಾಮಗಳು ಏಕರೂಪದ ಆರ್ಥಿಕ, ಸಾಮಾಜಿಕ ಸ್ಥಿತಿ ಹೊಂದಿರುವ ಕಾರಣ ಯಾದೃಚ್ಛಿಕವಾಗಿ ನಮೂನೆಗಳನ್ನು ಸಂಗ್ರಹಿಸಲಾಗಿದೆ. ಸಂಘಗಳಿಂದಾಗಿ ಮಹಿಳೆಯರ ಸ್ಥಿತಿಗತಿಗಳಲ್ಲಿ ಆಗಿರುವ ಬದಲಾವಣೆ, ಸ್ವ ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳುವಿಕೆ, ಹಣ ಉಳಿತಾಯದಲ್ಲಿ ಆಗಿರುವ ಬದಲಾವಣೆ ಇವೇ ಮುಂತಾದ ವಿಷಯಗಳ ಕುರಿತಾಗಿ ಅಧ್ಯಯನನಡೆಸಲಾಗಿದೆ.

೧.೯ ಅಧ್ಯಾಯಗಳು- ಸಂಶೋಧನಾ ಪ್ರಬಂಧದ ಸ್ವರೂಪ

ಅಧ್ಯಯನದಲ್ಲಿ ಕಂಡುಬಂದ ಅಂಶಗಳನ್ನು ಸೇರಿಸಿ ರೂಪಿಸುವ ಈ ಪ್ರಬಂಧವು ಐದು ಅಧ್ಯಾಯಗಳನ್ನು ಒಳಗೊಂಡಿದೆ.

ಅಧ್ಯಾಯ ೧	‘ಪೀಠಿಕೆ, ಅಧ್ಯಯನದ ಸ್ವರೂಪ’ ಈ ಅಧ್ಯಾಯದಲ್ಲಿ ಅಧ್ಯಯನದ ವಿಷಯದ ಕುರಿತು ಮಾಹಿತಿ, ಅಧ್ಯಯನ ಕ್ಷೇತ್ರ, ಅಧ್ಯಯನದ ಉದ್ದೇಶಗಳು, ವಿಧಾನ, ಇತಿಮಿತಿಗಳನ್ನು ಹೇಳಲಾಗಿದೆ.
ಅಧ್ಯಾಯ ೨	‘ಸ್ವಸಹಾಯ ಸಂಘಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ’ ಈ ಅಧ್ಯಾಯದಲ್ಲಿ ಸ್ವಸಹಾಯ ಸಂಘಗಳು ಬೆಳೆದು ಬಂದ ಹಾದಿ, ಭಾರತ ಹಾಗೂ ಕರ್ನಾಟಕದಲ್ಲಿನ ಸ್ಥಿತಿಗತಿ, ಮಹಿಳಾ ಸಬಲೀಕರಣಕ್ಕಾಗಿ ಹಮ್ಮಿಕೊಂಡ ಅಭಿವೃದ್ಧಿ ಯೋಜನೆಗಳ ಕುರಿತಾಗಿ ಬೆಳಕು ಚೆಲ್ಲಲಾಗಿದೆ.
ಅಧ್ಯಾಯ ೩	‘ಸುಳ್ಯ ತಾಲೂಕಿನಲ್ಲಿ ಸ್ವಸಹಾಯ ಸಂಘಗಳು’ ಈ ಅಧ್ಯಾಯದಲ್ಲಿ ಅಧ್ಯಯನ ಪ್ರದೇಶವಾದ ಸುಳ್ಯ ತಾಲೂಕಿನ ಪ್ರದೇಶ ಪರಿಚಯ ಮಾಡಲಾಗಿದೆ. ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಸ್ತ್ರೀಶಕ್ತಿ ಯೋಜನೆ, ನವೋದಯ ಸ್ವಸಹಾಯ ಸಂಘಗಳು ಇವುಗಳ ಕುರಿತಾಗಿ ವಿವರಣೆ ನೀಡಲಾಗಿದೆ. ಮಾದರಿಗಳನ್ನು ಯಾವ ರೀತಿ ಆಯ್ಕೆ ಮಾಡಿದೆ ಎಂದು ಹೇಳುತ್ತಾ ಆಯ್ಕೆ ಮಾಡಿದ ನಮೂನೆ ಸದಸ್ಯರ ಸ್ಥೂಲ ಪರಿಚಯ ಮಾಡಲಾಗಿದೆ.
ಅಧ್ಯಾಯ ೪	‘ಸ್ವಸಹಾಯ ಸಂಘಗಳು ಮತ್ತು ಮಹಿಳಾ ಸಬಲೀಕರಣ, ವಿಶ್ಲೇಷಣೆ’ ಈ ಅಧ್ಯಾಯದಲ್ಲಿ ಮುಖ್ಯವಾಗಿ ಸುಳ್ಯ ತಾಲೂಕಿನ ಕ್ಷೇತ್ರಕಾರ್ಯದ ಬಗ್ಗೆ ವಿಶ್ಲೇಷಣೆ ನಡೆಸಲಾಗಿದೆ. ಅಲ್ಲದೆ ಸರಕಾರ ಹಾಗಾ ಸರಕಾರೇತರ ಸಂಘಗಳ ನಡುವಿನ ತುಲನಾತ್ಮಕ ಅಧ್ಯಯನ ನಡೆಸಲಾಗಿದೆ. ಸಂಗ್ರಹಿಸಿದ ದತ್ತಾಂಶಗಳ ವಿಶ್ಲೇಷಣೆ ಮಾಡಲಾಗಿದೆ.
ಅಧ್ಯಾಯ ೫	‘ಸಾರಾಂಶ, ಉಪಸಂಹಾರ’ ಈ ಅಧ್ಯಾಯದಲ್ಲಿ ಅಧ್ಯಯನದ ಒಟ್ಟು ಸಾರಾಂಶ, ಪ್ರಮುಖವಾಗಿ ಅಧ್ಯಯನದ ಶೋಧ ಮತ್ತು ನಿರ್ಣಯಗಳನ್ನು ಹೇಳಲಾಗಿದೆ. ಸಮಸ್ಯೆಗಳಿದ್ದಲ್ಲಿ ಪರಿಹಾರಕ್ಕೆ ಸಲಹೆ ನೀಡಲಾಗಿದೆ ಹಾಗೂ ಆಕರ ಗ್ರಂಥಗಳ ಬಗ್ಗೆ ತಿಳಿಸಲಾಗಿದೆ.

ಒಟ್ಟಿನಲ್ಲಿ ಹೇಳುವುದಾದರೆ ಈ ಅಧ್ಯಯನದಲ್ಲಿ ಸುಳ್ಯ ತಾಲೂಕಿಲ್ಲಿ ಸರಕಾರ ಮತ್ತು ಸರಕಾರೇತರ ಸ್ವಸಹಾಯ ಸಂಘಗಳು ಯಾವರೀತಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ ಎಂದು ತಿಳಿಯಲಾಗಿದೆ. ಗ್ರಾಮೀಣ ಮಹಿಳೆಯರ ಬದುಕಿನಲ್ಲಿ ಆಶಾಕಿರಣವಾಗಿ ಒದಗಿಬಂದ ನೆಲೆಗಳನ್ನು

ಲಭ್ಯಮಾಹಿತಿಗಳು ಮತ್ತು ದತ್ತಾಂಶಗಳ ಮೂಲಕ ವಿಶ್ಲೇಷಿಸಲಾಗಿದೆ. ಬಡತನದಂತಹ ಸಮಸ್ಯೆಗಳು ಗ್ರಾಮೀಣ ಭಾಗದ ಜನರಲ್ಲಿ ಸಾಮಾನ್ಯವಾಗಿ ಕಂಡುಬಂದರೂ ಸ್ವಸಹಾಯ ಸಂಘಗಳು ಈ ಸಮಸ್ಯೆ ಪರಿಹಾರಕ್ಕೆ ಯಾವ ರೀತಿ ಸಹಾಯಕವಾಗಿದೆ ಎಂದು ಕಂಡುಕೊಳ್ಳಲಾಗಿದೆ.

ಅಧ್ಯಾಯ ೨

ಸ್ವಸಹಾಯ ಸಂಘಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣದ ಪರಿಕಲ್ಪನೆ

೨.೧ ಸ್ವಸಹಾಯ ಸಂಘಗಳು ಬೆಳೆದು ಬಂದ ಹಾದಿ

ಗ್ರಾಮೀಣಾಭಿವೃದ್ಧಿಗೆ, ವಿಶೇಷವಾಗಿ ದುರ್ಬಲವರ್ಗಗಳಿಗೆ ಸಾಲ ಸೌಲಭ್ಯವನ್ನು ಒದಗಿಸುವ ಸಲುವಾಗಿ ಭಾರತ ಸ್ವಾತಂತ್ರ್ಯಾನಂತರ ೧೯೬೯ರಲ್ಲಿ ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಲಾಯಿತು. ಬ್ಯಾಂಕುಗಳ ಕಾರ್ಯಕ್ಷೇತ್ರಗಳ ವ್ಯಾಪ್ತಿಯನ್ನು ವಿಸ್ತಾರಗೊಳಿಸಲಾಯಿತು. ಭಾರತದ ಅರ್ಥವ್ಯವಸ್ಥೆಯ ಕೇಂದ್ರ ಬಿಂದು ಗ್ರಾಮೀಣ ಪ್ರದೇಶ. ಗಾಮೀಣ ಪ್ರದೇಶದ ಜನರಿಗೆ ಮೂಲಭೂತ ಅವಶ್ಯಕತೆಗಳಿಗೆ ಬೇಕಾಗುವಷ್ಟು ಹಣಕಾಸನ್ನು ಕಡಿಮೆ ಬಡ್ಡಿದರದಲ್ಲಿ ಪೂರೈಸಲು ವಾಣಿಜ್ಯ ಬ್ಯಾಂಕುಗಳಿಗೆ ಸಾಧ್ಯವಾಗಲಿಲ್ಲ. ಆದುದರಿಂದ ಆರ್ಥಿಕ ವ್ಯವಸ್ಥೆಯ ಹಿತದೃಷ್ಟಿಯಿಂದ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ೧೯೭೫ ರಲ್ಲಿ ಸ್ಥಾಪಿಸಲಾಯಿತು. ಆದರೂ ಸಹ ಗ್ರಾಮೀಣ ಜನರಿಗೆ ಸಾಕಾಗುವಷ್ಟು ಬ್ಯಾಂಕಿಂಗ್ ಸೌಲಭ್ಯ ಒದಗಿಸಲು ಅನಿವಾರ್ಯ ಕಾರಣಗಳಿಂದಾಗಿ ಸಾಧ್ಯವಾಗಲಿಲ್ಲ. ಇದರ ಪ್ರತಿಫಲವಾಗಿ ಸ್ವಸಹಾಯ ಸಂಘಗಳನ್ನು ಪ್ರೋತ್ಸಾಹಿಸಿ ಆ ಮೂಲಕ ಸಹಾಯ ಮಾಡುವ ನಿರ್ಧಾರ ಕೈಗೊಳ್ಳಲಾಯಿತು.

ಬ್ಯಾಂಕ್ ಸಾಲಗಳು ಸಮರ್ಪಕವಾಗಿ ದೊರೆಯದೆ, ಗ್ರಾಮೀಣ ಜನರು ಸಾಹುಕಾರರ ಬಳಿ ಸಾಲ ಪಡೆದು ಹೆಚ್ಚಿನ ಸಂಕಷ್ಟಕ್ಕೆ ಒಳಗಾಗುವ ಪ್ರವೃತ್ತಿ ಇತ್ತು. ಇದನ್ನು ತಪ್ಪಿಸುವ ಸಲುವಾಗಿ ಸ್ವಸಹಾಯ ಸಂಘಗಳ ಬ್ಯಾಂಕ್ ಸಂಪರ್ಕ ಯೋಜನೆಯು ಅನಿವಾರ್ಯವೂ ಹಾಗೂ ಅಗತ್ಯವೂ ಆಯಿತು. ಹೀಗಾಗಿ ೯ನೇ ಪಂಚವಾರ್ಷಿಕ ಯೋಜನೆಯಲ್ಲಿ ಸ್ವಸಹಾಯ ಗುಂಪುಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಯಿತು.

ಸಾಮಾನ್ಯವಾಗಿ ಸಮಾನ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯುಳ್ಳ ೧೦ ರಿಂದ ೨೦ ಸದಸ್ಯರನ್ನೊಳಗೊಂಡ ಒಂದು ಗುಂಪನ್ನು 'ಸ್ವಸಹಾಯ ಸಂಘ' ಎಂದು ಕರೆಯಾಲಾಗುವುದು. ಈ ಗುಂಪು ತನ್ನದೇ ಆದ ಧ್ಯೇಯೋದ್ದೇಶಗಳು, ನೀತಿ ನಿಯಮಗಳು, ಪ್ರಯತ್ನಗಳನ್ನು ಹೊಂದಿ ಕಾರ್ಯನಿರ್ವಹಿಸುತ್ತದೆ. ಎಲ್ಲಾ ಸದಸ್ಯರು ತಾವು ಗಳಿಸುವ ಆದಾಯದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಉಳಿತಾಯ ಮಾಡಿ ನಿಧಿಯನ್ನು ರಚಿಸುತ್ತಾರೆ. ಹೀಗೆ ತಮ್ಮದೇ ಆದ ಬಂಡವಾಳವನ್ನು ಸಂಘದಲ್ಲಿ

ಬೆಳೆಸಿಕೊಂಡು ತಮ್ಮ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ನಿರ್ದಿಷ್ಟವಾದ ಉದ್ದೇಶಗಳನ್ನು ಸಾಧಿಸಲು ಸಂಘ ಪ್ರಯತ್ನಿಸುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಬಡಜನರಲ್ಲಿ ಉಳಿತಾಯದ ಮನೋಭಾವನೆಯನ್ನು ಮೂಡಿಸಿ, ಅವರ ಸಂಕಷ್ಟಗಳಿಗೆ ಧನಸಹಾಯವನ್ನು ಮಾಡುವ ಮೂಲಕ ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುವ ಪರಿಕಲ್ಪನೆಯನ್ನು ಸ್ವಸಹಾಯ ಸಂಘಗಳು ಹೊಂದಿವೆ.

ಭಾರತ ಸರಕಾರ ಹಾಗೂ ಕರ್ನಾಟಕ ಸರಕಾರಗಳ ಜಂಟಿ ಸಹಯೋಗದ ಒಂದು ವಿಶಿಷ್ಟಯೋಜನೆ ಸ್ವರ್ಣಜಯಂತಿ ರೋಜ್‌ಗಾರ್ ಯೋಜನೆ. ಈ ಯೋಜನೆಯ ಅಡಿಯಲ್ಲಿ ಸ್ವಸಹಾಯ ಗುಂಪುಗಳಿಗೆ ಆದ್ಯತೆಯನ್ನು ನೀಡಲಾಗಿದೆ. ಸ್ವರ್ಣಜಯಂತಿ ರೋಜ್‌ಗಾರ್ ಯೋಜನೆಯು ಸಾಮಾಜಿಕ ಪ್ರಕ್ರಿಯೆಯಾಗಿದ್ದು ಬಡತನ ನಿರ್ಮೂಲನೆಯೇ ಮುಖ್ಯ ಗುರಿಯಾಗಿದೆ. ಸ್ವಯಂ ಪ್ರೇರಣೆಯಿಂದ ಬಡತನ ನಿರ್ಮೂಲನೆ ಸಾಧ್ಯ ಎಂದು ಈ ಯೋಜನೆಯು ತಿಳಿಸುತ್ತದೆ. ಈ ನಿಟ್ಟಿನಲ್ಲಿ ಸ್ವಸಹಾಯ ಸಂಘಗಳು ಕಾರ್ಯನಿರ್ವಹಿಸುತ್ತವೆ.

ಸ್ವಸಹಾಯ ಸಂಘಟನೆಯೆಂದರೆ ಏಕರೂಪದ ಸಾಮಾಜಿಕ, ಆರ್ಥಿಕ ಹಿನ್ನೆಲೆಯುಳ್ಳ ಗ್ರಾಮೀಣ ಜನರ (ಬಡವರ) ಒಂದು ಸ್ವಯಂ ಪ್ರೇರಿತವಾದ ಗುಂಪು. ಪರಸ್ಪರ ಒಬ್ಬರಿಂದೊಬ್ಬರು ಸಹಕಾರದ ಮೂಲಕ ಸಮಸ್ಯೆ ನಿವಾರಣೆಗಾಗಿ ಗುಂಪಿನಲ್ಲಿ ಒಟ್ಟು ಸೇರುತ್ತಾರೆ. ಸ್ವಸಹಾಯ ಸಂಘಗಳಿಗೆ ತನ್ನದೇ ಆದ ಐತಿಹಾಸಿಕ ಹಿನ್ನೆಲೆ ಇದೆ. ೧೯೭೧ರ ಭಾರತ ಪಾಕಿಸ್ತಾನ ಯುದ್ಧದಿಂದ ಬಾಂಗ್ಲಾದೇಶದಲ್ಲಿ ವಸತಿ, ಆಹಾರ ಮತ್ತು ಮೂಲಭೂತ ಸೌಕರ್ಯಗಳ ಕೊರತೆ ಉಂಟಾಗಿ ನಿರಾಶ್ರಿತರ ಸಂಖ್ಯೆ ಹೆಚ್ಚಾಗುವ ಭೀತಿ ಉಂಟಾಯಿತು. ಮುಂದೊಂದು ದಿನ ಅನಿಶ್ಚಿತತೆಯ, ಕಗ್ಗತ್ತಲ ಬದುಕು ತಮ್ಮದಾಗಬಹುದೆಂಬ ಕಾರಣದಿಂದಾಗಿ ತಮ್ಮ ಅಸ್ತಿತ್ವ ಮತ್ತು ಉಳಿವಿಗಾಗಿ ದಾರಿಯೊಂದನ್ನು ಹುಡುಕಲು ಪ್ರಾರಂಭಿಸಿದರು. ಆಗ ಅವರಿಗೆ ದಾರಿದೀಪವಾದುದೇ 'ಸ್ವಸಹಾಯ ಸಂಘಗಳ ಕಲ್ಪನೆ'. ಹೀಗೆ ಸ್ವಸಹಾಯ ಸಂಘಗಳು ಬಾಂಗ್ಲಾದೇಶ ಗ್ರಾಮೀಣ ಬ್ಯಾಂಕ್‌ನಲ್ಲಿ ಪ್ರೊ.ಮೊಹಮ್ಮದ್ ಯೂನಸ್‌ರವರ ಮುಖಾಂತರ ಪ್ರಾರಂಭಗೊಂಡಿತು.

ನಂತರದ ದಿನಗಳಲ್ಲಿ ತಮ್ಮಲ್ಲೇ ಗುಂಪುಗಳನ್ನು ರಚಿಸಿಕೊಂಡು ತಾವು ಮಾಡುವ ಸಣ್ಣಪುಟ್ಟ ಕೆಲಸಗಳಿಂದ ದೊರೆತ ಆದಾಯದಲ್ಲಿ ಉಳಿತಾಯ ಮಾಡಲು ಪ್ರಾರಂಭಿಸಿ, ಉಳಿತಾಯ ಮಾಡಿದ ಹಣದಲ್ಲಿ ಗುಂಪಿನ ಸದಸ್ಯರಿಗೆ ಸಾಲ ನೀಡುವ ಕ್ರಮಗಳನ್ನು ಪ್ರಾರಂಭಿಸಿದರು. ಭಾರತದ ಗುಜರಾತ್ ನಲ್ಲಿ ರಾಜ್ಯದ ಹೂ, ತರಕಾರಿಗಳನ್ನು ಮಾರುವ ಅತಿಸಣ್ಣ ವ್ಯಾಪಾರ ವರ್ಗದವರು ಗುಂಪುಗಳನ್ನು ರಚಿಸಿಕೊಂಡು, ಹಣದ ಸಮಸ್ಯೆ ಇರುವವರಿಗೆ ನೆರವನ್ನು ನೀಡುತ್ತಾ ಮತ್ತೆ ಪುನಃ ಸಂಗ್ರಹಿಸುವ ವ್ಯವಸ್ಥೆ ಉಂಟಾಗಿ ಅದು ಸಹ ಸ್ವಸಹಾಯ ಸಂಘಗಳಾಗಿ ಬೆಳೆದಿವೆ.

ಹೀಗೆ ಹಲವು ರೀತಿಯಲ್ಲಿ ಬೆಳವಣಿಗೆ ಹೊಂದುತ್ತಾ ಒಂದಲ್ಲ ಒಂದು ರೂಪದಲ್ಲಿ ಉಂಟಾಗಿ ಅವು ಮುಂದೆ ಒಂದು ವೈಜ್ಞಾನಿಕ ತಳಹದಿಯಲ್ಲಿ ರಚಿತವಾಗಲು ಸಾಧ್ಯವಾಯಿತು. ಅನಂತರ ಕೇಂದ್ರ ಸರಕಾರ, ರಾಜ್ಯ ಸರಕಾರ ಮತ್ತು ಇನ್ನಿತರ ಸಂಘಸಂಸ್ಥೆಗಳು ಬಡತನ ರೇಖೆಯಲ್ಲಿರುವ ಮಹಿಳೆಯರಿಗೆ ಪ್ರೋತ್ಸಾಹ ನೀಡುತ್ತಾ ಅವರನ್ನು ಸ್ವಾವಲಂಬಿಗಳನ್ನಾಗಿಸುವಲ್ಲಿ ಮಹತ್ವದ ಪಾತ್ರವಹಿಸಿದೆ. ಬಡತನ, ಅನಕ್ಷರತೆ ಮುಂತಾದವುಗಳು ಗ್ರಾಮೀಣ ಪ್ರದೇಶದ ಜನರು ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆಗಳಾಗಿವೆ. ಈ ಎಲ್ಲಾ ಸಮಸ್ಯೆಗಳು ಒಬ್ಬ ವ್ಯಕ್ತಿಯಿಂದ ನಿಭಾಯಿಸುವುದು ಕಷ್ಟಸಾಧ್ಯ. ಸಾಮೂಹಿಕ ಪ್ರಯತ್ನ ಇದ್ದಾಗ ಪರಿಹರಿಸಲು ಸಾಧ್ಯ. ಆದುದರಿಂದ ಸ್ವಸಹಾಯ ಸಂಘಗಳು ಈ ಎಲ್ಲಾ ಬದಲಾವಣೆಗೆ ಒಂದು ಮಾಧ್ಯಮವಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಬಡತನ, ತಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳಲು ತಾವೇ ಸ್ವಯಂ ಪ್ರೇರಣೆಯಿಂದ ಮುಂದಾಗಿ ಸ್ಥಾಪಿಸಿಕೊಂಡಿರುವ ಸಮೂಹಗಳೇ ಈ ಸ್ವಸಹಾಯ ಸಂಘಗಳು. ಈ ಗುಂಪಿನಲ್ಲಿರುವ ಪ್ರತಿಯೊಬ್ಬ ಸದಸ್ಯರು ತಮ್ಮ ಸಾಮರ್ಥ್ಯಕ್ಕೆ ತಕ್ಕ ಹಾಗೆ ಉಳಿತಾಯವನ್ನು ಮಾಡುತ್ತಾರೆ. ಇಲ್ಲಿರುವ ಮಹಿಳೆಯರು ಸಮಾನಮನಸ್ಕರು. ಪರಸ್ಪರ ಸುಖದುಃಖಗಳಲ್ಲಿ ನೆರವಾಗಬಹುದು ಎನ್ನುವ ರೀತಿಯಲ್ಲಿ ಈ ಸ್ವಸಹಾಯ ಸಂಘಗಳನ್ನು ರೂಪಿಸಿಕೊಂಡವರು. ಗ್ರಾಮೀಣ ಮಹಿಳೆಯರ ಪಾಲಿಗೆ ಈ ಬಗೆಯ ಸ್ವಸಹಾಯ ಸಂಘಗಳ ಆರ್ಥಿಕ ಅಭ್ಯುದಯದ ಕೇಂದ್ರಗಳಾಗಿವೆ.

ಗ್ರಾಮೀಣ ಮಹಿಳೆಯರಿಗೆ ಸ್ವಸಹಾಯ ಸಂಘಗಳು ಆರ್ಥಿಕ ಉನ್ನತಿಯ ವೇದಿಕೆಯಾಗಿದೆ ಎಂದರೆ ತಪ್ಪಾಗಲಾರದು. ಈ ಗುಂಪು ಯೋಜನೆಯು ಬಡತನ ನಿವಾರಣೆಯ ಸಂಕಲ್ಪಹೊಂದಿದೆ. ಮಹಿಳೆಯರಿಗೆ ತಮ್ಮ ಆರ್ಥಿಕ ಹಾಗೂ ಸಾಮಾಜಿಕ ಉನ್ನತಿಯನ್ನು ಸಾಧಿಸಲು ಇಲ್ಲಿ ಹೇರಳವಾದ ಅವಕಾಶಗಳಿರುತ್ತದೆ. ಸ್ವಸಹಾಯ ಸಂಘ ಎಂಬುದು ಸಮಾನ ಮನಸ್ಕರಾದ, ಸಮಾನ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯುಳ್ಳ ಮತ್ತು ಸಮಾನ ಹಿತಾಸಕ್ತಿಯನ್ನು ಹೊಂದಿರುವ ಜನರ ಸಮೂಹವಾಗಿರುತ್ತದೆ.

ಈ ಬಗೆಯ ಗುಂಪು ರೂಪಧಾರಣೆ ಮೊದಲು ಬಾಂಗ್ಲಾದೇಶದಲ್ಲಿ ಆರಂಭವಾಯಿತಾದರೂ ನಮ್ಮಲ್ಲಿಯೂ ಇಂದು ಅದು ವಿಶೀಷ್ಟವಾದ ಮಾದರಿಯಲ್ಲಿ ಪ್ರಗತಿ ಹೊಂದುತ್ತಾ ನಡೆದಿದೆ. ಭಾರತೀಯ ಮಾದರಿಯಲ್ಲಿ ಉಳಿತಾಯಕ್ಕೆ ಮಹತ್ವ ಕೊಡಲಾಗಿದೆ. ಇನ್ನು ಮಹಿಳಾ ಸಬಲೀಕರಣದಲ್ಲಿ ಈ ಸ್ವಸಹಾಯ ಸಂಘಗಳ ಪಾತ್ರ ತುಂಬಾ ಮುಖ್ಯವಾದುದು ಎನ್ನುವುದಕ್ಕೆ ಹಲವಾರು ನಿದರ್ಶನಗಳಿವೆ.

- ಆರ್ಥಿಕ ಸುಭದ್ರ'ತೆ ಮತ್ತು ಸಂಪನ್ಮೂಲಗಳ ಮೇಲೆಹಿಡಿತ.
- ಆರ್ಥಿಕ ನಿರ್ಧಾರ ಕೈಗೊಳ್ಳುವಲ್ಲಿ ಮಹತ್ವದ ಪಾತ್ರ.
- ವೈಯಕ್ತಿಕ ಅಭ್ಯುದಯಕ್ಕೆ ಸಹಕಾರಿ
- ಸಾಮಾಜಿಕ, ರಾಜಕೀಯ ಸ್ಥಾನಮಾನ ಗಳಿಸಲು ಸಹಕಾರಿ
- ಕೌಶಲ್ಯ ಅಭಿವೃದ್ಧಿ, ನಾಯಕತ್ವಗುಣ ಬೆಳವಣಿಗೆಗೆ ಸಹಕಾರಿ
- ಕೌಟುಂಬಿಕ ಯೋಗ ಕ್ಷೇಮದ ಮೇಲೆ ಪ್ರಭಾವ ಬೀರುತ್ತದೆ

ಭಾರತವು ಹಳ್ಳಿಗಳ ದೇಶ. ಇಲ್ಲಿನ ಗ್ರಾಮೀಣ ಜನರು ಬಡತನ, ಅನಕ್ಷರತೆ, ನಿರುದ್ಯೋಗ ಹಸಿವು, ಆರೋಗ್ಯ, ನೈರ್ಮಲ್ಯದ ಕುರಿತಾದ ಅರಿವಿನ ಕೊರತೆ ಇವೇ ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಎಲ್ಲ ಸಮಸ್ಯೆಗಳನ್ನು ಮಾನವ ಒಂಟಿಯಾಗಿ ನಿಭಾಯಿಸಲಾರ. ಏಕೆಂದರೆ ಮಾನವ ಸಂಘಜೀವಿ. ಎಲ್ಲರೂ ಒಟ್ಟಾಗಿ ಗುಂಪು ಸೇರಿದಾಗ ಇಂತಹ ಸಮಸ್ಯೆಗಳಿಗೆ ಪರಿಹಾರ ಕಂಡು ಕೊಳ್ಳಲು ಸಾಧ್ಯ. ಹಾಗಾಗಿ ಸ್ವಸಾಹಯ ಸಂಘಗಳು ಬಡವರ ಹಾಗೂ ಬಡತನದ ಅಂಚಿನಲ್ಲಿರುವ ಜನರ

ಕಷ್ಟ ನಿವಾರಣೆಯ ಪ್ರಮುಖ ಮಾಧ್ಯಮವಾಗಿದೆ ಎನ್ನಬಹುದು. ಇದು ಸರಕಾರ ಹಾಗೂ ಸರಕಾರೇತರ ಸಂಸ್ಥೆಗಳಿಂದ ನಡೆಸಲ್ಪಡುವ ಒಂದು ವ್ಯವಸ್ಥೆ. ಇಲ್ಲಿ ಜನರು ತಮ್ಮ ಹಣವನ್ನು ಬ್ಯಾಂಕ್ ಗಳಲ್ಲಿ ಉಳಿತಾಯ ಮಾಡಿ ಅತ್ಯಂತ ಕಡಿಮೆ ಬಡ್ಡಿದರದಲ್ಲಿ ಸಾಲವನ್ನು ಪಡೆದು ಸ್ವ ಉದ್ಯೋಗ ಹಾಗೂ ಇತರ ಅವಶ್ಯಕತೆಗಳಿಗೆ ಉಪಯೋಗಿಸುತ್ತಾರೆ.

ರಾಷ್ಟ್ರದ ಬಹುತೇಕ ಸ್ವಸಹಾಯ ಸಂಘಗಳು ದಕ್ಷಿಣ ಭಾರತದಲ್ಲಿ ಕೇಂದ್ರೀಕೃತಗೊಂಡಿದೆ. ಸುಮಾರು ೨೯೦೦೦ಕ್ಕಿಂತಲೂ ಅಧಿಕ ಸಂಘಗಳು ಆಂಧ್ರಪ್ರದೇಶ ರಾಜ್ಯವೊಂದರಲ್ಲೇ ಕಾರ್ಯನಿರತವಾಗಿದೆ. ಹಾಗೆಯೇ ಎರಡನೇ ಸ್ಥಾನವನ್ನು ತಮಿಳುನಾಡು, ಮೂರನೇ ಸ್ಥಾನವನ್ನು ಕರ್ನಾಟಕ ಹಾಗೂ ನಾಲ್ಕನೇ ಸ್ಥಾನವನ್ನು ಮಹಾರಾಷ್ಟ್ರ ಪಡೆದುಕೊಂಡಿದೆ. ಸುಮಾರು ಶೇ.೯೦ರಷ್ಟು ಗುಂಪುಗಳು ಮಹಿಳಾ ಸದಸ್ಯರ ಗುಂಪುಗಳಾಗಿರುವುದು ಇಲ್ಲಿ ವಿಶೇಷ. ಆಧುನಿಕ ಆರ್ಥಿಕತೆಯಲ್ಲಿ ಬಡತನ ನಿರ್ಮೂಲನೆ ಹಾಗೂ ಮಹಿಳಾ ಸಬಲೀಕರಣಕ್ಕೆ ಕಿರು ಹಣಕಾಸು ಒಂದು ಅತ್ಯಂತ ಪ್ರಭಾವಶಾಲಿ ಮಾಧ್ಯಮವಾಗಿದೆ. ಕಿರುಹಣಕಾಸು ವ್ಯವಸ್ಥೆ ಗ್ರಾಮೀಣ ಅಭಿವೃದ್ಧಿಗೆ ಪೂರಕವಾದ ಮತ್ತು ಸೂಕ್ತವಾದ ಹಣಕಾಸು ವ್ಯವಸ್ಥೆಯಾಗಿ ಮೂಡಿಬಂದಿವೆ. ಭಾರತದೇಶದಲ್ಲಿ ಗ್ರಾಮೀಣ ಅಭಿವೃದ್ಧಿಗೆ ಹಣಕಾಸು ವ್ಯವಸ್ಥೆಯನ್ನು ಒದಗಿಸಲು ಸ್ವಾತಂತ್ರ್ಯದ ಬಳಿಕ ಅನೇಕ ಪ್ರಯತ್ನಗಳನ್ನು ಮಾಡಲಾಗಿದೆ. ಸಹಕಾರಿ ಸಂಘಗಳನ್ನು ವೃದ್ಧಿಪಡಿಸುವುದು, ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸುವುದು, ಗ್ರಾಮೀಣ ಬ್ಯಾಂಕುಗಳನ್ನು ಪ್ರಾರಂಭಿಸುವುದು, ನಬಾರ್ಡ್ ಎನ್ನುವ ಸಂಸ್ಥೆಯನ್ನು ಸ್ಥಾಪಿಸಿರುವುದು ಹೀಗೆ ಪಂಚವಾರ್ಷಿಕ ಯೋಜನೆಗಳಲ್ಲಿ ಗ್ರಾಮಾಭಿವೃದ್ಧಿಗೋಸ್ಕರ ಹಣಕಾಸು ಸೌಲಭ್ಯವನ್ನು ಒದಗಿಸುವ ಅನೇಕ ಪ್ರಯತ್ನಗಳನ್ನು ಮಾಡಲಾಗಿದೆ. ವಿವಿಧ ಗ್ರಾಮಾಭಿವೃದ್ಧಿ ಯೋಜನೆಗಳಿಗೆ ವಾಣಿಜ್ಯ ಬ್ಯಾಂಕುಗಳ ಮೂಲಕ ಹಣಕಾಸನ್ನು ಒದಗಿಸಲಾಗಿದೆ. ಆದರೆ ೧೯೯೧ರ ಹೊಸ ಆರ್ಥಿಕ ನೀತಿಯ ಬಳಿಕ ಹಣಕಾಸು ಕ್ಷೇತ್ರದಲ್ಲಿ ಆದ ಮಹತ್ತರ ಬದಲಾವಣೆಯಿಂದ ಗ್ರಾಮೀಣ ಅಭಿವೃದ್ಧಿಯ ಹಣಕಾಸು ವ್ಯವಸ್ಥೆಯಲ್ಲಿ ಕೂಡಾ ಇದು ಪರಿಣಾಮ ಬೀರಿದೆ.

೨.೨ ಕಿರುಹಣಕಾಸು ವ್ಯವಸ್ಥೆ

ಕಿರುಹಣಕಾಸು ವ್ಯವಸ್ಥೆಯಲ್ಲಿ ಪ್ರಮುಖವಾಗಿ ಗ್ರಾಮೀಣ ಪ್ರದೇಶದ ಜನರಿಗೆ ಅವರಲ್ಲೂ ಮುಖ್ಯವಾಗಿ ಆರ್ಥಿಕವಾಗಿ ಹಿಂದುಳಿದವರಿಗೆ ಸಾಲ ಮತ್ತು ಉಳಿತಾಯದ ಅಭ್ಯಾಸವನ್ನು ಬೆಳೆಸುವುದಕ್ಕೆ ಹಾಗೂ ಇತರ ಬ್ಯಾಂಕಿಂಗ್ ಸೌಲಭ್ಯವನ್ನು ಒದಗಿಸಲಾಗುತ್ತದೆ. ಕಿರುಹಣಕಾಸು ವ್ಯವಸ್ಥೆಯನ್ನು ಒದಗಿಸುವ ಸಂಸ್ಥೆಗಳಿಗೆ 'ಕಿರುಹಣಕಾಸು ಸಂಸ್ಥೆ' ಎಂದು ಕರೆಯಲಾಗುತ್ತದೆ. ಈ ಸಂಸ್ಥೆಗಳು ಗ್ರಾಮೀಣ ಪ್ರದೇಶದ ತಳಮಟ್ಟದಲ್ಲಿನ ಜನರಿಗೆ ಬ್ಯಾಂಕಿಂಗ್ ಸೌಲಭ್ಯವನ್ನು ಒದಗಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಈ ಕಾರ್ಯವನ್ನು ನಿರ್ವಹಿಸುವಲ್ಲಿ ಸ್ವಸಹಾಯ ಗುಂಪುಗಳು ಮಹತ್ತರವಾದ ಪಾತ್ರ ವಹಿಸುತ್ತವೆ.

ಒಂದು ನಿರ್ದಿಷ್ಟ ಪ್ರದೇಶದಲ್ಲಿ ಒಂದೇ ಆಸಕ್ತಿಯ ಜನರು ಒಟ್ಟು ಸೇರಿ ಒಂದು ಗುಂಪನ್ನು ರಚಿಸಿ ಅದರ ಮೂಲಕ ಹಣಕಾಸು ವ್ಯವಹಾರವನ್ನು ನಡೆಸುತ್ತಾರೆ. ಅಂದರೆ ಉಳಿತಾಯವನ್ನು ಮಾಡಿ ಸಂಗ್ರಹಿಸಲ್ಪಟ್ಟ ಹಣವನ್ನು ಪಕ್ಕದ ಬ್ಯಾಂಕಿನಲ್ಲಿರಿಸಿ ಬಳಿಕ ಆರ್ಥಿಕ ಚಟುವಟಿಕೆಯನ್ನು ಪ್ರಾರಂಭಿಸಲು ಸಾಲವನ್ನು ಪಡೆಯುತ್ತಾರೆ. ಇದರಿಂದ ಒಟ್ಟು ಜವಾಬ್ದಾರಿಯು ಇಡೀ ಗುಂಪಿನದ್ದಾಗಿರುತ್ತದೆ. ಸದಸ್ಯರೆಲ್ಲರೂ ಪರಸ್ಪರ ಸಹಾಯ ಮಾಡಿಕೊಳ್ಳುವುದರಿಂದ ಇಂತಹ ಗುಂಪುಗಳನ್ನು ಸ್ವಸಹಾಯ ಗುಂಪುಗಳನ್ನುತ್ತಾರೆ. ಗ್ರಾಮೀಣ ಮಟ್ಟದಲ್ಲಿ ಈ ಸ್ವಸಹಾಯ ಸಂಘಗಳು ಕಿರುಹಣಕಾಸನ್ನು ನಿರ್ವಹಿಸುವುದರ ಜೊತೆಗೆ ಸದಸ್ಯರಲ್ಲಿ ಉದ್ಯಮಶೀಲತೆಯನ್ನು ಬೆಳೆಸುವುದರ ಮೂಲಕ ಅವರ ಆರ್ಥಿಕ ಶಕ್ತಿಯನ್ನು ಹೆಚ್ಚಿಸುತ್ತಿದೆ.

೧೯೯೧-೯೨ರಲ್ಲಿ ನಬಾರ್ಡ್ ಸ್ವಸಹಾಯ ಸಂಘಗಳಿಗೆ ದೊಡ್ಡಮಟ್ಟನ ಪ್ರೋತ್ಸಾಹ ನೀಡಲು ಪ್ರಾರಂಭಿಸಿತು. ೧೯೯೩ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಸಹ ಸ್ವಸಹಾಯ ಸಂಘಗಳಿಗೆ ಉಳಿತಾಯ ಖಾತೆಯನ್ನು ತೆರೆಯಲು ಅವಕಾಶ ನೀಡಿತು. ಪ್ರಸ್ತುತ ನಬಾರ್ಡ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸಹಕಾರಿ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು, ಸರಕಾರೇತರ ಸಂಸ್ಥೆಗಳು ಸೇರಿದಂತೆ ಹಲವಾರು ಬ್ಯಾಂಕುಗಳು ಸ್ವಸಹಾಯ ಸಂಘಗಳಿಗೆ ಪ್ರೋತ್ಸಾಹ ನೀಡುತ್ತಿವೆ.

೨.೩ ಸ್ವಸಹಾಯ ಸಂಘಗಳಿಗೆ ನಬಾರ್ಡ್ ಬೆಂಬಲ

ಸ್ವಸಹಾಯ ಸಂಘಗಳಿಗೆ ನಬಾರ್ಡ್ ಉತ್ತಮ ಬೆಂಬಲ ನೀಡುತ್ತಾ ಬಂದಿದೆ.

೧. ಬ್ಯಾಂಕುಗಳು ಸ್ವಸಹಾಯ ಸಂಘಗಳಿಗೆ ನೀಡುವ ಸಾಲದ ಮೇಲೆ ವಾರ್ಷಿಕ ೭% ಬಡ್ಡಿದರದಂತೆ ೧೦೦% ಪುನರ್ಧನ ಸಹಾಯ ನೀಡುತ್ತಿದೆ.

೨. ಸಂಪರ್ಕ ಕಾರ್ಯಕ್ರಮ ಹಾಗೂ ಸ್ವಸಹಾಯ ಸಂಘಗಳ ಬಗ್ಗೆ ಬ್ಯಾಂಕ್ ಅಧಿಕಾರಿಗಳ ಅರಿವು ಹೆಚ್ಚಿಸಲು ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತದೆ.

೩. ಕ್ಷೇತ್ರೀಯ ಹಾಗೂ ಪ್ರಾದೇಶಿಕ ಮಟ್ಟದಲ್ಲಿ ಕಾಲಕಾಲಕ್ಕೆ ನಡೆಸುವ ಕಾರ್ಯಗಾರಗಳನ್ನು ಸಂಘಟಿಸುತ್ತಿದೆ.

೪. ಸ್ವಸಹಾಯ ಸಂಘಗಳಿಗೆ ಬ್ಯಾಂಕ್ ಸಂಪರ್ಕ ಕಲ್ಪಿಸುವ ಮೊದಲು ಕಡ್ಡಾಯವಾಗಿ ನೀಡಬೇಕಾದ ತರಬೇತಿ ನಡೆಸಲು ಸ್ವಯಂ ಸೇವಾ ಸಂಸ್ಥೆಗಳಿಗೆ ಧನಸಹಾಯ ನೀಡುತ್ತದೆ.

೫. ಸ್ವಸಹಾಯ ಸಂಘದ ಸದಸ್ಯರು ಸ್ವಂತ ಉದ್ದಿಮೆಗಳನ್ನು ಸ್ಥಾಪಿಸಲು ಪೂರಕವಾಗುವಂತೆ ವಿಶೇಷ ಸಾಲಯೋಜನೆಗಳು ರೂಪಿಸುತ್ತಿದೆ.

೬. ಸ್ವಯಂಸೇವಾ ಸಂಸ್ಥೆ / ಸರಕಾರೇತರ ಸಂಸ್ಥೆಗಳಿಗೆ ತಮ್ಮ ಕುಶಲತೆ ಹಾಗೂ ಬಲವರ್ಧನೆಗೆ ಪೂರಕವಾಗುವ ಕಾರ್ಯಕ್ರಮಗಳಿಗೆ ಧನಸಹಾಯ ನೀಡುತ್ತದೆ.

೭. ಭಾರತೀಯ ರಿಸರ್ವ್ ಬ್ಯಾಂಕ್ ಹಾಗೂ ಸರಕಾರದ ಸಹಯೋಗದ ಮೂಲಕ ಅಗತ್ಯವಾದ ತೀರ್ಮಾನದ ಸುತ್ತೋಲೆಗಳನ್ನು ನೀಡುತ್ತದೆ.

೮. ವಿವಿಧ ಸಂಸ್ಥೆಗಳೊಡನೆ ವಿವಿಧ ಸ್ಥಳಗಳಲ್ಲಿ ಕಾರ್ಯಯೋಜನೆ ರೂಪಿಸುತ್ತದೆ.

೯. ಸಂಪರ್ಕ ಕಾರ್ಯಕ್ರಮ ಸಾಲವಾಗಿ ಅನುಷ್ಠಾನಗೊಳ್ಳಲು ಅನುವಾಗುವಂತೆ ವ್ಯಾವಹಾರಿಕ ತೊಂದರೆಗಳ ಪರಿಹಾರ ಹಾಗೂ ಕಾರ್ಯವಿಧಾನಗಳ ಸರಳೀಕರಣ ಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

೧೦. ಕಾಲ ಕಾಲಕ್ಕೆ ಅಧ್ಯಯನ ಹಾಗೂ ಅಗತ್ಯ ದಾಖಲೀಕರಣ ಮಾಡುತ್ತದೆ.

೨.೪ ಮಹಿಳಾ ಸಬಲೀಕರಣದಲ್ಲಿ ಸ್ವಯಂ ಸೇವಾ ಸಂಸ್ಥೆಗಳು

ಗ್ರಾಮೀಣ ಅಭಿವೃದ್ಧಿ ಬಹು ಆಯಾಮಗಳಿಂದ ಕೂಡಿದಂತಹ ಸಂಗತಿಯಾಗಿದೆ. ಗ್ರಾಮೀಣ ಪ್ರದೇಶದ ಅಭಿವೃದ್ಧಿಯಾಗಬೇಕಾದರೆ ಗ್ರಾಮಗಳ ಉದ್ಧಾರ ಅದಕ್ಕೂ ಮುಖ್ಯವಾಗಿ ಗ್ರಾಮೀಣ ಪ್ರದೇಶದ ಮಹಿಳೆಯರ ಸಬಲೀಕರಣವಾಗಬೇಕು. ಏಕೆಂದರೆ ಮಹಿಳೆ ಸಮಾಜದ ಅತಿ ಮುಖ್ಯ ಅಂಗ. ಸಹಜವಾಗಿ ಗ್ರಾಮೀಣ ಅಭಿವೃದ್ಧಿ ಆಡಳಿತ ನಿರ್ವಹಣೆಯಲ್ಲಿ ಇಂದು ನಾವು ವಿವಿಧ ಸಂಸ್ಥೆಗಳ ಭಾಗವಹಿಸುವಿಕೆಯನ್ನು ಕಾಣಬಹುದಾಗಿದೆ. ಒಂದು ದೇಶದ ಸರಕಾರ ಸಾಂವಿಧಾನಿಕ ಪರಮಾಧಿಕಾರ ಹೊಂದಿರುವುದರಿಂದ ಇತರ ಸಂಸ್ಥೆಗಳಿಂದ ಇದು ಅಭಿವೃದ್ಧಿಯ ಪ್ರಕ್ರಿಯೆಯನ್ನು ಪ್ರಾರಂಭಿಸುವಲ್ಲಿ ಹೆಚ್ಚಿನ ಜವಾಬ್ದಾರಿ ಪಡೆದಿರುತ್ತದೆ. ಆದರೆ ಇಂದು ಮಹಿಳಾ ಸಬಲೀಕರಣದಲ್ಲಿ ಸರಕಾರದ ಜೊತೆಗೆ ಬೇರೆ ಇತರ ಸಂಸ್ಥೆಗಳೂ ಕೈಜೋಡಿಸುತ್ತಿವೆ. ಈ ದಿಸೆಯಲ್ಲಿ ಸಹಕಾರಿ ಸಂಘಟನೆಗಳು, ಕಾರ್ಪೊರೇಟ್ ಸಂಸ್ಥೆಗಳು, ಸ್ವಸಹಾಯ ಸಂಘಗಳು, ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಸರಕಾರೇತರ ಸಂಸ್ಥೆಗಳು ಮಹಿಳಾ ಅಭಿವೃದ್ಧಿ ಯೋಜನೆ ಅನುಷ್ಠಾನ ಗೊಳಿಸುವಲ್ಲಿ ಕ್ರಿಯಾಶೀಲವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆ ಶ್ರೀಮಂತ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಪರಂಪರೆಯನ್ನು ಹೊಂದಿದೆ ಜಿಲ್ಲೆಯಾಗಿದೆ. ಕೈಗಾರಿಕಾ ಚಟುವಟಿಕೆ, ಕೃಷಿ, ವ್ಯಾಪಾರ ಹಾಗೂ ವಾಣಿಜ್ಯೋದ್ಯಮದಲ್ಲಿಯೂ ಈ ಜಿಲ್ಲೆ ಮುಂಚೂಣಿಯಲ್ಲಿದೆ. ಬ್ಯಾಂಕಿಂಗ್ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಈ ಜಿಲ್ಲೆಯ ಹೆಸರು ರಾರಾಜಿಸುತ್ತಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಾರಂಭವಾದ ಸ್ವಯಂ-ಸೇವಾ ಚಟುವಟಿಕೆಯ ಪ್ರಕ್ರಿಯೆ ನಿಧಾನವಾಗಿ ಸಾಂಸ್ಥಿಕ ರೂಪವನ್ನು ಪಡೆಯಲಾರಂಭಿಸಿತು. ಶಿಕ್ಷಣ, ವಸತಿ, ಆರೋಗ್ಯ ಹಾಗೂ ಇನ್ನಿತರ ಮೂಲಭೂತ ಸೌಕರ್ಯ ವಂಚಿತರಾದ ಜನರು ಅದರಲ್ಲೂ ಮುಖ್ಯವಾಗಿ ಮಹಿಳೆಯರ ಶ್ರೇಯಸ್ಸಿಗೆ ಅನೇಕ ಸ್ವಯಂ - ಸೇವಾ ಸಂಸ್ಥೆಗಳು ಗಣನೀಯ ಪ್ರಮಾಣದಲ್ಲಿ ದೇಣಿಗೆ ನೀಡುತ್ತಿವೆ. ಇಂದು ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಸಬಲೀಕರಣದಲ್ಲಿ ಹಲವು ಸ್ವಯಂ ಸೇವಾ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ದಕ್ಷಿಣ ಕನ್ನಡ ಜಿಲ್ಲೆ ಈ ನಿಟ್ಟಿನಲ್ಲಿ ಮುಂಚೂಣಿಯಲ್ಲಿದೆ.

ಮಹಿಳಾ ಸಬಲೀಕರಣ ಹಾಗೂ ಗ್ರಾಮೀಣಾಭಿವೃದ್ಧಿ ಚಟುವಟಿಕೆಯಲ್ಲಿ ಸಕ್ರಿಯವಾಗಿರುವ ಸ್ವಯಂ ಸೇವಾ ಸಂಸ್ಥೆಗಳು

ಈಗಾಗಲೇ ಹೇಳಿರುವಂತೆ ಗ್ರಾಮೀಣಾಭಿವೃದ್ಧಿಗೆ ಮಹಿಳಾ ಸಬಲೀಕರಣ ಅತ್ಯಂತ ಮುಖ್ಯ ಮಾಧ್ಯಮವಾಗಿದೆ. ಹೀಗಾಗಿ ಹಲವಾರು ಸ್ವಯಂ ಸೇವಾ ಸಂಸ್ಥೆಗಳು ಬಹಳ ಸ್ಫೂರ್ತಿದಾಯಕವಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದೆ ಅವುಗಳಲ್ಲಿ ಪ್ರಮುಖವಾದವುಗಳೆಂದರೆ,

- ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಧರ್ಮಸ್ಥಳ.
- ಸ್ವ ಉದ್ಯೋಗ ಹಾಗೂ ಗ್ರಾಮೀಣಾಭಿವೃದ್ಧಿ ತರಬೇತಿಕೇಂದ್ರ, ಉಜಿರೆ.
- ಕೆನರ ಅಭಿವೃದ್ಧಿ ಹಾಗೂ ಶಾಂತಿ ಸಂಘಟನೆ ಮಂಗಳೂರು.
- ನವೋದಯ ಗ್ರಾಮ ವಿಕಾಸ ಟ್ರಸ್ಟ್, ಮಂಗಳೂರು.
- ನಾಗರಿಕ ಸೇವಾ ಟ್ರಸ್ಟ್, ಗುರುನಾಯನಕೆರೆ.
- ಗ್ರಾಮಾಭಿವೃದ್ಧಿ ಹಾಗೂ ತರಬೇತಿ ಸಂಘಗಳ ಒಕ್ಕೂಟ, ಮಂಗಳೂರು.

ಈ ಎಲ್ಲಾ ಸಂಸ್ಥೆಗಳ ಪೈಕಿ ಕೆಲವು ಸೇವಾ ಸಂಸ್ಥೆಗಳು ನಿರ್ದಿಷ್ಟ ಉದ್ದೇಶವನ್ನು ಗುರಿಯಾಗಿರಿಸಿದರೆ, ಇನ್ನು ಕೆಲವು ಸ್ವಉದ್ಯೋಗ, ಕೃಷಿ, ಹಣಕಾಸು ಪೂರೈಕೆ ಮಾನವ ಸಂಪನ್ಮೂಲ ಅಭಿವೃದ್ಧಿ, ಸಾಮಾಜಿಕ ಕಲ್ಯಾಣ, ಆರೋಗ್ಯ ಪುನರ್ವಸತಿ ಈ ಮುಂತಾದ ಉದ್ದೇಶಗಳನ್ನು ಸಾಧಿಸುವುದಕ್ಕೋಸ್ಕರ ಕೆಲಸ ಮಾಡುತ್ತಿದೆ. ಸ್ವಸಹಾಯ ಗುಂಪುಗಳನ್ನು ಸರಕಾರದ ಕಾರ್ಯಕ್ರಮಗಳ ಮೂಲಕ, ಬ್ಯಾಂಕುಗಳ ಮೂಲಕ, ಸ್ವಯಂ ಸೇವಾ ಸಂಘಗಳ ಮೂಲಕ ಪ್ರಾರಂಭಿಸಲಾಗುತ್ತದೆ. ಈ ಸಂಸ್ಥೆಗಳು ಗ್ರಾಮೀಣ ಪ್ರದೇಶದಲ್ಲಿ ಸ್ವಸಹಾಯ ಸಂಘಗಳಿಗೆ ಉತ್ತೇಜನ ಕೊಡುತ್ತವೆ. ಸ್ವಸಹಾಯ ಗುಂಪುಗಳ ಪ್ರಾಯೋಜಕ ಸಂಸ್ಥೆಗಳು, ಜನರಿಗೆ ಉಳಿತಾಯ ಮತ್ತು ಹೂಡಿಕೆಯ ಬಗ್ಗೆ ಮಾಹಿತಿಗಳನ್ನು ನೀಡಿ ಗುಂಪು ಚಟುವಟಿಕೆಯಾಗಿ ಪ್ರಾರಂಭಿಸಲು ಉತ್ತೇಜಿಸುತ್ತದೆ. ಹೀಗೆ ಪ್ರಾರಂಭಗೊಂಡ ಸ್ವಸಹಾಯ ಸಂಘಗಳು

ಮಹಿಳೆಯರಿಗೆ ಸಬಲೀಕರಣಕ್ಕೆ ಸಮಾಜದಲ್ಲಿ ಪುರುಷರಂತೆ ಸರಿಸಮವಾಗಿ ಬಾಳಲು, ಹಕ್ಕು ಕರ್ತವ್ಯಗಳನ್ನು ತಿಳಿಯಲು ಸಹಕಾರಿಯಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಆಯ್ಕೆಗೊಳಿಸಿದ ಪ್ರದೇಶವಾದ ಸುಳ್ಯತಾಲೂಕು ಗ್ರಾಮೀಣ ಪ್ರದೇಶ. ಇಲ್ಲಿ ಪುರುಷರಷ್ಟೇ ಮಹಿಳೆಯರೂ ಇದ್ದಾರೆ. ಗ್ರಾಮೀಣ ಜನರು ಸ್ತ್ರೀಯರಿಗೆ ಅಷ್ಟಾಗಿ ಸ್ಥಾನಮಾನ, ವಿದ್ಯಾಭ್ಯಾಸ ನೀಡುತ್ತಿರಲಿಲ್ಲ. ಆದುದರಿಂದ ಗ್ರಾಮೀಣ ಪ್ರದೇಶಗಳು ಹಿಂದುಳಿದಿದ್ದವು. ಈ ಎಲ್ಲಾ ಸಮಸ್ಯೆಗಳಿಂದ ಮುಕ್ತರಾಗಲು ಸ್ವಸಹಾಯ ಸಂಘಗಳು ದಾರಿದೀಪವಾಗಿದೆ. ಗ್ರಾಮೀಣ ಮಹಿಳೆಯರಿಗೆ ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಬದುಕಲು ಉದ್ಯೋಗ ಅವಶ್ಯಕ. ಉದ್ಯೋಗವು ಮಹಿಳೆಯರಿಗೆ ಆರ್ಥಿಕವಾಗಿ ಸಬಲರಾಗಿ ನಿಲ್ಲಲು ಒಂದು ಅಸ್ತ್ರವಿದ್ದಂತೆ. ಮಹಿಳೆಯರು ಸ್ವಂತ ದುಡಿಮೆಯಿಂದ ತಮ್ಮ ರಕ್ಷಣೆಯನ್ನು ತಾವು ಮಾಡಿಕೊಳ್ಳುವುದರಿಂದ ಸಮಾಜವು ಅವಳ ಸಾಮರ್ಥ್ಯ ಹಾಗೂ ಹಕ್ಕುಗಳನ್ನು ನೆನೆಪಿಸಿಕೊಂಡು ಸಮಾಜದಲ್ಲಿ ಅವಳನ್ನು ಗೌರವದಿಂದ ಕಾಣುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ತಾವು ಬಡತನದಿಂದಾಗಿ ಮಹಿಳೆಯರು ತಮ್ಮ ಉಪಜೀವನವನ್ನು ಸಾಗಿಸಲು ಒಂದಿಲ್ಲೊಂದು ಉದ್ಯೋಗಗಳಲ್ಲಿ ತೊಡಗಿರುತ್ತಾರೆ. ಭಾರತದಲ್ಲಿ ಕೃಷಿಯು ಜೀವನಾಧಾರ ಉದ್ಯೋಗವಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಜನರು ತೊಡಗಿಸಿಕೊಂಡಿರುತ್ತಾರೆ.

ಗ್ರಾಮೀಣ ಪ್ರದೇಶದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಕೃಷಿಯಲ್ಲಿ ತೊಡಗಿದ್ದಾರೆ. ಕೃಷಿ ಸಂಬಂಧಿ ಚಟುವಟಿಕೆಗಳಾದ ಹೈನುಗಾರಿಕೆ, ಕೋಳಿ ಸಾಕಾಣಿಕೆ, ಜೇನು ಸಾಕಾಣಿಕೆ, ತೋಟಗಾರಿಕೆ ಮುಂತಾದುವುಗಳಲ್ಲಿ ಇವರ ಪಾತ್ರ ಪ್ರಮುಖವಾಗಿದೆ. ಮಹಿಳೆಯರು ಇಷ್ಟೊಂದು ಶ್ರಮವಹಿಸಿ ದುಡಿಯುತ್ತಿದ್ದರೂ, ಅವರ ಜೀವನ ಮಟ್ಟದಲ್ಲಿ ಸುಧಾರಣೆಗಳು ಆಗಲಿಲ್ಲ. ಈ ಆಧುನಿಕ ಜಗತ್ತಿನ ವಿದ್ಯಮಾನಗಳನ್ನು ಅರಿಯದವರಾಗಿದ್ದಾರೆ. ಇನ್ನು ಹಳೆಯ ಸಂಪ್ರದಾಯ, ಮೂಢನಂಬಿಕೆಗಳ ಮಿತಿಯಲ್ಲಿ ಹಾಗೂ ಪುರುಷಪ್ರಧಾನ ಸಮಾಜದಲ್ಲಿ ತಮ್ಮ ಸಾಮರ್ಥ್ಯವನ್ನು ಬೆಳಕಿಗೆ ಚೆಲ್ಲದೆ, ಅನೇಕ ಸಮಸ್ಯೆಗಳು ಹಾಗೂ ಶೋಷಣೆಗಳ ಜಾಡ್ಯದಲ್ಲಿ ಜೀವನ ಕಳೆಯುತ್ತಿದ್ದಾರೆ. ಮಹಿಳೆಯರು ಕೃಷಿ ಚಟುವಟಿಕೆಗಳಲ್ಲಿ ಪುರುಷರಷ್ಟೇ ಶ್ರಮವಹಿಸಿ ದುಡಿದರೂ ಅವರಿಗೆ ನೀಡುವ ಕೂಲಿದರ ಮಾತ್ರ ಪುರುಷರಿಂದ ಕಡಿಮೆ.

ಗ್ರಾಮೀಣ ಮಹಿಳೆಯರಿಗೆ ಸಾಮಾಜಿಕ, ಆರ್ಥಿಕ ಸ್ಥಾನಮಾನಗಳನ್ನು ಉನ್ನತ ಸ್ಥಾನಗಳನ್ನು ಕೊಡದೆ ಅನೇಕ ಕ್ಷೇತ್ರಗಳಲ್ಲಿ ತಾರತಮ್ಯ ಮಾಡಲಾಗುತ್ತಿದೆ. ಹೀಗೆ ಈ ಎಲ್ಲಾ ಸಮಸ್ಯೆಗಳಿಂದ, ವ್ಯತ್ಯಾಸಗಳಿಂದ ಹೊರಬಂದು ಸರಿಸಮನಾಗಲು ಮಹಿಳಾ ಸಬಲೀಕರಣ ಅತ್ಯಗತ್ಯವಾಗಿದೆ.

೨.೫ ಮಹಿಳಾ ಸಬಲೀಕರಣದ ಅವಶ್ಯಕತೆ

ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ತಮ್ಮ ರಕ್ಷಣೆಯನ್ನು ಮತ್ತು ಕುಟುಂಬ ರಕ್ಷಣೆಯನ್ನು ಮಾಡಿಕೊಳ್ಳಲು ಅಥವಾ ಕುಟುಂಬದ ಬಡತನವನ್ನು ತಗ್ಗಿಸಲು ಗ್ರಾಮೀಣ ಮಹಿಳಾ ಸಬಲೀಕರಣ ಅತ್ಯಗತ್ಯವಾಗಿದೆ. ಗ್ರಾಮೀಣ ಮಹಿಳೆಯರು ಅನೇಕ ಆರ್ಥಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ದೇಶದ ಆರ್ಥಿಕ ಅಭಿವೃದ್ಧಿಯ ಆಧಾರಸ್ತಂಭವಾಗಿದ್ದಾರೆ. ನಮ್ಮ ಸಮಾಜದಲ್ಲಿ ಆಡಕವಾಗಿರುವ ಮೂಢನಂಬಿಕೆಗಳು, ಅನಕ್ಷರತೆ, ಅಂಧಕಾರಗಳು ಗ್ರಾಮೀಣ ಮಹಿಳೆಯನ್ನು ಸೆದೆಬಡಿಯುತ್ತಿವೆ. ಇತ್ತೀಚೆಗೆ ಮಹಿಳೆಯರನ್ನು ಮುಂದೆ ತರಲು ಅನೇಕ ಅಧ್ಯಯನಗಳು ನಡೆದು ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿದರೂ ಮಹಿಳೆಯರ ಪ್ರಗತಿ ತೀರ ಮಂದಗತಿಯಲ್ಲಿ ಮುಂದುವರೆಯುತ್ತಿದೆ. ಇದಕ್ಕೆ ಮುಖ್ಯ ಕಾರಣಗಳೆಂದರೆ ಕಡಿಮೆ ಶಿಕ್ಷಣ ಮಟ್ಟ, ಹಳೆಯ ಸಾಮಾಜಿಕ ಸಂಪ್ರದಾಯಗಳು, ಕುರುಡ ನಂಬಿಕೆಗಳು, ಸ್ತ್ರೀ ಪುರುಷರಲ್ಲಿ ಭೇದಭಾವ, ಕೂಲಿದರದಲ್ಲಿ ತಾರತಮ್ಯ ಮುಂತಾದವುಗಳು ಮಹಿಳೆಯರ ಅಭಿವೃದ್ಧಿಯಲ್ಲಿ ಮಾರಕಗಳಾಗಿವೆ. ಕೃಷಿಯಲ್ಲಿ ಯಾಂತ್ರೀಕರಣ ಹಾಗೂ ಬೆಳೆ ಮಾದರಿಗಳಲ್ಲಿ ಸಂಪೂರ್ಣ ಬದಲಾವಣೆಗಳಿಂದಾಗಿ ಮಹಿಳೆಯರ ಉದ್ಯೋಗದಲ್ಲಿ ಏರಿಳಿತಗಳು ಉಂಟಾಗಿವೆ. ಮಹಿಳೆಯರಿಗೆ ಯಂತ್ರಗಳ ಪರಿಚಯವಿಲ್ಲ. ಹೊಸ ವಿಜ್ಞಾನದ ಬಗ್ಗೆ ತಿಳಿದಿಲ್ಲ. ತಿಳಿಸುವವರೂ ಇಲ್ಲ. ಹೀಗಾಗಿ ಮಹಿಳೆ ಕಡಿಮೆ ಸಂಬಳದ ಸಾಂಪ್ರದಾಯಿಕ ಉದ್ಯೋಗವನ್ನೇ ಇನ್ನೂ ಅವಲಂಬಿಸಬೇಕಾದ ಪರಿಸ್ಥಿತಿಯಿದೆ ಆಧುನಿಕತೆ ಬಂದಂತೆ ಮಹಿಳೆಯರ ಉದ್ಯೋಗಗಳು ಬಹಳಷ್ಟು ಕಡಿಮೆಯಾಗಿದೆ. ಕಾರಣ ಹೊಸ ತಂತ್ರಜ್ಞಾನ ಬಳಕೆಗೆ ಜ್ಞಾನ ಅಗತ್ಯ ಆದರೆ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ವಿದ್ಯಾಭ್ಯಾಸದ ಕೊರತೆ ಇದೆ. ಆದುದರಿಂದ ಮಹಿಳೆಯರು ಕೂಲಿ ಕಾರ್ಮಿಕರಾಗಿ ಕಡಿಮೆ ಕೂಲಿಗೆ ದುಡಿಯುವ ಪರಿಸ್ಥಿತಿಯು ಮುಂದುವರೆದಿವೆ. ಕೃಷಿಯ ಕೆಲಸದ ಜೊತೆಗೆ

ಅಡುಗೆ, ಮಕ್ಕಳ ಲಾಲನೆ ಪಾಲನೆ, ಜಾನುವಾರುಗಳ ಆರೈಕೆ ಮುಂತಾದ ಅನೇಕ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ. ಆದರೆ ಮನೆಯಲ್ಲಿ ಕೆಲಸ ಮಾಡುವ ಮಹಿಳೆಯರ ಶ್ರಮಕ್ಕೆ ಯಾವುದೇ ರೀತಿಯ ಪ್ರತಿಫಲ ದೊರಿಯುವುದಿಲ್ಲ. ಅಲ್ಲದೇ ಅವರ ಈ ಶ್ರಮವನ್ನು ರಾಷ್ಟ್ರೀಯ ಆದಾಯದಲ್ಲಿ ಗಣನೆಗೆ ತೆಗೆದುಕೊಂಡಿಲ್ಲ. ಹೀಗೆ ಮಹಿಳೆಯರು ಹಗಲು–ರಾತ್ರಿ ಎನ್ನದೇ ಶ್ರಮವಹಿಸಿ ದುಡಿದು ಕುಟುಂಬದ ಆರ್ಥಿಕ ಅಭಿವೃದ್ಧಿಯ ಜೊತೆಗೆ ರಾಷ್ಟ್ರದ ಅಭಿವೃದ್ಧಿಗೆ ತಮ್ಮ ಮಹತ್ವ ಪೂರ್ಣ ಸಾಮರ್ಥ್ಯವನ್ನು ವಿನಿಯೋಗಿಸುತ್ತಿದ್ದಾರೆ.

ಈ ಎಲ್ಲಾ ದೃಷ್ಟಿಯಿಂದ ಇಂದು ಮಹಿಳಾ ಸಬಲೀಕರಣ ಅತ್ಯಗತ್ಯವಾಗಿದೆ. ಮಹಿಳೆಯರು ಪುರುಷರಂತೆ ಸರಿಸಮವಾಗಿ ಬಾಳಲು ಅವಕಾಶ ನೀಡಬೇಕಾಗಿದೆ. ತಮ್ಮ ಹಕ್ಕು ಕರ್ತವ್ಯಗಳನ್ನು ಅರಿತು ಸಮಾಜದಲ್ಲಿ ಅವರಿಗೆ ಸರಿಯಾದ ಸ್ಥಾನಮಾನ ಸಿಗಬೇಕಾದಲ್ಲಿ ಎಲ್ಲರ ಪ್ರೋತ್ಸಾಹ ಅಗತ್ಯ. ಈ ನಿಟ್ಟಿನಲ್ಲಿ ಇಂದು ಸರಕಾರಿ ಹಾಗೂ ಸರಕಾರೇತರ ಸಂಸ್ಥೆಗಳು ಕೈಜೋಡಿಸುತ್ತಾ ಬಂದಿವೆ. ಮೂಲಭೂತ ಸೌಕರ್ಯಗಳಿಂದ ವಂಚಿತರಾದ ಗ್ರಾಮೀಣ ಜನರ ಸಮಸ್ಯೆಗಳನ್ನು ನಿವಾರಿಸುವ ಹಿನ್ನೆಲೆಯಲ್ಲಿ ಭಾರತ ಸರಕಾದ ವಿವಿಧ ಪಂಚವಾರ್ಷಿಕ ಯೋಜನೆಯಲ್ಲಿ ಗ್ರಾಮೀಣಾಭಿವೃದ್ಧಿಯನ್ನು ಸಾಧಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ೧೯೫೧-೫೬ರ ಯೋಜನೆಯಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಯನ್ನು ರೂಪಿಸಿತು. ಮುಂದೆ ೧೯೮೦–೮೫ರಲ್ಲಿ ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆ, ಗ್ರಾಮೀಣ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆ ರೂಪಿಸಿತು. ನಂತರ ೧೯೯೭-೦೨ರಲ್ಲಿ ಸ್ವರ್ಣ ಜಯಂತಿ ಗ್ರಾಮೀಣ ಸ್ವಉದ್ಯೋಗ ಯೋಜನೆಯನ್ನು ಜಾರಿಗೆ ತಂದಿತು. ೨೦೦೨-೨೦೦೭ ರಲ್ಲಿ ಸ್ವರ್ಣ ಜಯಂತಿ ಗ್ರಾಮೀಣ ಸ್ವಉದ್ಯೋಗ ಖಾತರಿ ಯೋಜನೆ ಮೂಲಕ ಮಹಿಳೆಯರಿಗೆ ವರ್ಷಕ್ಕೆ ೧೦೦ ದಿನಗಳ ಉದ್ಯೋಗ ಒದಗಿಸುವ ಯೋಜನೆಯನ್ನು ಜಾರಿಗೆ ತರಲಾಯಿತು. ಸ್ವರ್ಣಜಯಂತಿ ರೋಜ್‌ಗಾರ್ ಯೋಜನೆಯ ಅಡಿಯಲ್ಲಿ ಸ್ವಸಹಾಯ ಸಂಘಗಳನ್ನು ಬಡತನ ನಿವಾರಣಾ ಉದ್ದೇಶದಿಂದ ಜಾರಿಗೊಳಿಸಿದೆ. ಗ್ರಾಮೀಣ ಜನರ ಬವಣೆಯನ್ನು ನೀಗುವುದಕ್ಕೋಸ್ಕರ ಸರಕಾರ ಅನೇಕ ಹೊಸ ಹೊಸ ಅವಿಷ್ಕಾರಕ ಯೋಜನೆಯನ್ನು ಹಮ್ಮಿಕೊಂಡಿದೆ. ಆದರೆ ಕೇವಲ ಸರಕಾರದ ಪ್ರಯತ್ನದಿಂದ

ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಿಲ್ಲ. ಅಭಿವೃದ್ಧಿಯ ವೇಗವನ್ನು ಹೆಚ್ಚಿಸಬೇಕಾದಲ್ಲಿ ಸಮುದಾಯದ ಸಹಭಾಗಿತ್ವ ಅನಿವಾರ್ಯವಾಗಿದೆ. ಇದನ್ನು ಸಾಧಿಸಲು ಸರಕಾರೇತರ ಸಂಸ್ಥೆಯ ಸಹಾಯ ಅತ್ಯಗತ್ಯ. ಈ ನಿಟ್ಟಿನಲ್ಲಿ ಸರಕಾರಿ ಹಾಗೂ ಸರಕಾರೇತರ ಸಂಸ್ಥೆಗಳು ಸ್ವಸಹಾಯ ಸಂಘಗಳನ್ನು ಸ್ಥಾಪಿಸಿ ಮಹಿಳಾ ಸಬಲೀಕರಣಕ್ಕೆ ಪ್ರೋತ್ಸಹ ನೀಡುತ್ತಿವೆ.

ಸ್ವಸಹಾಯ ಸಂಘ ಎಂಬ ಪದವೇ ತಿಳಿಸುವಂತೆ ಒಂದು ನಿರ್ದಿಷ್ಟ ಗುರಿ ಮತ್ತು ಉದ್ದೇಶವನ್ನು ಹೊಂದಿದ್ದು, ತಮಗೆ ತಾವೇ ಸಹಾಯವನ್ನು ಮಾಡಿಕೊಳ್ಳುವುದರ ಮೂಲಕ ಆರ್ಥಿಕವಾಗಿ ಬೆಳೆಯುವ ವ್ಯವಸ್ಥಿತ ಕ್ರಮವೇ ಆಗಿದೆ.

೨.೬ ಮಹಿಳಾ ಸ್ವಸಹಾಯ ಸಂಘಗಳ ಸಾಮಾನ್ಯ ಉದ್ದೇಶಗಳು

ಮಹಿಳೆಯರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬೆಳೆಸಲು ಸ್ವಸಹಾಯ ಸಂಘಗಳು ಇಂದು ಉನ್ನತಕಾರ್ಯನಿರ್ವಹಿಸುತ್ತಿದೆ. ಈ ಸಂಘಗಳು ತನ್ನದೇ ಆದ ಉದ್ದೇಶಗಳನ್ನು ಹೊಂದಿದೆ.

- ಉಳಿತಾಯವನ್ನು ಮಾಡುವುದು ಮತ್ತು ಸಂಗ್ರಹಿಸುವುದು.
- ಸದಸ್ಯರಲ್ಲಿ ಪರಸ್ಪರ ತಿಳುವಳಿಕೆ ಮತ್ತು ಸಹಕಾರ ಭಾವನೆಯನ್ನುಂಟುಮಾಡುವುದು.
- ಸದಸ್ಯರಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಬೆಳವಣಿಗೆಯನ್ನುಂಟುಮಾಡುವುದು.
- ಕಿರು ಉದ್ಯಮವನ್ನು ಸ್ಥಾಪನೆ ಮಾಡುವುದು.
- ಸರ್ವತೋಮುಖ ಬೆಳವಣಿಗೆಯನ್ನು ಸ್ಥಾಪನೆ ಮಾಡುವುದು.

ಈ ರೀತಿಯಾಗಿ ಸ್ವಸಹಾಯ ಸಂಘಗಳು ಹಲವು ರೀತಿಯ ಉತ್ತಮ ಉದ್ದೇಶಗಳ ಅಡಿಯಲ್ಲಿ ಕಾರ್ಯ ನಿರ್ವಹಿಸುವುದರಿಂದ ಯಶಸ್ವಿಯಾಗಿ ಅಭಿವೃದ್ಧಿಹೊಂದಲು ಸಾಧ್ಯವಾಗುತ್ತದೆ.

ಮಹಿಳಾ ಸ್ವಸಹಾಯ ಸಂಘಗಳು ನಿಯಮಗಳು

ಪ್ರತಿಯೊಂದು ಮಹಿಳಾ ಸ್ವಸಹಾಯ ಸಂಘಗಳು ತನ್ನದೇ ಆದ ನಿಯಮ ಮತ್ತು ನಿಬಂಧನಗಳನ್ನು ರಚಿಸಿಕೊಂಡು ಗುಣಾತ್ಮಕವಾಗಿ ಬೆಳೆಯಲು ಸಹಕಾರಿಯಾಗುತ್ತದೆ. ಇದರಿಂದ ಸಂಘವು ಸಹ ಯಾವುದೇ ತೊಂದರೆಗಳಿಗೆ ಒಳಗಾಗದಂತೆ ಬೆಳೆಯಲು ಇದು ಅತ್ಯವಶ್ಯವಾಗಿದೆ.

- ಮಹಿಳಾ ಸ್ವಸಹಾಯ ಸಂಘಗಳು ತನ್ನದೇ ಆದ ಒಂದು ಹೆಸರನ್ನು ಹೊಂದಿರಬೇಕು.
- ಸಂಘದ ಸದಸ್ಯರಾಗಲು ೧೮ ವರ್ಷಕ್ಕೆ ಮೇಲ್ಪಟ್ಟಿರಬೇಕು.
- ಸದಸ್ಯರು ಪ್ರತಿಸಭೆಗೆ ತಪ್ಪದೆ ಹಾಜರಾಗಬೇಕು.
- ನಿಗದಿತ ದಿನದಂದು, ನಿಗದಿತ ಸ್ಥಳದಲ್ಲಿ, ಸರಿಯಾದ ಸಮಯಕ್ಕೆ ಸಭೆಗೆ ಸೇರಬೇಕು.
- ಸಂಘದ ಲೆಕ್ಕ ಪತ್ರಗಳನ್ನು, ವ್ಯವಹಾರದ ಪುಸ್ತಕಗಳನ್ನು ಸದಸ್ಯರೇ ನಿರ್ವಹಿಸಬೇಕು.
- ಉಳಿತಾಯದ ಹಣವನ್ನು ಸಂಘದ ಸದಸ್ಯರೇ ನಿರ್ಧರಿಸಬೇಕು.
- ಸಂಘವು ಪ್ರತಿವಾರ ಕೂಡಿಹಾಕಿದ ಉಳಿತಾಯದ ಹಣವನ್ನು ಬ್ಯಾಂಕಿನಲ್ಲಿರುವ ಗುಂಪಿನ ಖಾತೆಗೆ ಜಮಾ ಮಾಡಬೇಕು.

ಈ ರೀತಿಯಾಗಿ ಮಹಿಳಾ ಸ್ವಸಹಾಯ ಸಂಘಗಳನ್ನು ರಚಿಸಬೇಕಾದಾಗ ಅನೇಕ ರೀತಿಯ ನಿರ್ಬಂಧಗಳು ಹಾಗೂ ನಿಯಮಗಳು ಇರುವುದನ್ನು ಗಮನಿಸಬಹುದಾಗಿದೆ.ಇವುಗಳು ಒಂದು ವ್ಯವಸ್ಥಿತ ಬೆಳವಣಿಗೆಗೆ ಮತ್ತು ಅಭಿವೃದ್ಧಿಗೆ ದಾರಿದೀಪಗಳಾಗಿವೆ. ಈ ರೀತಿಯಾದ ನಿಯಮ ನಿರ್ಬಂಧಗಳನ್ನು ಇಟ್ಟುಕೊಂಡು ಸುಳ್ಯತಾಲೂಕಿನಲ್ಲಿ ಸಹ ಸ್ವಸಹಾಯ ಸಂಘಗಳು ಕಾರ್ಯನಿರತವಾಗಿವೆ. ಒಂದು ನಿರ್ದಿಷ್ಟವಾದ ಚೌಕಟ್ಟನ್ನು ಇಟ್ಟುಕೊಂಡು ಆ ಮೂಲಕ ಇಲ್ಲಿನ ಮಹಿಳೆಯರಿಗೆ ಆಸರೆಯಾಗುತಿದೆ. ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕೆ ಸ್ವಸಹಾಯ ಸಂಘಗಳು ಒಂದು ಉತ್ತಮ ವೇದಿಕೆಯಾಗಿದೆ.

ಅಧ್ಯಾಯ ೩

ಸುಳ್ಯ ತಾಲೂಕಿನಲ್ಲಿ ಸ್ವಸಹಾಯ ಸಂಘಗಳು

೩.೧ ಸುಳ್ಯ ತಾಲೂಕಿನ ಪಕ್ಷಿನೋಟ

೩.೨ ಸ್ತ್ರೀ ಶಕ್ತಿ ಯೋಜನೆ ಸ್ವಸಹಾಯ ಸಂಘಗಳು

೩.೩ ನವೋದಯ ಸ್ವಸಹಾಯ ಸಂಘಗಳು

೩.೪ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ

೩.೫ ಅಧ್ಯಯನಕ್ಕೆ ಸಂಬಂಧಿಸಿದಂತೆ ಮಾದರಿಗಳ ಆಯ್ಕೆ

೩.೧ ಸುಳ್ಯ ತಾಲೂಕಿನ ಪಕ್ಷಿನೋಟ

ದಕ್ಷಿಣ ಕನ್ನಡ ಜಿಲ್ಲೆಯು ಕರ್ನಾಟಕದ ಕಡಲಕಿನಾರೆಯನ್ನು ಹೊಂದಿದ ಜಿಲ್ಲೆಗಳ ಪೈಕಿ ಒಂದಾಗಿದೆ. ಈ ಜಿಲ್ಲೆಯು ತನ್ನದೇ ಆದ ಇತಿಹಾಸವನ್ನು ಹೊಂದಿದೆ. ೧೫೬೦ರಲ್ಲಿ ಈ ಜಿಲ್ಲೆಯು ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಆ ನಂತರ ೧೭೬೩ರಲ್ಲಿ ಹೈದರಾಲಿಯು ಮೈಸೂರು ರಾಜ್ಯಕ್ಕೆ ಈ ಜಿಲ್ಲೆಯನ್ನು ಸೇರಿಸಿದನು. ಆ ಬಳಿಕ ಆತನ ಮಗನಾದ ಟಿಪ್ಪುಸುಲ್ತಾನನು ಈ ಜಿಲ್ಲೆಯನ್ನು ಆಳುತ್ತಿದ್ದು ೧೭೯೯ರ ಮೈಸೂರು ಕದನದ ಬಳಿಕ ಇದು ಕರ್ನಾಟಕದ ೨೦ಜಿಲ್ಲೆಗಳಲ್ಲಿ ಒಂದಾಗಿ ಅಸ್ತಿತ್ವಕ್ಕೆ ಬಂದಿತು. ೧೯೯೭ ರಲ್ಲಿ ಜಿಲ್ಲೆಯು ವಿಭಜಿಸಲ್ಪಟ್ಟು ಪ್ರತ್ಯೇಕ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಾಗಿ ರೂಪುಗೊಂಡಿತು.

ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರಾಕೃತಿಕವಾಗಿ ಕರಾವಳಿ ಪ್ರದೇಶ, ಒಳನಾಡು ಪ್ರದೇಶ ಹಾಗೂ ಪಶ್ಚಿಮ ಘಟ್ಟಗಳ ಪ್ರದೇಶ ಎಂದು ಮೂರು ವಿಭಾಗಗಳಾಗಿ ವಿಂಗಡಿಸಬಹುದು. ಆಡಳಿತಾತ್ಮಕವಾಗಿ ಬಂಟ್ವಾಳ, ಬೆಳ್ತಂಗಡಿ, ಮಂಗಳೂರು, ಪುತ್ತೂರು ಹಾಗೂ ಸುಳ್ಯ ಹೀಗೆ ಐದು ತಾಲೂಕುಗಳಾಗಿ ವಿಂಗಡಿಸಲಾಗಿದೆ. ಪಶ್ಚಿಮ ಘಟ್ಟ ಪ್ರದೇಶವು ಕಾಡುಗಳಿಂದ ಆವರಿಸಲ್ಪಟ್ಟು ಸದಾಕಾಲ ಹಚ್ಚ ಹಸುರಿನಿಂದ ಕಂಗೊಳಿಸುತ್ತಿದ್ದು ಸುಳ್ಯ ತಾಲೂಕಿನ ಹೆಚ್ಚಿನ ಭಾಗಗಳು ಈ ಪ್ರದೇಶದಲ್ಲಿದೆ. ಸುಳ್ಯ ತಾಲೂಕು ಒಟ್ಟು ೪೦ ಗ್ರಾಮಗಳು ಹಾಗೂ ಒಂದು ನಗರಪ್ರದೇಶವನ್ನು ಒಳಗೊಂಡಂತೆ ದಕ್ಷಿಣ ಕನ್ನಡ ಜಿಲ್ಲೆಯ ಮೂರನೆಯ ಅತಿ ದೊಡ್ಡ ತಾಲೂಕಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ೮೨೬ ಚದರ ಕಿಲೋಮೀಟರ್.

ಜನಸಂಖ್ಯೆ

೨೦೧೧ರ ಮಾಹಿತಿ ಪ್ರಕಾರ ತಾಲೂಕಿನ ಒಟ್ಟು ಜನಸಂಖ್ಯೆ ೧,೪೫,೨೨೭. ಇವರಲ್ಲಿ ೭೨,೧೨೬ ಗಂಡಸರು ಹಾಗೂ ೭೩,೧೦೧ ಹೆಂಗಸರಾಗಿದ್ದು ಮಹಿಳೆಯರ ಸಂಖ್ಯೆ ತಾಲೂಕಿನಲ್ಲಿ ಅಧಿಕವಾಗಿರುವುದನ್ನು ಗಮನಿಸಬಹುದಾಗಿದೆ.

ಸಾಕ್ಷರತೆ ಮತ್ತು ಶಿಕ್ಷಣ

ಸುಳ್ಯ ತಾಲೂಕಿನಲ್ಲಿ ೮೬.೩೫ ಶೇಖಡಾದಷ್ಟು ಸಾಕ್ಷರತಾಪ್ರಮಾಣವಿದ್ದು ಇವರಲ್ಲಿ ಶೇಖಡಾ ೯೧.೩೪ ರಷ್ಟು ಗಂಡಸರು ಹಾಗೂ ಶೇಖಡಾ ೮೧.೪೪ ರಷ್ಟು ಮಹಿಳಾ ಸಾಕ್ಷರರಿದ್ದಾರೆ. ಪ್ರಪಂಚದ ಬೇರೆ ಬೇರೆ ದೇಶಗಳಿಂದ ವಿದ್ಯಾರ್ಥಿಗಳನ್ನು ಆಕರ್ಷಿಸುವ ಸಾಕಷ್ಟು ವಿದ್ಯಾಸಂಸ್ಥೆಗಳಿವೆ. ಪ್ರಾಥಮಿಕ ಪೂರ್ವ ತರಗತಿಗಳಿಂದ ತೊಡಗಿ ವೈದ್ಯಕೀಯ ಶಿಕ್ಷಣ, ವೃತ್ತಿಪರ ಶಿಕ್ಷಣ, ಸ್ನಾತಕೋತ್ತರ ಹೀಗೆ ಎಲ್ಲಾ ರೀತಿಯ ಶಿಕ್ಷಣ ಕೇಂದ್ರಗಳು ಸುಳ್ಯ ತಾಲೂಕಿನಲ್ಲಿದೆ. ಶೈಕ್ಷಣಿಕವಾಗಿ ಸುಳ್ಯ ತಾಲೂಕು ಭಾರತದ ಭೂಪಟದಲ್ಲಿ ಗುರುತಿಸಿಕೊಂಡಿದೆ. ಇಲ್ಲಿನ ಹೆಚ್ಚಿನ ಜನರು ವಿದ್ಯಾವಂತರೂ, ಸುಶಿಕ್ಷಿತರೂ ಆಗಿದ್ದಾರೆ.

ಆರ್ಥಿಕತೆ

ಸುಳ್ಯ ತಾಲೂಕಿನ ಆರ್ಥಿಕತೆ ಮುಖ್ಯವಾಗಿ ಕೃಷಿ ಹಾಗೂ ತೋಟಗಾರಿಕೆ ಆಧಾರಿತವಾಗಿದೆ. ಅಡಿಕೆ, ತೆಂಗು, ರಬ್ಬರ್, ಕಾಳುಮೆಣಸು, ಗೇರುಬೀಜ, ಕೊಕ್ಕೊ, ಬಾಳೆ, ಇವುಗಳು ಪ್ರಮುಖ ಬೆಳೆಗಳಾಗಿವೆ. ಇಷ್ಟೇ ಅಲ್ಲದೆ ಪಶುಪಾಲನೆ, ಹೈನುಗಾರಿಕೆ ಹಾಗೂ ಆಯಾ ಋತುವಿಗೆ ತಕ್ಕಂತೆ ಬೆಳೆಯುವ ಬೆಳೆಗಳು, ಕಾಡುತ್ಪತ್ತಿಗಳು ಆರ್ಥಿಕತೆಯ ಆಧಾರವಾಗಿದೆ.

೩.೨ ಸ್ತ್ರೀಶಕ್ತಿ ಯೋಜನೆ ಸ್ವಸಹಾಯ ಸಂಘಗಳು

ಗ್ರಾಮೀಣ ಮಹಿಳೆಯರ ಸಬಲೀಕರಣ ಹಾಗೂ ಅವರನ್ನು ಸ್ವಾವಲಂಬಿಗಳನ್ನಾಗಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯದಾದ್ಯಂತ ಸ್ತ್ರೀಶಕ್ತಿ ಯೋಜನೆಯನ್ನು ೨೦೦೦-೦೧ನೇ ಸಾಲಿನಲ್ಲಿ ಜಾರಿಗೊಳಿಸಲಾಯಿತು. ಗ್ರಾಮಮಟ್ಟದಲ್ಲಿ ಸಂಘಟಿಸುವ ಯೋಜನೆ ಇದಾಗಿದ್ದು ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಲು ಅವರಲ್ಲಿ ಉಳಿತಾಯ ಪ್ರವೃತ್ತಿಯನ್ನು ಹೆಚ್ಚಿಸಲು ಇಂತಹ ಯೋಜನೆಗಳು ಸಹಕಾರಿಯಾಗಿವೆ. ಈ ಸ್ತ್ರೀಶಕ್ತಿ ಗುಂಪುಗಳು ಅಂಗನವಾಡಿ ಕಾರ್ಯಕರ್ತೆಯರ ಮೂಲಕ ರೂಪುಗೊಳುತ್ತವೆ. ಇತ್ತೀಚಿನ ವರದಿಯಂತೆ ರಾಜ್ಯದಲ್ಲಿ ೧.೪೦ ಲಕ್ಷ ಗುಂಪುಗಳು ಕಾರ್ಯನಿರ್ವಹಿಸುತ್ತಿವೆ. ೨೧ ಲಕ್ಷಕ್ಕೂ ಅಧಿಕ ಮಹಿಳೆಯರು ಸ್ತ್ರೀಶಕ್ತಿ ಗಂಪಿನಲ್ಲಿ ಸದಸ್ಯರಿದ್ದಾರೆ.

ಕರ್ನಾಟಕ ರಾಜ್ಯ ಸರಕಾರವು ಗ್ರಾಮೀಣ ಬಡವರ್ಗಗಳ ಮಹಿಳೆಯರ ಆರ್ಥಿಕ ವಿಕಾಸದ ಸಾಧನೆಗಾಗಿ ಜಾರಿಗೆ ತಂದಿರುವ ಯೋಜನೆಯೇ ಸ್ತ್ರೀಶಕ್ತಿ. ಈ ಯೋಜನೆಯ ಮೂಲಕ ಮಹಿಳೆಯರನ್ನು ಸಂಘಟಿಸಲಾಗುತ್ತದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಅಂಗನವಾಡಿ ಕಾರ್ಯಕರ್ತೆಯರ ಮೂಲಕ ಅನುಷ್ಠಾನಗೊಂಡಿರುವ ಹೆಮ್ಮೆಯ ಯೋಜನೆ ಇದಾಗಿದೆ. ಈ ಸ್ತ್ರೀಶಕ್ತಿ ಯೋಜನೆಯು ಸ್ವಸಹಾಯದ ಪರಿಕಲ್ಪನೆಯ ಮೇಲೆ ನಿಂತಿದೆ.

ಗ್ರಾಮೀಣ ಪ್ರದೇಶದ ಮಹಿಳೆಯರ ಆರ್ಥಿಕ, ಸಾಮಾಜಿಕ ಹಾಗೂ ಅವರ ಸರ್ವತೋಮುಖ ಅಭಿವೃದ್ಧಿಯನ್ನು ಹೆಚ್ಚಿಸುವ ಸಲುವಾಗಿ ಸ್ತ್ರೀಶಕ್ತಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಯೋಜನೆಯು ಜಾರಿಗೆ ಬಂದ ಪ್ರಾರಂಭದಿಂದಲೂ ಸರ್ಕಾರವು ಸ್ತ್ರೀಶಕ್ತಿ ಗುಂಪುಗಳಿಗೆ ಹಲವಾರು ರೀತಿ ಬೆಂಬಲ ನೀಡುತ್ತಲೇ ಬಂದಿದೆ. ಇದರಲ್ಲಿ ಮುಖ್ಯವಾಗಿ ತರಬೇತಿ ನೀಡುವುದು, ಸಾಲನಿರ್ವಹಣೆ, ಪುಸ್ತಕ ನಿರ್ವಹಣೆ, ಸಾಮಾಜಿಕ ವಿಷಯ ಹಾಗೂ ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ಸ್ತ್ರೀಶಕ್ತಿ ಗುಂಪಿನ ಸದಸ್ಯರಿಗೆ ನೀಡಲಾಗಿದೆ. ಈ ತರಬೇತಿಗಳನ್ನು ಪಡೆದುಕೊಂಡ ಸ್ತ್ರೀಶಕ್ತಿ ಗಂಪಿನ ಸದಸ್ಯರು ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಆರ್ಥಿಕವಾಗಿ ಸಬಲತೆಯನ್ನು ಹೊಂದುತ್ತಿದ್ದಾರೆ.

ಸ್ತ್ರೀಶಕ್ತಿಯೋಜನೆಯ ಧ್ಯೇಯೋದ್ದೇಶಗಳು

- ಮಹಿಳೆಯರಿಗೆ ಆರ್ಥಿಕ ಪ್ರಗತಿಯನ್ನು ಸಾಧಿಸುವಂತಹ ಹಾಗೂ ಸಾಮಾಜಿಕ ಬದಲಾವಣೆಗೆ ಸೂಕ್ತ ವಾತಾವರಣವನ್ನು ಮೂಡಿಸುವಂತಹ ಪ್ರಕ್ರಿಯೆಯನ್ನು ಬಲಪಡಿಸುವುದು.
- ಮಹಿಳೆಯರಲ್ಲಿ ಆತ್ಮವಿಶ್ವಾಸ ಮತ್ತು ಸ್ವಾವಲಂಬನೆ ಮೂಡಿಸಿ ಸಂಪನ್ಮೂಲಗಳ ಮೇಲೆ ಹತೋಟಿ ಹಾಗೂ ಸಾಮೀಪ್ಯವನ್ನು ಸಾಧಿಸುವುದು.
- ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ಮಹಿಳೆಯರನ್ನು ತೊಡಗಿಸಿಕೊಳ್ಳುವುದರ ಮೂಲಕ ಬಡ ಮಹಿಳೆಯರ ಆದಾಯವನ್ನು ಹೆಚ್ಚಿಸಿ, ಅವರಲ್ಲಿ ಆರ್ಥಿಕ ಸ್ಥಿರತೆಯನ್ನು ಮೂಡಿಸುವುದು ತನ್ಮೂಲಕ ಬಡತನ ನಿವಾರಣೆ ಮಾಡುವುದು.

- ವಿವಿಧ ಇಲಾಖೆಗಳನ್ನು ಒಮ್ಮುಖಗೊಳಿಸುವುದರ ಮೂಲಕ ಮಹಿಳಾ ಗುಂಪಿನ ಸದಸ್ಯರುಗಳಿಗೆ ವಿವಿಧ ಇಲಾಖೆಗಳ ಅಭಿವೃದ್ಧಿ ಕಾರ್ಯಕ್ರಮಗಳ ಫಲ ದೊರೆಯುವಂತೆ ಅವಕಾಶ ಕಲ್ಪಿಸುವುದು ಹಾಗೂ ಸಾಲ ನೀಡುವಂತಹ ಸಂಸ್ಥೆಗಳಿಗೆ ಸಾಮೀಪ್ಯ ಒದಗಿಸುವುದರ ಜೊತೆಗೆ ಸಾಲ ದೊರೆಯುವಂತೆ ಕ್ರಮ ಕೈಗೊಳ್ಳುವುದು.

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಸ್ತ್ರೀಶಕ್ತಿ ಭವನ

ಸ್ತ್ರೀಶಕ್ತಿ ಗುಂಪಿನ ಸದಸ್ಯರು ತಮ್ಮ ಉಳಿತಾಯದ ಹಣದಿಂದ ಪಡೆದಿರುವ ಆಂತರಿಕ ಸಾಲ ಹಾಗೂ ಬ್ಯಾಂಕುಗಳಿಂದ ಪಡೆದ ಸಾಲದ ಮೂಲಕ ವಿವಿಧ ರೀತಿಯ ಆದಾಯೋತ್ಪನ್ನ ಚಟುವಟಿಕೆಗಳನ್ನು ಮಾಡುತ್ತಿದ್ದಾರೆ. ಈ ಗುಂಪುಗಳ ಸದಸ್ಯರು ಉತ್ಪಾದಿಸುವ ಉತ್ಪನ್ನಗಳಿಗೆ ಖಾಯಂ ಮಾರುಕಟ್ಟೆ ಒದಗಿಸಲು ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಸ್ತ್ರೀಶಕ್ತಿ ಭವನಗಳನ್ನು ನಿರ್ಮಿಸಲಾಗುತ್ತಿದೆ.

ಸ್ತ್ರೀಶಕ್ತಿ ಸಂಘದ ಮಹಿಳೆಯರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಲಾಗುತ್ತದೆ. ತರಬೇತಿ ಪಡೆದ ಸದಸ್ಯರು ತಮ್ಮ ಕೌಶಲ್ಯವನ್ನು ಅಭಿವೃದ್ಧಿ ಪಡಿಸಿಕೊಂಡು ಉತ್ಪಾದಿಸುವ ವಸ್ತುಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಟೈಲರಿಂಗ್, ಕಸೂತಿ, ಬ್ಯೂಟಿಪಾರ್ಲರ್, ಸಿದ್ಧ ಉಡುಪುಗಳ ತಯಾರಿಕೆ, ಬೇಕರಿ ಉತ್ಪನ್ನಗಳ ತಯಾರಿಕೆ, ಎರೆಹುಳು ಗೊಬ್ಬರ ಇತ್ಯಾದಿ ವಿಷಯಗಳಲ್ಲಿ ಸದಸ್ಯರ ಆಸಕ್ತಿಗನುಗುಣವಾಗಿ ಆದ್ಯತೆ ಮೇರೆಗೆ ತರಬೇತಿಯನ್ನು ನೀಡಲಾಗುತ್ತದೆ.

ಸುಳ್ಯ ತಾಲೂಕಿನಲ್ಲಿ ಸ್ತ್ರೀಶಕ್ತಿ

ಸುಳ್ಯ ತಾಲೂಕಿನಲ್ಲಿ ಉಳಿದೆಲ್ಲಾ ಸ್ವಸಹಾಯ ಸಂಘಗಳಂತೆ ಸ್ತ್ರೀಶಕ್ತಿ ಯೋಜನೆ ಸ್ವಸಹಾಯ ಸಂಘವೂ ಕೂಡಾ ಮಹತ್ವ ಪಡೆದಿದೆ. ೨೦೦೦ ಇಸವಿಯಲ್ಲಿ ಪ್ರಾರಂಭಗೊಂಡ ಈ ಯೋಜನೆಯ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಒಟ್ಟು ೨೮೬ ಸಂಘಗಳು, ನಗರ ಪ್ರದೇಶದಲ್ಲಿ ಒಟ್ಟು ೧೦ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಸರಕಾರದ ನಿರ್ಧಾರದಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ,

ಬಡತನ ರೇಖೆಗಿಂತ ಕೆಳಗಿನ ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಸಂಘದಲ್ಲಿನ ಮಹಿಳೆಯರಿಗೆ ಸ್ವ ಉದ್ಯೋಗಕ್ಕೆ ಪೂರಕವಾಗಿ ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ನೀಡಲಾಗಿತ್ತದೆ. ಸುಳ್ಯ ತಾಲೂಕಿನಲ್ಲಿ ಸಂಘದ ಸದಸ್ಯ ಮಹಿಳೆಯರು ಸಂಘದಿಂದ ಸಾಲವನ್ನು ಪಡೆದು ಸ್ವ ಉದ್ಯೋಗ ಹಾಗೂ ಇತರ ಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಅಂಗನವಾಡಿ ಕಾರ್ಯಕರ್ತೆಯರ ಮೂಲಕ ನಡೆಸಲ್ಪಡುವ ಈ ಯೋಜನೆಯು ಸಕ್ರಿಯವಾಗಿದೆ.

೩.೩ ನವೋದಯ ಸ್ವಸಹಾಯ ಸಂಘಗಳು

ಸರ್ವರ ಒಳಿತಿನಲ್ಲಿ ತನ್ನ ಒಳಿತನ್ನು ಕಾಣುವ ದೃಷ್ಟಿಯಿಂದ ಹುಟ್ಟಿಕೊಂಡ ಸಹಕಾರಿ ಸಂಘಗಳು ಆರ್ಥಿಕ ಹಾಗೂ ಸಾಮಾಜಿಕ ಪ್ರಯತ್ನಗಳನ್ನು ಪ್ರಜಾಪ್ರಭುತ್ವ ರೀತಿಯಲ್ಲಿ ಒಟ್ಟುಗೂಡಿಸಿ ಗ್ರಾಮೀಣ ಜನರ ಆಶೋತ್ತರಗಳಿಗೆ ಸ್ಪಂದಿಸಿ ಪರಸ್ಪರ ಸಹಾಯ ದೃಷ್ಟಿಯಿಂದ ಕೆಲಸ ಮಾಡುತ್ತಿದೆ. ಇವು ಸ್ವಸಹಾಯ ತತ್ವಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಸಹಕಾರಿ ರಂಗದ ಅಗ್ರಗಣ್ಯ ನೇತಾರರಾದ ಶ್ರೀ ಎಂ ಎನ್ ರಾಜೇಂದ್ರಕುಮಾರ್‌ರವರು ೨೦೦೦ನೇ ಇಸವಿ ಜನವರಿ ತಿಂಗಳಂದು ಕಾರ್ಕಳದಲ್ಲಿ 'ನವೋದಯ ಸ್ವಸಹಾಯ ಸಂಘ'ವನ್ನು ಪ್ರಪ್ರಥಮವಾಗಿ ಪ್ರಾರಂಭಿಸಿದರು. ಅನಂತರ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಮಾರ್ಗದರ್ಶನದೊಂದಿಗೆ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಮೂಲಕ 'ನವೋದಯ ಸ್ವಸಹಾಯ ಸಂಘ'ಗಳನ್ನು ರಚಿಸಿ ಅನುಷ್ಠಾನಕ್ಕೆ ತರಲಾಯಿತು. ಇದು ಹಲವು ಸಹಕಾರಿ ಸಂಘಗಳ ಪುನಶ್ಚೇತನಕ್ಕೆ ಕಾರಣವಾಗಿದೆ. ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ನೀಡಿ ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ಕೂಡಾ ಪ್ರೇರೇಪಿಸುವಲ್ಲಿ ನವೋದಯ ಸ್ವಸಹಾಯ ಸಂಘಗಳು ಪ್ರಮುಖ ಪಾತ್ರ ವಹಿಸಿವೆ.

'ನಾನು ನಿಮಗಾಗಿ, ನೀವು ನಮಗಾಗಿ, ಎಲ್ಲರೂ ಎಲ್ಲರಿಗಾಗಿ' ಎನ್ನುವುದು ಸಹಕಾರಿ ತತ್ತ್ವ. ಸಹಕಾರಿ ಮನೋಭಾವದಿಂದಲೇ ಆರ್ಥಿಕ ಸ್ವಾವಲಂಬನೆ ಮತ್ತು ಆರ್ಥಿಕ ಅಭ್ಯುದಯ ಸಾಧ್ಯ.

ಸಹಕಾರಿ ತತ್ತ್ವವೆಂದರೆ ಪರಸ್ಪರ ನಂಬಿಕೆ, ವಿಶ್ವಾಸ ಹಾಗೂ ಪರಿಶ್ರಮ. ಸಹಕಾರಿ ರಂಗದಲ್ಲಿ ತೊಡಗಿಸಿಕೊಂಡ ಸರ್ವರಿಗೂ ಅಭಿವೃದ್ಧಿಗೆ ಮುಕ್ತ ಅವಕಾಶವನ್ನು ಕಲ್ಪಿಸಿದೆ. ಮೇಲು ಕೀಳು, ಬಡವ ಬಲ್ಲಿದ ಎಂಬ ಭೇದ ಭಾವ ಅಳಿದು ಸಹಕಾರಿ ಮನೋಭಾವ ಹಾಗೂ ಪರೋಪಕಾರದ ಮನೋಧರ್ಮ ಸೃಷ್ಟಿಯಾಗುವಲ್ಲಿ ಸಹಕಾರಿಯಾಗಿದೆ.

ಈ ಎಲ್ಲಾ ಮೂಲಕಲ್ಪನೆಗಳೊಂದಿಗೆ ಹುಟ್ಟಿದ ನವೋದಯ ಸ್ವಸಹಾಯ ಸಂಘ ಯೋಜನೆಯು ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಧಾರವಾಡ, ಹುಬ್ಬಳ್ಳಿ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿದ್ದು ಮಹಿಳಾ ಸಬಲೀಕರಣದ ಉದ್ದೇಶವನ್ನಿಟ್ಟುಕೊಂಡು ಕಾರ್ಯನಿರತವಾಗಿದೆ.

ನವೋದಯ ಗ್ರಾಮವಿಕಾಸ ಚಾರಿಟೇಬಲ್ ಟ್ರಸ್ಟ್

ಸಹಕಾರಿ ರಂಗದ ಅಗ್ರಗಣ್ಯ ನೇತರರಾದ ಶ್ರೀ ಎಂ ಎನ್ ರಾಜೇಂದ್ರಕುಮಾರ್‌ರವರ ಯಶಸ್ವಿ ನೇತೃತ್ವದಲ್ಲಿ ಅಕ್ಟೋಬರ್ ೨೦೦೪ರಂದು ಸ್ವಯಂ ಸೇವಾ ಸಂಸ್ಥೆಯಾದ ನವೋದಯ ಗ್ರಾಮವಿಕಾಸ ಚಾರಿಟೇಬಲ್ ಟ್ರಸ್ಟ್ ರಚಿಸಿ ಆ ಮೂಲಕ ನವೋದಯ ಸ್ವಸಹಾಯ ಗುಂಪುಗಳ ರಚನೆ ಮತ್ತು ನಿರ್ವಹಣೆಯನ್ನು ನಡೆಸುತ್ತಿದೆ.

ಟ್ರಸ್ಟ್ ನ ಧ್ಯೇಯೋದ್ದೇಶಗಳು

- ✓ ಗ್ರಾಮೀಣ ಪ್ರದೇಶದ ಮಹಿಳೆಯರನ್ನು ತರಬೇತಿಗೊಳಿಸಿ ಸ್ವಾವಲಂಬಿಗಳನ್ನಾಗಿ ರೂಪಿಸುವುದು.
- ✓ ಸ್ವ ಉದ್ಯೋಗಕ್ಕೆ ಸಂಬಂಧಿಸಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸುವುದು.
- ✓ ನಿರುದ್ಯೋಗಿ ಯುವಕ ಯುವತಿಯರನ್ನು ಸಂಘಟಿಸಿ ಸ್ವ ಉದ್ಯೋಗಕ್ಕೆ ಪ್ರೇರಣೆ ನೀಡುವುದು.
- ✓ ವಿವಿಧ ಮಹಿಳಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸುವುದು

ಸುಳ್ಯ ತಾಲೂಕಿನಲ್ಲಿ ನವೋದಯ ಸ್ವಸಹಾಯ ಸಂಘ

ಸುಳ್ಯ ತಾಲೂಕಿನಲ್ಲಿ ನವೋದಯ ಸ್ವಸಹಾಯ ಸಂಘವು ೨೦೦೫ನೇ ಇಸವಿಯಲ್ಲಿ ಪ್ರಾರಂಭಗೊಂಡಿತು. ತಾಲೂಕು ಮಟ್ಟದಲ್ಲಿ ಸಂಘವನ್ನು ಮುನ್ನಡೆಸಲು ಒಬ್ಬರು ಮೇಲ್ವಿಚಾರಕರು ಇರುತ್ತಾರೆ. ಇವರು ಇಡೀ ತಾಲೂಕಿನ ಎಲ್ಲಾ ಸಂಘಗಳಿಗೆ ನೀಡಬೇಕಾಗಿರುವ ಮಾಹಿತಿ, ಸಂಘಗಳ ಕಾರ್ಯಚಟುವಟಿಕೆಗಳನ್ನು ಗಮನಿಸುವವರಾಗಿರುತ್ತಾರೆ. ಅಲ್ಲದೆ ಪ್ರತಿ ಸಹಕಾರಿ ಸಂಘಕ್ಕೆ ಒಬ್ಬರಂತೆ ಪ್ರತಿನಿಧಿಯಾಗಿ ಪ್ರೇರಕರು ಜವಾಬ್ದಾರಿ ವಹಿಸಿರುತ್ತಾರೆ. ಅವರು ಗ್ರಾಮಗಳಲ್ಲಿ ಜನರ ಭೇಟಿ ಮಾಡಿ ಸಂಘದ ಉಪಯೋಗ, ಅನುಕೂಲತೆಗಳ ಬಗ್ಗೆ ಜನರಿಗೆ ತಿಳಿಸಿ ಸಂಘ ರಚನೆಗೆ ಪ್ರೇರಣೆ ನೀಡುತ್ತಾರೆ. ೧೦-೨೦ ಜನರು ಒಟ್ಟುಗೂಡಿ ಒಂದು ಗುಂಪನ್ನು ರಚಿಸಲು ಅವಕಾಶವಿದೆ. ನಬಾರ್ಡ್‌ನ ಪ್ರಕಾರ ಒಬ್ಬ ಸದಸ್ಯನಿಗೆ ಒಂದು ಕಂತಿನಲ್ಲಿ ೧೦ ರಿಂದ ೧೦೦ ರೂಪಾಯಿವರೆಗೆ ಉಳಿತಾಯ ಮಾಡಲು ಅವಕಾಶವಿದೆ. ಆದರೆ ಸಂಘದಲ್ಲಿ ಸದಸ್ಯರ ಅನುಕೂಲತೆಯ ಮೇರೆಗೆ ಉಳಿತಾಯದ ಹಣ ನಿರ್ಧರಿಸಲಾಗುತ್ತದೆ. ಪ್ರತಿವಾರ ಅಥವಾ ಹದಿನೈದುದಿನಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ಸಭೆ ಸೇರಿ ಉಳಿತಾಯ ಮಾಡಬಹುದಾಗಿದೆ. ಹೀಗೆ ಉಳಿತಾಯ ಮಾಡಿದ ಹಣದಲ್ಲಿ ಎಲ್ಲಾ ಸದಸ್ಯರ ವಿಶ್ವಾಸದ ಮೇರೆಗೆ ಸಾಲ ತೆಗೆದುಕೊಳುವ ವ್ಯವಸ್ಥೆ ಈ ಸ್ವಸಹಾಯ ಸಂಘಗಳಲ್ಲಿದೆ. ಹೈನುಗಾರಿಕೆ, ವ್ಯಾಪಾರ, ಹೊಲಿಗೆ, ಇತರ ಸ್ವಯಂ ಉದ್ಯೋಗ ಇವುಗಳಿಗಾಗಿ ಸಾಲ ನೀಡಲಾಗುತ್ತದೆ.

ಇತ್ತೀಚಿನ ಅಂಕಿಅಂಶಗಳ ಪ್ರಕಾರ ಸುಳ್ಯ ತಾಲೂಕಿನಲ್ಲಿ ಒಟ್ಟು ೮೭೨೧ ಸದಸ್ಯರನ್ನು ಒಳಗೊಂಡ ೮೯೭ ಮಹಿಳಾ ಸ್ವಸಹಾಯ ಸಂಘಗಳಿವೆ. ಈ ಎಲ್ಲಾ ಗುಂಪುಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದು ಕೆಲವರು ಸ್ವಉದ್ಯೋಗದಲ್ಲಿ ತೊಡಗಿಸಿಕೊಂಡಿದ್ದಾರೆ.

೩.೪ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ) ಧರ್ಮಸ್ಥಳ

ಬೆಳ್ತಂಗಡಿ ತಾಲೂಕಿನ ಸಣ್ಣ ಮತ್ತು ಅತಿ ಸಣ್ಣ ಬಡ ಕೃಷಿಕರ ಬವಣೆಗಳನ್ನು ಕಣ್ಣಾರೆ ಕಂಡ ಡಾ.ವೀರೇಂದ್ರ ಹೆಗ್ಗಡೆಯವರು ಕೃಷಿಕರ ಅಭ್ಯುದಯದ ಉದ್ದೇಶದೊಂದಿಗೆ ೧೯೮೨ರಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಿದರು. ದುರ್ಬಲರನ್ನು ದೈನ್ಯದ ಹೆಸರಿನಲ್ಲಿ ಪರಾವಲಂಬಿಯಾಗಿಸದೆ ಸ್ವಾವಲಂಬಿಯನ್ನಾಗಿಸುವ ನಿಟ್ಟಿನಲ್ಲಿ ಯೋಜನೆಯು ಜಾತಿ, ಮತ, ಅಂತಸ್ತಿನ ಭೇದವಿಲ್ಲದೆ ಸಹಾಯ ಹಸ್ತ ಚಾಚುತ್ತಿದೆ. ಕುಟುಂಬವೊಂದು ಸ್ವಾವಲಂಬಿಯಾಗುವ ನಿಟ್ಟಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಈ ಯೋಜನೆಯು ಯಶಸ್ವಿಯಾಗಿದೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಜನರ ಬೇಡಿಕೆ ಮೇರಗೆ ಕರ್ನಾಟಕ ರಾಜ್ಯದ ೨೬ ಜಿಲ್ಲೆಗಳನ್ನು ವ್ಯಾಪಿಸಿಕೊಂಡಿದ್ದು, ಸುಮಾರು ೩,೦೦,೦೦೦ ಲಕ್ಷಕ್ಕೂ ಅಧಿಕ ಸ್ವಸಹಾಯ ಸಂಘಗಳನ್ನು ರಚಿಸಿರುತ್ತದೆ. ಮಹಿಳೆಯರ ಸ್ವಾವಲಂಬಿ ಬದುಕಿಗೆ ಅನುಕೂಲವಾಗುವ ದೃಷ್ಟಿಯಿಂದ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ. ಸ್ವ ಉದ್ಯೋಗಕ್ಕೆ ಪ್ರೇರಣೆಯಾಗಿ 'ಸಿರಿ' ಹೆಸರಿನಲ್ಲಿ ಉತ್ಪನ್ನಗಳ ತಯಾರಿಕೆ, ೪-೫ ಸ್ವಸಹಾಯ ಸಂಘಗಳನ್ನು ಒಟ್ಟುಗೂಡಿಸಿ ನಡೆಸುವ ವ್ಯವಸ್ಥೆಯಾದ ಜ್ಞಾನವಿಕಾಸ ಕಾರ್ಯಕ್ರಮಗಳು ಮಹಿಳೆಯರಿಗೆ ಅತ್ಯಂತ ಉಪಯುಕ್ತವಾಗಿವೆ.

'ಸಿರಿ –ಗ್ರಾಮೀಣ ಮಹಿಳೆಯರ ಸ್ವಾವಲಂಬಿ ಜೀವನಕ್ಕೆ ಸಹಕಾರಿ

ಹಿಂದೆ ಮಹಿಳೆಯರಿಗೆ ಬೀಡಿ ಮತ್ತು ಕೃಷಿಕೂಲಿ ಬಿಟ್ಟು ಬೇರೆ ಪರ್ಯಾಯ ಉದ್ಯೋಗವಿರಲಿಲ್ಲ. ದುಡಿದ ಸಂಪಾದನೆಯೆಲ್ಲ ಗಂಡನ ಪಾಲಾಗಿ ಕುಡಿತಕ್ಕೆ ವ್ಯಯವಾಗುತ್ತಿತ್ತು. ಆಕೆಗೆ ತನ್ನದೆಂಬ ಸ್ವಂತ ಬದುಕನ್ನು ರೂಪಿಸಿಕೊಳ್ಳುವ ಅವಕಾಶವಿರಲಿಲ್ಲ. ಮಕ್ಕಳ ಶಿಕ್ಷಣ, ವೈಯಕ್ತಿಕ ಅಗತ್ಯಗಳನ್ನು ಪೂರೈಸಿಕೊಳ್ಳಲಾರದಂತಿದ್ದ ಅವರ ಬದುಕಿನ ಚಿತ್ರಣವನ್ನು

ಬದಲಾಯಿಸಬೇಕು, ಇಂತಹ ಬದಲಾವಣೆ ಆದಾಗಲೇ ಮಹಿಳೆಯರ ಸಬಲೀಕರಣ ಸಾಧ್ಯವೆಂಬ ದೂರದೃಷ್ಟಿಯೊಂದಿಗೆ ಆರಂಭಿಸಿದ ಕಾರ್ಯಕ್ರಮ 'ಸಿರಿ'.

ಗ್ರಾಮೀಣ ಮಟ್ಟದಲ್ಲಿ ಗಾಂಧೀಜಿ ಕಂಡ ಕನಸು 'ಗ್ರಾಮ ಸ್ವರಾಜ್ಯ' ವನ್ನು ಮಾದರಿಯಾಗಿಟ್ಟುಕೊಂಡು ಯೋಜನೆಯು ಗ್ರಾಮೀಣ ಸಂಪನ್ಮೂಲ ಕೇಂದ್ರಗಳಲ್ಲಿ ವಿವಿಧ ಉತ್ಪನ್ನಗಳ ತಯಾರಿಕೆಗೆ ಪ್ರೋತ್ಸಾಹ ನೀಡುತ್ತಿದೆ. ಈ ಬಗ್ಗೆ ತರಬೇತಿ, ಕಚ್ಚಾ ಸಾಮಗ್ರಿ ನೀಡುವುದು, ಗುಣಮಟ್ಟ ವಸ್ತುಗಳ ಉತ್ಪಾದನೆ, ಪ್ಯಾಕಿಂಗ್ ಮತ್ತು ಮಾರಾಟ ಮಾಡುವ ಸಲುವಾಗಿ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥಯನ್ನು ಸ್ಥಾಪಿಸಲಾಗಿದೆ. ಇಲ್ಲಿ ಮಹಿಳೆಯರಿಗೆ ಕೌಶಲ್ಯದ ತರಬೇತಿ ನೀಡಿ ಸ್ವ ಉದ್ಯೋಗ ರೂಪಿಸಿಕೊಳ್ಳುವಂತೆ ಪ್ರೇರೇಪಣೆ, ತರಬೇತಿ ನೀಡಲಾಗುತ್ತದೆ. ಈ ಸಂಸ್ಥೆಯ ಮುಖೇನ ಸುಮಾರು ೫೦೦೦ಕ್ಕೂ ಮಿಕ್ಕಿದ ಮಹಿಳೆಯರಿಗೆ ಉದ್ಯೋಗ ದೊರಕಿದ್ದು, ಇವರು ಉತ್ಪಾದಿಸಿದ ವಸ್ತುಗಳನ್ನು 'ಸಿರಿ' ಎಂಬ ಹೆಸರಿನಲ್ಲಿ ಮಾರಾಟ ಮಾಡಲಾಗುತ್ತದೆ. ವಾರ್ಷಿಕ ಸರಾಸರಿ ಹತ್ತು ಕೋಟಿಗೂ ಮಿಕ್ಕಿದ ವಹಿವಾಟನ್ನು ಹೊಂದಿರುವ ಸಿರಿ ಸಂಸ್ಥೆಯು ತನ್ನದೇ ಆದಮಾರಾಟ ಜಾಲವನ್ನು ಅಭಿವೃದ್ಧಿ ಪಡಿಸಿರುತ್ತದೆ.ಸಿದ್ಧ ಉಡುಪುಗಳು, ಅಗರಬತ್ತಿಗಳು, ತಿಂಡಿತಿನಿಸುಗಳು, ಫಿನಾಯಿಲ್, ಸೋಪು, ಹಾಳೆತಟ್ಟೆಗಳು ಮುಂತಾದ ವಸ್ತುಗಳನ್ನು ವಿವಿಧ ಘಟಕಗಳಲ್ಲಿ ಉತ್ಪಾದಿಸಲಾಗುತ್ತಿದೆ. ಸ್ಥಳೀಯ ಮಾರುಕಟ್ಟೆಯಲ್ಲಿ ಸಿರಿ ಉಡುಪುಗಳು ಹೆಸರು ಗಳಿಸಿವೆ. ದೇಶೀಯ ಮಾರುಕಟ್ಟೆಯಲ್ಲಿ ಅಗರಬತ್ತಿಗಳು ಹೆಸರು ಮಾಡಿವೆ.

ಹೀಗೆ ಹತ್ತು ಹಲವು ಉದ್ಯೋಗಗಳನ್ನು ನೆಚ್ಚಿಕೊಂಡು ಮಹಿಳೆಯರು ಸ್ವಾವಲಂಬಿ ಜೀವನ ನಡೆಸುತ್ತಿದ್ದಾರೆ. ಈ ಮೂಲಕ ಮನೆಯನ್ನು ಸರಿದೂಗಿಸುವ ನಿಟ್ಟಿನಲ್ಲಿ, ಮಕ್ಕಳ ಶಿಕ್ಷಣದ ಬಗ್ಗೆ ಕಾಳಜಿವಹಿಸುಲ್ಲಿ ಮಹಿಳೆಗೆ ಅತ್ಯಂತ ಸಹಾಯಕವಾಗಿದೆ. ಇದು ಸಿರಿಯಿಂದ ಉಂಟಾದ ಮಹತ್ವಪೂರ್ಣ ಬದಲಾವಣೆ.

ಜ್ಞಾನವಿಕಾಸ ಕಾರ್ಯಕ್ರಮ

'ಜ್ಞಾನ ವಿಕಾಸ' ಎಂಬುದು ಗ್ರಾಮೀಣ ಮಹಿಳೆಯರ ಸಾಂಸ್ಕೃತಿಕ ಬದುಕನ್ನು ಪುನಶ್ಚೇತನಗೊಳಿಸಿದ ಒಂದು ಅತ್ಯುತ್ತಮ ಕಾರ್ಯಕ್ರಮ. ಸುತ್ತಮುತ್ತ ಪರಿಸರದ ೩-೪ ಸಮಾನ ಮನಸ್ಕರ ಸಂಘಗಳ ಸಂಯೋಜನೆಯಿಂದ ಜ್ಞಾನ ವಿಕಾಸ ಕೇಂದ್ರ ರೂಪಿತವಾಗುತ್ತದೆ. ಎಲ್ಲರಿಗೂ ಅನುಕೂಲವಾಗುವ ಒಂದು ನಿರ್ದಿಷ್ಟ ಪ್ರದೇಶ, ಶಾಲೆ, ಸಮುದಾಯ ಭವನ ಹೀಗೆ ಯಾವುದಾದರೊಂದು ಸ್ಥಳಗಳಲ್ಲಿ ತಿಂಗಳ ಸಭೆ ನಡೆಸುತ್ತಾರೆ. ಇದನ್ನು ಜ್ಞಾನ ವಿಕಾಸ ಸಭೆ ಎಂದು ಕರೆಯಲಾಗುತ್ತದೆ. ಇವು ಗ್ರಾಮೀಣ ಮಹಿಳೆಯರಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಪ್ರಜ್ಞೆಯನ್ನು ಮೂಡಿಸುವ ವಿಶಿಷ್ಟ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ. ಮಹಿಳೆಯರು ಜ್ಞಾನ ವಿಕಾಸ ಕಾರ್ಯಕ್ರಮದ ಮೂಲಕ ಆರೋಗ್ಯ, ಕುಟುಂಬ ಕಲ್ಯಾಣ, ನೈರ್ಮಲ್ಯ, ಮಕ್ಕಳ ವಿದ್ಯಾಭ್ಯಾಸ, ಶುಚಿತ್ವ ಮತ್ತು ಉತ್ತಮ ಜೀವನ ಕುರಿತು ಪ್ರತಿ ತಿಂಗಳು ಎರಡು ಗಂಟೆ ಅವಧಿಯ ಮಾಹಿತಿ ಪಡೆಯುತ್ತಾರೆ.

- ಕೌಟುಂಬಿಕ ಸಾಮರಸ್ಯ : ಕುಟುಂಬ ಜೀವನ ಪದ್ಧತಿಯಲ್ಲಿ ಕುಟುಂಬದ ಸಾಮರಸ್ಯ ರಕ್ಷಣೆಯಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದೆ. ಹೀಗಾಗಿ ಕುಟುಂಬ ನಿರ್ವಹಣೆ ಕುರಿತು, ಸಂಬಂಧಗಳ ಸೂಕ್ಷ್ಮತೆ, ದುಂದುವೆಚ್ಚಗಳಿಗೆ ಕಡಿವಾಣ, ಬಾಂಧವ್ಯ ಬೆಸೆಯುವ ವಿಧಾನಗಳು ಹೀಗೆ ಹಲವಾರು ವಿಚಾರಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ.
- ಆರೋಗ್ಯ ಮತ್ತು ನೈರ್ಮಲ್ಯ : ಆರೋಗ್ಯವೇ ಭಾಗ್ಯ ಎಂಬಂತೆ ಸ್ವಚ್ಛತೆಯ ಕಡೆಗೆ ಅರಿವು ಮೂಡಿಸುವುದು, ಸಂಬಂಧಿಸಿದ ಇಲಾಖೆಯಿಂದ ಸಿಗುವ ಸೌಲಭ್ಯಗಳು, ಗರ್ಭಿಣಿ/ಬಾಣಂತಿಯರ ಆರೋಗ್ಯ, ಮಹಿಳೆಯರ ಆರೈಕೆ, ಮಕ್ಕಳಿಗೆ ಹಾಕುವ ಲಸಿಕೆ ಇತ್ಯಾದಿ ವಿಷಯಗಳಲ್ಲಿ ಅಗಾಧ ಅರಿವು ಮೂಡಿಸುವುದು, ಆಹಾರ ಪದ್ಧತಿಗಳ ಬಗ್ಗೆ ತಿಳಿವು ನೀಡುವ ಕಾರ್ಯಕ್ರಮ ಇತ್ಯಾದಿಗಳನ್ನು ಆಯಾ ಪ್ರದೇಶದ ವೈದ್ಯರ ಮೂಲಕ ಮಾಹಿತಿ ನೀಡಲಾಗುತ್ತದೆ.

- ಪೌಷ್ಟಿಕ ಆಹಾರ: ಯಾವ ಆಹಾರ ಸೇವನೆಯಿಂದ ಪೋಷಕಾಂಶಗಳು ದೊರೆಯುತ್ತವೆ, ಯಾವ ಆಹಾರ ಆರೋಗ್ಯಕ್ಕೆ ಹಿತಕರ ಎಂಬ ವಿಷಯದ ಕುರಿತು ಮಾಹಿತಿ ನೀಡಲಾಗುತ್ತದೆ.
- ಶಿಕ್ಷಣ : ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ, ಶಿಕ್ಷಣ ಇಲಾಖೆಯಿಂದ ಸಿಗುವ ಸೌಲಭ್ಯಗಳು, ಕಲಿಯುವಿಕೆಗೆ ಇರುವ ಅವಕಾಶಗಳು ಮುಂತಾದವುಗಳ ಬಗ್ಗೆ ಸ್ಥಳೀಯ ಸಾಲಾ ಕಾಲೇಜು ಉಪನ್ಯಾಸಕರನ್ನು ಆಹ್ವಾನಿಸಿ ಹೆತ್ತವರಿಗೆ ಮಾಹಿತಿ ನೀಡಲಾಗುತ್ತದೆ.
- ಸ್ವ ಉದ್ಯೋಗ : ಕೃಷಿ ಹಾಗೂ ಕೃಷಿಯೇತರ ಕುಟುಂಬಗಳ ಸದಸ್ಯರಿಗೆ ತಮ್ಮ ಜೀವನೋಪಾಯಕ್ಕಾಗಿ ಕಿರು ಉದ್ಯಮಗಳನ್ನು ಪ್ರಾರಂಭಿಸಲು ಪ್ರೇರಣೆ ನೀಡಲಾಗುತ್ತದೆ. ಗ್ರಾಮೀಣ ಭಾಗದ ಯುವಕ – ಯುವತಿಯರಿಗೆ ಸ್ವ ಉದ್ಯೋಗ ಕೈಗೊಳ್ಳುವ ನಿಟ್ಟಿನಲ್ಲಿ ಕಡಿಮೆ ಅವಧಿಯ ಆಳವಾದ ಜ್ಞಾನವನ್ನು ನೀಡುವಂತಹ ತರಬೇತಿಗಳನ್ನು ಆಯೋಜಿಸಿ ಅಭ್ಯರ್ಥಿಗಳು ಸ್ವ ಉದ್ಯೋಗ ಕೈಗೊಳ್ಳುವವರೆಗೆ ಬೆಂಬಲ ನೀಡಲಾಗುತ್ತದೆ.
- ಸರಕಾರಿ ಯೋಜನೆಗಳು : ಗ್ರಾಮ/ ತಾಲೂಕು/ ಜಿಲ್ಲಾ ಪಂಚಾಯತ್‌ಗಳಿಂದ ಸಿಗುವ ವಿವಿಧ ಸೌಲಭ್ಯಗಳ ಅರಿವು, ಮಹಿಳಾಪರ ಕಾನೂನು ಮುಂತಾದವುಗಳ ಕುರಿತು ಮಾಹಿತಿ ನೀಡಲಾಗುತ್ತದೆ

ಸುಳ್ಯ ತಾಲೂಕಿನಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ

ಸುಳ್ಯ ತಾಲೂಕಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ೨೦೦೫ ರಲ್ಲಿ ಪ್ರಾರಂಭಗೊಂಡಿತು. ಪ್ರಸ್ತುತ ಸುಳ್ಯ ತಾಲೂಕಿನಲ್ಲಿ ೧೦೧೫ ಮಹಿಳಾ ಸ್ವ ಸಹಾಯ ಸಂಘಗಳಲ್ಲಿ ೧೬,೬೪೪ ಮಹಿಳೆಯರು ಕಾರ್ಯಪ್ರವೃತ್ತರಾಗಿದ್ದಾರೆ. ಹೈನುಗಾರಿಕೆ, ಕೋಳಿ ಸಾಕಾಣೆ, ಹಂದಿಸಾಕಾಣೆ, ಆಡುಸಾಕಾಣೆ, ಅಡಿಕೆ ಹಾಳೆತಟ್ಟೆ ತಯಾರಿ, ಇಡ್ಲಿ, ನೀರುದೋಸೆ ತಯಾರಿಸಿ ಹೋಟೆಲ್‌ಗಳಿಗೆ ಮಾರಾಟ, ಫಿನಾಯಿಲ್ ಉತ್ಪಾದನೆ, ಸೋಪು ತಯಾರಿ, ಮಲ್ಲಿಗೆ ಕೃಷಿ, ಟೈಲರಿಂಗ್ ಇವೇ ಮುಂತಾದ ಸ್ವ ಉದ್ಯೋಗಗಳಲ್ಲಿ ಮಹಿಳೆಯರು ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಪ್ರತಿಯೊಂದು ಊರಿನಲ್ಲೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ನೇಮಕಗೊಂಡ ಸೇವಾಪ್ರತಿನಿಧಿಗಳು ಇರುತ್ತಾರೆ. ಅವರು ೧೦ ರಿಂದ ೨೦ ಮಹಿಳೆಯರನ್ನು ಒಟ್ಟುಗೂಡಿಸಿ ಗುಂಪನ್ನು ರಚಿಸುತ್ತಾರೆ. ಪ್ರತಿವಾರ ಸಭೆಯನ್ನು ಕರೆದುಉಳಿತಾಯ ಮಾಡಲಾಗುತ್ತದೆ. ಗುಂಪಿನ ಸದಸ್ಯರ ಅನುಕೂಲತೆ ಮೇರೆಗೆ ರೂ ೧೦ ರಿಂದ ೫೦ ರ ತನಕ ಉಳಿತಾಯ ಮಾಡಲು ಅವಕಾಶವಿದೆ. ವಾರದಲ್ಲಿ ಒಂದುದಿನ ಸಭೆ ನಡೆಸಿ ಹಣ ಉಳಿತಾಯ, ಪಡೆದ ಸಾಲದ ಮರುಪಾವತಿ, ಗುಂಪುಚರ್ಚೆ ಇತ್ಯಾದಿ ನಡೆಸಲಾಗುತ್ತದೆ.

೩.೫ ಅಧ್ಯಯನಕ್ಕೆ ಸಂಬಂಧಿಸಿದಂತೆ ಮಾದರಿಗಳ ಆಯ್ಕೆ

ಹೀಗೆ ಸುಳ್ಯ ತಾಲೂಕಿನಲ್ಲಿ ಪ್ರಮುಖವಾಗಿರುವ ಸ್ತ್ರೀಶಕ್ತಿ ಯೋಜನೆ ಸ್ವಸಹಾಯ ಸಂಘಗಳು, ನವೋದಯ ಸ್ವಸಹಾಯ ಸಂಘ ಹಾಗೂ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಈ ಮೂರೂ ಸಂಘಗಳಿಂದ ಸಮಾನ ಅನುಪಾತ ರೀತಿಯಲ್ಲಿ ಮಾದರಿ ಸದಸ್ಯರನ್ನು ಆಯ್ಕೆ ಮಾಡಲಾಗಿದೆ. ಮೇಲಿನ ಮೂರೂ ಸಂಘಗಳಿಂದ ತಲಾ ಐದು ಸಂಘಗಳನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ನಂತರ ಇದರಲ್ಲಿ ಕ್ರಮವಾಗಿ ೩೪, ೩೩, ೩೩ ಸದಸ್ಯರನ್ನು ಮಾದರಿ ಸದಸ್ಯರನ್ನಾಗಿ ಆಯ್ಕೆಗೊಳಿಸಿ ಅವರಿಂದ ಮಾಹಿತಿ ಪಡೆಯಲಾಗಿದೆ. ಮಾದರಿ ಸದಸ್ಯರ ಆಯ್ಕೆಗೊಳಿಸುವ ಸಂದರ್ಭದಲ್ಲಿ ಯಾವುದೇ ರಿತಿಯ ನಿರ್ದಿಷ್ಟ ಮಾನದಂಡಗಳಿಲ್ಲದೆ ಆರಿಸಲಾಗಿದೆ. ಹಲವು ವರ್ಷಗಳಿಂದ ಸದಸ್ಯತ್ವ ಹೊಂದಿದ ಮಹಿಳೆಯರಿಂದ ಮಾಹಿತಿ ಪಡೆಯಲಾಗಿದೆ. ಸುಳ್ಯ ತಾಲೂಕಿನ ವಿವಿಧ ಭಾಗಗಳಿಗೆ ಭೇಟಿ ನೀಡಿ ಅಲ್ಲಿನ ಸ್ವಸಹಾಯ ಸಂಘಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಸ್ವಸಹಾಯ ಸಂಘಗಳು ಸಭೆ ನಡೆಸುವ ಸಂದರ್ಭ ಭೇಟಿ ನೀಡಿ ಮಾಹಿತಿ ಕಲೆ ಹಾಕಲಾಗಿದೆ. ಹೀಗೆ ಸುಳ್ಯ ತಾಲೂಕಿನಲ್ಲಿ ಮಹಿಳೆಯರ ಸಬಲೀಕರಣಕ್ಕೆ ಸ್ವಸಹಾಯ ಸಂಘಗಳು ಹೇಗೆ ಪೂರಕವಾಗಿದೆ ಎಂದು ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಾಯ – ೪

ಸ್ವಸಹಾಯ ಸಂಘಗಳು ಮತ್ತು ಮಹಿಳಾ ಸಬಲೀಕರಣ, ವಿಶ್ಲೇಷಣೆ

೪.೧ ದತ್ತಾಂಶ ವಿಶ್ಲೇಷಣೆ: ಪೀಠಿಕೆ

೪.೨ ಮಾದರಿ ಸಮೀಕ್ಷೆಯ ವಿಶ್ಲೇಷಣೆ

೪.೩ ಮಾದರಿ ಸದಸ್ಯರ ಸಮಾನ್ಯ ಮಾಹಿತಿ

೪.೪ ಮಾದರಿ ಸದಸ್ಯರ ಆರ್ಥಿಕ ಬದಲಾವಣೆ

೪.೫ ಮಾದರಿ ಸದಸ್ಯರ ಸಾಮಾಜಿಕ ಬದಲಾವಣೆ

೪.೬ ಸ್ವಸಹಾಯ ಸಂಘದಲ್ಲಿ ಸಾಲ, ಹಣಕಾಸಿನ ನಿರ್ವಹಣೆ

೪.೧ ದತ್ತಾಂಶ ವಿಶ್ಲೇಷಣೆ: ಪೀಠಿಕೆ

ಸುಳ್ಯ ತಾಲೂಕು ಹಳ್ಳಿಗಳ ಪ್ರದೇಶ. ಗ್ರಾಮೀಣ ಭಾಗದ ಜನರು ಹೆಚ್ಚಾಗಿ ನಗರ ಪ್ರದೇಶದ ಜನರಂತೆ ಮುಂದುವರೆದಿಲ್ಲ. ಇಲ್ಲಿನ ಜನರು ಅವರಲ್ಲೂ ಮುಖ್ಯವಾಗಿ ಮಹಿಳೆಯರು ಊರಿನ ಶ್ರೀಮಂತರಲ್ಲಿ ಅಥವಾ ಕೃಷಿಕರಲ್ಲಿ ಕೂಲಿ ಕಾರ್ಮಿಕರಾಗಿ ದುಡಿಯಬೇಕಾಗಿತ್ತು. ಅವರದ್ದೇ ಆದ ಒಂದು ಸಂಘಟನೆಯಿಲ್ಲದೆ, ಔದ್ಯೋಗಿಕವಾಗಿ ಯಾವುದೇ ಭದ್ರತೆ ಇಲ್ಲದೆ ಜೀವನ ನಡೆಸಬೇಕಾಗಿತ್ತು. ದುಡಿಮೆಗೆ ಸರಿಯಾದ ವೇತನ ಸಿಗದೆ, ವೇತನ ತಾರತಮ್ಯದಂತಹ ಸಮಸ್ಯೆಯಿಂದಾಗಿ ಜೀವನ ನಿರ್ವಹಣೆ ಕಷ್ಟವಾಗಿತ್ತು. ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲದೆ, ಗಳಿಸಿದ ಆದಾಯದಲ್ಲಿ ಉಳಿತಾಯವಿಲ್ಲದೆ, ನೆಮ್ಮದಿಯಿಲ್ಲದ ಜೀವನ ನಡೆಸಬೇಕಾದ ಪರಿಸ್ಥಿತಿಯಿತ್ತು.

ಆದರೆ ಸ್ವಸಹಾಯ ಸಂಘಗಳು ಪ್ರಾರಂಭವಾದ ನಂತರ ಮಹಿಳೆಯರಲ್ಲಿ ಸಂಘಟನಾ ಮನೋಭಾವ ಬೆಳೆಯಿತು. ಮಹಿಳೆಯರರು ತಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ಪಡೆಯುವಲ್ಲಿ ಸಫಲರಾದರು. ಇನ್ನೊಬ್ಬರ ಅಡಿಯಾಳಾಗಿ ದುಡಿಯುವ ಬದಲಾಗಿ ಸ್ವಉದ್ಯೋಗದತ್ತ ಗಮನ ಹರಿಸಿದರು. ಇದರಿಂದಾಗಿ ಇಂದು ಮಹಿಳೆಯರು ಆರ್ಥಿಕವಾಗಿ ಸದೃಢರಾಗುತ್ತಿದ್ದಾರೆ. ತಮಗೆ ಸಿಗಬೇಕಾದ ಸವಲತ್ತುಗಳನ್ನು ಪಡೆಯುವಷ್ಟು ಜ್ಞಾನವಂತರಾಗುತ್ತಿದ್ದಾರೆ. ಮಕ್ಕಳನ್ನು ಶಾಲೆಗೆ ಕಳುಹಿಸಿ ಅವರಿಗೆ ವಿದ್ಯಾಭ್ಯಾಸ ಒದಗಿಸುವಲ್ಲಿ ಸಫಲರಾಗಿದ್ದಾರೆ. ತಮ್ಮ ಸುತ್ತಮುತ್ತಲಿನ ಮಹಿಳೆಯರನ್ನೆಲ್ಲ ಒಟ್ಟುಗೂಡಿಸಿ ಸಂಘಗಳನ್ನು ರಚಿಸುವತ್ತ ಗಮನಹರಿಸುತ್ತಿದ್ದಾರೆ. ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಭಾಗವಹಿಸುವುದರಿಂದ ತೊಡಗಿ ರಾಜಕೀಯವಾಗಿಯೂ ಸ್ಥಾನ ಗಿಟ್ಟಿಸಿಕೊಳ್ಳುತ್ತಿದ್ದಾರೆ. ಒಟ್ಟಾಗಿ ಹೇಳುವುದಾದರೆ ಸ್ವ–ಸಹಾಯ ಸಂಘಗಳು ಪ್ರಾರಂಭಗೊಂಡ ನಂತರ ಮಹಿಳೆಯರು ಸಾಮಾಜಿಕವಾಗಿ, ಆರ್ಥಿಕವಾಗಿ ಸದೃಢರಾಗುತ್ತಿದ್ದಾರೆ. ಸ್ವತಂತ್ರವಾಗಿ ಯೋಚಿಸಿ ನಿರ್ಧಾರಗಳನ್ನು ಕೈಗೊಳ್ಳುವಷ್ಟು ಸ್ವಾವಲಂಬಿಗಳಾಗಿದ್ದರೆ.

ಸುಳ್ಯ ತಾಲೂಕಿನಲ್ಲಿ ಪ್ರಮುಖವಾಗಿರುವ ಸ್ತ್ರೀಶಕ್ತಿ ಯೋಜನೆ ಸ್ವ–ಸಹಾಯ ಸಂಘಗಳು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ನವೋದಯ ಸ್ವ–ಸಹಾಯ ಸಂಘಗಳು ಮಹಿಳೆಯರಿಗೆ

ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸದೃಢಗಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಮುಖ್ಯವಾಗಿ ಇಲ್ಲಿನ ಜನರು ಜೀವನೋಪಾಯಕ್ಕಾಗಿ ಕೃಷಿಯನ್ನೇ ಅವಲಂಬಿಸಿದ್ದಾರೆ. ಆದುದರಿಂದ ಈ ಎಲ್ಲಾ ಸಂಘಗಳು ಕೃಷಿಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತವೆ.

ಅಲ್ಲದೆ ಕೃಷಿಪೂರಕವಾದ ಉದ್ಯೋಗಗಳಾದ ಪಶುಪಾಲನೆ, ಹೈನುಗಾರಿಕೆ ಇವೇ ಮುಂತಾದವುಗಳಿಗೆ ಪ್ರೋತ್ಸಾಹ ನೀಡುತ್ತದೆ. ಅಗರಬತ್ತಿ ತಯಾರಿ, ಸೋಪು, ಫಿನಾಯಿಲ್‌ಗಳ ತಯಾರಿಯಂತಹ ಸ್ವ-ಉದ್ಯೋಗಗಳಿಗೆ ಪ್ರೋತ್ಸಾಹ ನೀಡುತ್ತಾ ತರಬೇತಿಯನ್ನು ನೀಡುತ್ತಿದೆ. ಇಷ್ಟೇ ಅಲ್ಲದೆ ಮಹಿಳೆಯರು ಬೆಳೆದ ಬೆಳೆಗಳಿಗೆ, ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆಯನ್ನು ಸಹ ಒದಗಿಸಿಕೊಡುತ್ತದೆ. ಹೀಗಾಗಿ ಮಹಿಳೆಯರು ಸ್ವಾವಲಂಬಿಗಳಾಗುವಲ್ಲಿ, ಸದೃಢರಾಗುವಲ್ಲಿ, ಸ್ವಯಂ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಈ ಸ್ವ-ಸಹಾಯ ಸಂಘಗಳು ಸಹಕಾರಿಯಾಗಿದೆ.

೪.೨ ಮಾದರಿ ಸಮೀಕ್ಷೆಯ ವಿಶ್ಲೇಷಣೆ

ಪ್ರಸ್ತುತ ಅಧ್ಯಯನಕ್ಕೆ ಬೇಕಾದ ಪ್ರಾಥಮಿಕ ಮಾಹಿತಿಯನ್ನು ಕ್ಷೇತ್ರಕಾರ್ಯ ನಡೆಸುವ ಮೂಲಕ ಸಂಗ್ರಹಿಸಲಾಗಿದೆ. ಸುಳ್ಯ ತಾಲೂಕಿನ ವಿವಿಧ ಭಾಗಗಳಿಂದ ಆಯ್ದ ಸಂಘಗಳಿಗೆ ಭೇಟಿ ನೀಡಿ ಒಟ್ಟು ೧೦೦ ಸದಸ್ಯರಿಂದ ಮಾಹಿತಿಯನ್ನು ಕಲೆ ಹಾಕಲಾಗಿದೆ. ಹೀಗೆ ಸಂಗ್ರಹಿಸಿದ ಮಾಹಿತಿಯ ವಿಶ್ಲೇಷಣೆಯನ್ನು ಮಾಡಲಾಗಿದೆ. ಅಧ್ಯಯನಕ್ಕೆ ಆಯ್ಕೆ ಮಾಡಿದ ಸರಕಾರೇತರ ಸಂಸ್ಥೆಯಾದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವ-ಸಹಾಯ ಸಂಘಗಳು, ಸರಕಾರ ನಡೆಸುತ್ತಿರುವ ಸ್ತ್ರೀಶಕ್ತಿ ಯೋಜನೆ ಸ್ವ-ಸಹಹಾಯ ಸಂಘಗಳು ಹಾಗೂ ಸಹಕಾರಿ ರಂಗದ ನವೋದಯ ಸ್ವ-ಸಹಾಯ ಸಂಘಗಳು ಇವುಗಳ ಕುರಿತಾದ ಮಾಹಿತಿಯನ್ನು ನೀಡಲಾಗಿದೆ. ಮುಂದೆ ಈ ಸಂಘಗಳಿಂದ ಆಯ್ಕೆಗೊಳಿಸಿದ ಸದಸ್ಯರುಗಳು ನೀಡಿದ ಮಾಹಿತಿಯ ಆಧಾರದಲ್ಲಿ ವಿಶ್ಲೇಷಣೆ ನಡೆಸಲಾಗಿದೆ.

ಓಗೆ ಆಯ್ಕೆ ಮಾಡಿದ ಸಂಘಗಳ ಸದಸ್ಯರಿಂದ ಮಾಹಿತಿ ಪಡೆಯಲು ಪ್ರಶ್ನಾವಳಿಯೊಂದನ್ನು ಸಿದ್ಧಪಡಿಸಿ ಕ್ಷೇತ್ರಕಾರ್ಯ ನಡೆಸಲಾಯಿತು. ಪ್ರಶ್ನಾವಳಿಯನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಸಂಘದಲ್ಲಿ

ಮಹಿಳೆಯರ ಸಹಭಾಗಿತ್ವ, ಅವರ ಕುಟುಂಬದ ಶ್ರೇಯೋಭಿವೃದ್ಧಿ ಮುಂತಾದ ವಿಷಯಗಳ ಕುರಿತು ಮಾಹಿತಿ ಸಂಗ್ರಹಿಸುವ ದೃಷ್ಟಿಯನ್ನಿಟ್ಟುಕೊಂಡು ಪ್ರಶ್ನೆಗಳನ್ನು ಸೇರಿಸಲಾಗಿದೆ. ಪ್ರಶ್ನಾವಳಿಯನ್ನು ರಚಿಸುವ ಹಂತದಲ್ಲಿ ಸ್ವ-ಸಹಾಯ ಸಂಘದಲ್ಲಿರುವ ಮಹಿಳೆಯರ ಕೌಟುಂಬಿಕ ಹಾಗೂ ಸಾಮಾಜಿಕ ಸ್ಥಿತಿಗತಿ, ಸಂಘದಿಂದಾಗಿ ಆದ ಬದಲಾವಣೆ, ಆರ್ಥಿಕ ಸ್ಥಿತಿಯಲ್ಲಿ ಆದ ಬದಲಾವಣೆ ಮುಂತಾದ ವಿಷಯಗಳನ್ನು ಗಮನದಲ್ಲಿಟ್ಟು ಪ್ರಶ್ನೆಗಳನ್ನು ಸೇರಿಸಲಾಗಿದೆ. ಸಂದರ್ಭಕ್ಕೆ ಅನುಗುಣವಾಗಿ ಕೇಳಿದ ಕೆಲವು ಪ್ರಶ್ನೆಗಳು ಉತ್ತಮ ಮಾಹಿತಿ ನೀಡುತ್ತವೆ. ಮಹಿಳೆಯರು ಸಂಘಕ್ಕೆ ಸೇರಲು ಪ್ರೇರಕವಾದ ಅಂಶಗಳು, ಗುಂಪಿನಿಂದ ಪಡೆದ ಸಾಲ ಸೌಲಭ್ಯದ ಮಾಹಿತಿ, ಸಾಲ ಪಡೆದ ಉದ್ದೇಶ, ಮಾಹಿತಿದಾರರ ಶಿಕ್ಷಣ, ಔದ್ಯೋಗಿಕವಾಗಿ ಆದ ಬದಲಾವಣೆ ಕುರಿತು ಮಾಹಿತಿಯನ್ನು ಪ್ರಶ್ನಾವಳಿಯ ಮೂಲಕ ಪಡೆಯಲಾಗಿದೆ.

ಸುಳ್ಯ ತಾಲೂಕಿನಲ್ಲಿ ಶ್ರೀ ಕ್ಷೇತ್ರಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ನವೋದಯ ಸ್ವ-ಸಹಾಯ ಸಂಘಗಳು, ಸ್ತ್ರೀಶಕ್ತಿ ಯೋಜನೆ ಸ್ವ-ಸಹಾಯ ಸಂಘಗಳು, ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ, ಒಡಿಯೂರು ಶ್ರೀ ಗ್ರಾಮ ವಿಕಾಸ ವಿವಿಧೋದ್ದೇಶ ಯೋಜನೆ ಸಕ್ರಿಯವಾಗಿವೆ. ಆದರೆ ಇವುಗಳಲ್ಲಿ ಪ್ರಮುಖವಾದ ಸಂಘಗಳೆಂದರೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ನವೋದಯ ಸ್ವ-ಸಹಾಯ ಸಂಘಗಳು ಹಾಗೂ ಸ್ತ್ರೀಶಕ್ತಿ ಯೋಜನೆ ಸ್ವ-ಸಹಾಯ ಸಂಘಗಳು. ಆದುದರಿಂದ ಈ ಮೂರು ಸಂಘಗಳನ್ನು ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಲಾಗಿದೆ.

ಸ್ತ್ರೀಶಕ್ತಿ ಯೋಜನೆ ಸ್ವ-ಸಹಾಯ ಸಂಘಗಳು

ಸುಳ್ಯ ತಾಲೂಕಿನಲ್ಲಿ ಒಟ್ಟು ೨೮೬ ಸ್ತ್ರೀಶಕ್ತಿ ಯೋಜನೆ ಸ್ವ-ಸಹಾಯ ಸಂಘಗಳಲ್ಲಿ ಮಹಿಳೆಯರು ಭಾಗವಹಿಸಿ ಸಂಘದ ಪ್ರಯೋಜನವವನ್ನು ಪಡೆದುಕೊಳ್ಳುತ್ತಿದ್ದಾರೆ.ಇವುಗಳಲ್ಲಿ ಬೇರೆಬೇರೆ ಗ್ರಾಮಗಳಿಂದ ಆಯ್ದ ೫ ಸಂಘಗಳಿಂದ ೩೪ ಸದಸ್ಯರನ್ನು ಭೇಟಿಮಾಡಿ ಅವರಿಂದ ಮಾಹಿತಿ ಪಡೆಯಲಾಗಿದೆ. ಸ್ತ್ರೀ ಶಕ್ತಿ ಸಂಘಗಳ ವಾರದ ಸಭೆಗಳಿಗೂ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಾಗಿದೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಭಿವೃದ್ಧಿ ಯೋಜನೆ

ಸುಳ್ಯ ತಾಲೂಕಿನಲ್ಲಿ ೨೦೦೫ರಲ್ಲಿ ಪ್ರಾರಂಭಗೊಂಡ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ಒಟ್ಟು ೧,೦೧೫ ಮಹಿಳಾ ಸಂಘಗಳಿದ್ದು ಮಹಿಳೆಯರು ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ವಿವಿಧ ಭಾಗಗಳಿಂದ ಒಟ್ಟು ೫ ಸಂಘಗಳನ್ನು ಆಯ್ಕೆ ಮಾಡಿಕೊಂಡು ಒಟ್ಟು ೩೩ ಸದಸ್ಯರಿಂದ ಮಾಹಿತಿ ಪಡೆಯಲಾಗಿದೆ.

ನವೋದಯ ಸ್ವಸಹಾಯ ಸಂಘಗಳು

ಸುಳ್ಯ ತಾಲೂಕಿನಲ್ಲಿ ಒಟ್ಟು ೮೯೭ ಮಹಿಳಾ ಸಂಘಗಳು ಸಕ್ರಿಯವಾಗಿದ್ದು ಯೋಜನೆಯು ೨೦೦೫ರಲ್ಲಿ ಪ್ರಾರಂಭಗೊಂಡಿತು. ಒಟ್ಟು ೮೦೦೦ಕ್ಕೂ ಅಧಿಕ ಮಹಿಳೆಯರರು ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದಾರೆ. ಬೇರೆಬೇರೆ ಭಾಗಗಳ ಒಟ್ಟು ೫ ಸಂಘಗಳನ್ನು ಆಯ್ಕೆಗೊಳಿಸಿ ಒಟ್ಟು ೩೩ ಸದಸ್ಯರಿಂದ ಮಾಹಿತಿ ಪಡೆಯಲಾಗಿದೆ.

ಹೀಗೆ ಮೂರು ಸಂಘಗಳ ಒಟ್ಟು ೧೦೦ ಸದಸ್ಯರನ್ನು ಭೇಟಿಮಾಡಿ ಪ್ರಶ್ನಾವಳಿಗಳನ್ನು ನೀಡಿ ಅವರಿಂದ ಮಾಹಿತಿ ಪಡೆಯಲಾಗಿದೆ. ಅಲ್ಲದೆ ಈ ಮಾಹಿತಿಗೆ ಪೂರಕವಾಗುವಂತೆ ಕೆಲವು ಪ್ರಮುಖ ವ್ಯಕ್ತಿಗಳ ಸಂದರ್ಶನ ನಡೆಸಿ ಮಾಹಿತಿ ಸಂಗ್ರಹಿಸಲಾಗಿದೆ. ಸಂದರ್ಶನದ ಮಾಹಿತಿಯು ಪ್ರಶ್ನಾವಳಿಯ ಮಾಹಿತಿಗಿಂತಲೂ ನಿಖರವಾಗಿರುವುದರಿಂದ ಈ ಮೂಲಕವೂ ಮಾಹಿತಿ ಕಲೆಹಾಕಲಾಗಿದೆ. ಸ್ವ-ಸಹಾಯ ಸಂಘಗಳ ಸೇವಾನಿರತರು, ಯೋಜನಾಧಿಕಾರಿಗಳು, ಸೇವಾಪ್ರತಿನಿಧಿಗಳು, ತಾಲೂಕು ಪ್ರಮುಖರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ತಾಲೂಕು ಮೇಲ್ವಿಚಾರಕರು, ಅಂಗನವಾಡಿ ಕಾರ್ಯಕರ್ತೆಯರು ಇವರೆಲ್ಲರ ಸಂದರ್ಶನ ನಡೆಸಿ ಮಾಹಿತಿ ಸಂಗ್ರಹಿಸಲಾಗಿದೆ. ಹೀಗೆ ಸಂದರ್ಶನ ನಡೆಸಿ ಪಡೆದುಕೊಂಡ ಮಾಹಿತಿ ಹಾಗೂ ಪ್ರಶ್ನಾವಳಿ ಮೂಲಕ ಸಂಗ್ರಹಿಸಿದ ಮಾಹಿತಿ ಇವುಗಳೆಲ್ಲವನ್ನೂ ಸೇರಿಸಿ ವಿಶ್ಲೇಷಣೆ ನಡೆಸಲಾಗಿದೆ. ಸಂಘಗಳಲ್ಲಿ ಮಹಿಳೆಯರು ನಡೆಸುತ್ತಿರುವ ಉಳಿತಾಯದ ಕ್ರಮ, ಅವರ ಚಟುವಟಿಕೆಗಳು, ಸಂಘಕ್ಕೆ ಸೇರಿದ ನಂತರ ಅವರ ಜೀವನದಲ್ಲಿಅದ ಬದಲಾವಣೆ, ಆರ್ಥಿಕ

ಪರಿಸ್ಥಿತಿಯ ಸುಧಾರಣೆ ಇವೇ ಮುಂತಾದ ವಿಷಯಗಳನ್ನು ಹಂತಹಂತವಾಗಿ ವಿಶ್ಲೇಷಿಸಲಾಗಿದೆ. ಪ್ರಶ್ನಾವಳಿಯ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ಕೋಷ್ಟಕಗಳ ಮೂಲಕ ವಿವರಿಸಲಾಗಿದೆ.

೪.೩ ಮಾದರಿ ಸದಸ್ಯರ ಸಾಮನ್ಯ ಮಾಹಿತಿ

ಸ್ವ–ಸಹಾಯ ಸಂಘದ ಸದಸ್ಯರ ಮಾಹಿತಿ ಸಂಗ್ರಹಿಸುವ ಸಂದರ್ಭದಲ್ಲಿ ಸದಸ್ಯರ ಸಾಮಾನ್ಯ ಮಾಹಿತಿ ಬಗ್ಗೆ ಪ್ರಶ್ನೆಗಳನ್ನು ಕೇಳಿ ಮಾಹಿತಿ ಪಡೆಯಲಾಗದೆ. ಇಲ್ಲಿ ಸದಸ್ಯರ ಸಾಮಾನ್ಯ ಮಾಹಿತಿ ಎಂದರೆ ಸದಸ್ಯರ ವಯಸ್ಸು, ಅವರ ವಿದ್ಯಾರ್ಹತೆ, ಅವರು ಜೀವನೋಪಾಯಕ್ಕಾಗಿ ಅವಲಂಬಿಸಿರುವ ವೃತ್ತಿ, ಸಂಘದಲ್ಲಿ ಅವರ ಅನುಭವಗಳ ಕುರಿತಾಗಿ ಆಗಿದೆ. ಅಲ್ಲದೆ ಸಂಘಕ್ಕೆ ಸೇರಲು ಅವರಿಗೆ ಪ್ರೇರಣೆ ನೀಡಿದ ಅಂಶಗಳನ್ನೂ ತಿಳಿಯಲಾಗಿದೆ.

ಕೋಷ್ಟಕ: ೧

ಸ್ವ–ಸಹಾಯ ಸಂಘದ ಸದಸ್ಯರ ವಯಸ್ಸು

ವಯಸ್ಸು	ನವೋದಯ	ಸ್ತ್ರೀಶಕ್ತಿ	ಧರ್ಮಸ್ಥಳ	ಒಟ್ಟು
೧೮-೨೫	೨	-	-	೨
೨೬-೩೫	೮	೯	೬	೨೩
೩೬-೫೦	೧೬	೨೨೩	೨೦	೫೯
೫೧ ಮತ್ತು ಅಧಿಕ	೭	೨	೭	೧೬
ಒಟ್ಟು	೩೩	೩೪	೩೩	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಕೋಷ್ಠಕ ೧ ರಲ್ಲಿ ಸುಳ್ಯ ತಾಲೂಕಿನಲ್ಲಿ ಆಯ್ದ ಸ್ವಸಹಾಯ ಸಂಘದ ಸದಸ್ಯರ ವಯೋಮಾನದ ಕುರಿತಾಗಿ ಮಾಹಿತಿ ನೀಡಲಾಗಿದೆ. ಇಲ್ಲಿ ೧೮ ರಿಂದ ಸುಮರು ೬೦ ವರ್ಷ ವಯಸ್ಸಿನ ಮಹಿಳೆಯರು ಸ್ವ–ಸಹಾಯ ಸಂಘಗಳಲ್ಲಿ ತಮ್ಮಲ್ಲಿ ತಾವು ತೊಡಗಿಸಿಕೊಂಡಿರುವುದನ್ನು ಕಾಣಬಹುದಾಗಿದೆ.ಮೇಲಿನ

ಅಂಕಿ ಅಂಶಗಳನ್ನು ಗಮನಿಸಿದಾಗ ಯುವತಿಯರು ಅಂದರೆ ೧೮ ರಿಂದ ೨೫ ವರ್ಷದೊಳಗಿನವರು ಕೇವಲ ೨%ದಷ್ಟು ಮಾತ್ರ ಸ್ವ-ಸಹಾಯ ಸಂಘಗಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇನ್ನು ೨೩% ಮಹಿಳೆಯರು ೨೬ ರಿಂದ ೩೫ ವರ್ಷ ವಯಸ್ಸಿನ ಒಳಗಿನವರು. ಅತಿ ಹೆಚ್ಚು ಪ್ರಮಾಣದಲ್ಲಿ ಅಂದರೆ ೫೯% ದಷ್ಟು ೩೬ ರಿಂದ ೫೦ ವರ್ಷ ವಯಸ್ಸಿನ ಮಹಿಳೆಯರು ತೊಡಗಿಸಿಕೊಂಡಿದ್ದಾರೆ. ಅಂದರೆ ಇಲ್ಲಿ ಸಂಸಾರದ ಜವಾಬ್ದಾರಿಯನ್ನು ನಿಭಾಯಿಸಲು ಮಹಿಳೆಯರು ಸಹ ಪುರುಷರಂತೆಯೇ ಕೈಜೋಡಿಸಲು ಮುಂದೆ ಬಂದಿರುವುದನ್ನು ಗಮನಿಸಬಹುದಾಗಿದೆ. ಇನ್ನು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ೫೧ ಹಾಗೂ ಮೇಲ್ಪಟ್ಟ ವಯಸ್ಸಿನ ೧೬% ದಷ್ಟು ಮಹಿಳೆಯರು ಸ್ವ-ಸಹಾಯ ಸಂಘದಲ್ಲಿ ಸದಸ್ಯರಾಗಿದ್ದಾರೆ.

ಕೋಷ್ಟಕ: ೨

ಸ್ವ-ಸಹಾಯ ಸಂಘದ ಸದಸ್ಯರ ವಿದ್ಯಾರ್ಹತೆ

ವಿದ್ಯಾರ್ಹತೆ	ನವೋದಯ	ಸ್ತ್ರೀಶಕ್ತಿ	ಧರ್ಮಸ್ಥಳ	ಒಟ್ಟು
ಪ್ರಾಥಮಿಕ	೧೮	೧೪	೧೭	೪೯
ಪ್ರೌಢ	೧೨	೧೬	೧೦	೩೮
ಪದವಿ ಪೂರ್ವ ಪದವಿ	೨	೨	೪	೮
ಅನಕ್ಷರಸ್ಥ	೧	೨	೨	೫೨
ಒಟ್ಟು	೩೩	೩೪	೩೩	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಕೋಷ್ಠಕ ೨ರಲ್ಲಿ ಸುಳ್ಯ ತಾಲೂಕಿನ ವಿವಿಧ ಭಾಗಗಳಿಂದ ಆಯ್ದ ಸ್ವ-ಸಹಾಯ ಸಂಘದ ಸದಸ್ಯರ ವಿದ್ಯಾರ್ಹತೆಯನ್ನು ಕುರಿತು ವಿವರಿಸಲಾಗಿದೆ. ವಿವಿಧ ಸಂಘಗಳಲ್ಲಿ ತೊಡಗಿಸಿಕೊಂಡಿರುವವರ ಪೈಕಿ ೪೯% ಮಹಿಳೆಯರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಹೊಂದಿದ್ದಾರೆ. ೩೮% ದಷ್ಟು ಮಹಿಳೆಯರು ಪ್ರೌಢಶಾಲಾ ಶಿಕ್ಷಣವನ್ನು ಗಳಿಸಿದವರಾಗಿದ್ದಾರೆ. ಇನ್ನುಳಿದಂತೆ ೮% ದಷ್ಟು ಮಹಿಳೆಯರು

ಪದವಿಪೂರ್ವ ಹಾಗೂ ಪದವಿ ವಿದ್ಯಾಭ್ಯಾಸ ಹೊಂದಿದ ಮಹಿಳೆಯರಾಗಿದ್ದು ಗ್ರಾಮೀಣ ಪ್ರದೇಶದ ಮಹಿಳೆಯರು ಸಹ ಕಾಲೇಜು ಶಿಕ್ಷಣವನ್ನು ಪಡೆಯುತ್ತಿದ್ದಾರೆ ಎಂಬುದನ್ನು ಈ ಅಂಕಿ ಅಂಶ ತೋರಿಸಿಕೊಡುತ್ತದೆ. ಅದಾಗ್ಯೂ ೫% ದಷ್ಟು ಮಹಿಳೆಯರು ಅನಕ್ಷರಸ್ಥರಾಗಿದ್ದರೆ. ಅನಕ್ಷರಸ್ಥರೂ ಸಹ ಸಂಘಗಳಲ್ಲಿ ತೊಡಗಿಸಿಕೊಂಡು ತಾವೂ ಕೂಡಾ ಸಮಾಜದಲ್ಲಿ ಎಲ್ಲರಂತೆ ಮುಂದೆ ಬರಬೇಕೆಂಬ ಹಂಬಲದೊಂದಿಗೆ ಮುಂದುವರಿಯುತ್ತಿದ್ದಾರೆ. ಸಂಘದ ಸದಸ್ಯರು ನೀಡಿದ ಮಾಹಿತಿಯ ಪ್ರಕಾರ ಅನಕ್ಷರಸ್ಥರಾಗಿದ್ದರೂ ಸಂಘಕ್ಕೆ ಸೇರಿದ ಬಳಿಕ ತಮ್ಮ ಹೆಸರನ್ನು ಬರೆಯುವಷ್ಟರ ಮಟ್ಟಿಗೆ ಅಕ್ಷರ ಜ್ಞಾನ ಕಲಿತಿದ್ದಾರೆ. ಈ ವಿಷಯವನ್ನು ಮಹಿಳೆಯರು ಅತ್ಯಂತ ಹೆಮ್ಮೆಯಿಂದ ಹಂಚಿಕೊಳ್ಳುತ್ತಾರೆ.

ಕೋಷ್ಟಕ: ೩

ಸ್ವ-ಸಹಾಯ ಸಂಘದ ಸದಸ್ಯರು ಅವಲಂಬಿಸಿರುವ ವೃತ್ತಿ

ಸಂಘದ ಹೆಸರು	ಕೂಲಿ	ಮನೆ ವಾರ್ತೆ	ಕೃಷಿ	ಖಾಸಗಿ ಉದ್ಯೋಗ	ಸರಕಾರಿ ಉದ್ಯೋಗ	ಸ್ವ-ಉದ್ಯೋಗ	ಒಟ್ಟು
ನವೋದಯ	೨೦	೨	೯	-	-	೨	೩೩
ಸ್ತ್ರೀಶಕ್ತಿ	೧೬	೫	೯	-	೨	೨	೩೪
ಧರ್ಮಸ್ಥಳ	೩	೧೪	೧	೩	೧	೧೧	೩೩
ಒಟ್ಟು	೩೯	೨೧	೧೯	೩	೩	೧೫	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಕೋಷ್ಠಕ ೩ರಲ್ಲಿ ಸುಳ್ಯ ತಾಲೂಕಿನ ವಿವಿಧ ಭಾಗಗಳಿಂದ ಆಯ್ದ ನವೋದಯ ಸ್ವ-ಸಹಾಯ ಸಂಘಗಳು, ಸ್ತ್ರೀಶಕ್ತಿ ಸ್ವ-ಸಹಾಯ ಸಂಘಗಳು ಹಾಗೂ ಧರ್ಮಸ್ಥಳ ಸ್ವ-ಸಹಾಯ ಸಂಘಗಳ ಸದಸ್ಯರು ಅವವಲಂಬಿಸಿರುವ ವೃತ್ತಿಯ ಕುರಿತಾದ ವಿವರಣೆ ನೀಡಲಾಗಿದೆ. ಸ್ವ-ಸಹಾಯ ಸಂಘದ ಪ್ರತಿಯೊಬ್ಬ ಸದಸ್ಯರೂ ಸಹ ಒಂದಲ್ಲ ಒಂದು ರೀತಿಯ ಉದ್ಯೋಗದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಸಂಘದ ಸದಸ್ಯರಲ್ಲಿ ಕೆಲವರು ಕೂಲಿಕಾರ್ಮಿಕರಾಗಿ, ಇನ್ನು ಕೆಲವರು ಮನೆವಾರ್ತೆ ಗಮನಿಸುತ್ತಾ ಮತ್ತು ಕೆಲವರು ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಇಷ್ಟೇ ಅಲ್ಲದೆ ಖಾಸಗಿ ಹಾಗೂ ಸರ್ಕಾರಿ ಉದ್ಯೋಗಗಳನ್ನು ಹೊಂದಿರರುವ ಮಹಿಳೆಯರು ಸಹ ಸಂಘದ ಸದಸ್ಯರಾಗಿದ್ದಾರೆ. ಇನ್ನು ಮುಂದುವರಿದು ಸ್ವ-ಉದ್ಯೋಗ ಮಾಡಿ ಜೀವನ ಸಾಗಿಸುವ ಮಹಿಳೆಯರು ಸಂಘದ ಸಹಾಯವನ್ನು ಪಡೆದುಕೊಳ್ಳುತ್ತಿದ್ದಾರೆ.

ಮೇಲಿನ ಕೋಷ್ಟಕ ವಿವರಿಸುವಂತೆ ೩೯% ದಷ್ಟು ಮಹಿಳೆಯರು ಕೂಲಿಕಾರ್ಮಿಕರಾಗಿದ್ದು ೨೧% ದಷ್ಟು ಮಹಿಳೆಯರು ಮನೆವಾರ್ತೆಯನ್ನು ನೋಡಿಕೊಳ್ಳುತ್ತಾ ಸಂಘದ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದಾರೆ. ೧೯% ದಷ್ಟು ಮಹಿಳೆಯರು ಕೃಷಿಯನ್ನು ತಮ್ಮ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ೩% ಮಹಿಳೆಯರು ಖಾಸಗಿ ಸಂಸ್ಥೆ ಉದ್ಯೋಗಿಗಳು ಹಾಗೂ ೩% ಮಹಿಳೆಯರು ಸರಕಾರಿ ಉದ್ಯೋಗಿಗಳಾಗಿದ್ದು ಸಂಘದ ಸದಸ್ಯರಾಗಿದ್ದಾರೆ. ಇನ್ನು ಮುಖ್ಯವಾಗಿ ೧೫% ದಷ್ಟು ಮಹಿಳೆಯರು ಜೀವನೋಪಾಯಕ್ಕಾಗಿ ಸ್ವ-ಉದ್ಯೋಗವನ್ನು ಅವಲಂಬಿಸಿದ್ದಾರೆ.

ಕೋಷ್ಟಕ: ೪

ಸ್ವ-ಸಹಾಯ ಸಂಘದ ಸದಸ್ಯತ್ವದ ಅವಧಿ

ಸಂಘದ ಹೆಸರು	೧-೫ ವರ್ಷ	೬-೧೦ ವರ್ಷ	೧೧ ಮತ್ತು ಅಧಿಕ	ಒಟ್ಟು
ನವೋದಯ	೨೦	೧೦	೩	೩೩
ಸ್ತ್ರೀಶಕ್ತಿ	೬	೯	೧೯	೩೪
ಧರ್ಮಸ್ಥಳ	೪	೧೮	೧೧	೩೩
ಒಟ್ಟು	೩೦	೩೭	೩೩	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಕೋಷ್ಟಕ ೪ರಲ್ಲಿ ಸ್ವ-ಸಹಾಯ ಸಂಘಗಳಲ್ಲಿ ಮಹಿಳೆಯರ ಸದಸ್ಯತ್ವದ ಅವಧಿಯ ಕುರಿತಾಗಿ ಹೇಳಲಾಗಿದೆ. ಒಟ್ಟು ಸದಸ್ಯರಲ್ಲಿ ೩೦% ಸದಸ್ಯರು ೧ ರಿಂದ ೫ ವರ್ಷಗಳ ಸದಸ್ಯತ್ವ ಹೊಂದಿದ್ದಾರೆ. ೩೭% ದಷ್ಟು ಮಹಿಳೆಯರು ೬ ರಿಂದ ೧೦ ವರ್ಷಗಳ ಸದಸ್ಯತ್ವ ಹೊಂದಿದ್ದಾರೆ. ಇನ್ನು ೩೩% ಮಹಿಳೆಯರು ೧೧ ಕ್ಕಿಂತಲೂ ಅಧಿಕ ವರ್ಷಗಳಿಂದ ಸ್ವ-ಸಹಾಯ ಸಂಘದ ಸದಸ್ಯರಾಗಿ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ. ಇವರಲ್ಲಿ ಕೆಲವರು ಸಂಘದ ಆರಂಭಿಕ ಸದಸ್ಯರಾಗಿದ್ದಾರೆ. ಒಮ್ಮೆ ಸಂಘಕ್ಕೆ ಸೇರಿದ ಬಳಿಕ ಸಂಘದಲ್ಲೆ ಮುಂದುವರಿದು ಪ್ರಯೋಜನ ಪಡೆಯಲು ಇಚ್ಚಿಸುವುದನ್ನು ನಾವು ಇಲ್ಲಿ ಗಮನಿಸಬಹುದಾಗಿದೆ.

ಕೋಷ್ಟಕ: ೫

ಸ್ವ-ಸಹಾಯ ಸಂಘಕ್ಕೆ ಸೇರಲು ಸಲಹೆ ನೀಡಿದವರು

ಸಂಘದ ಹೆಸರು	ಸಂಘದ ಸದಸ್ಯರು	ಸ್ನೇಹಿತರು	ಇತರರು	ಒಟ್ಟು
ನವೋದಯ	೨೩	೨	೮	೩೩
ಸ್ತ್ರೀಶಕ್ತಿ	೬	೯	೧೯	೩೪
ಧರ್ಮಸ್ಥಳ	೧೧	೭	೧೫	೩೩
ಒಟ್ಟು	೪೦	೧೮	೪೨	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಕೋಷ್ಟಕ ೫ರಲ್ಲಿ ಆಯ್ಕೆಗೊಳಿಸಿದ ನಮೂನೆ ಸದಸ್ಯರಿಗೆ ಸ್ವ-ಸಹಾಯ ಸಂಘಗಳಿಗೆ ಸೇರಲು ಸಲಹೆ ನೀಡಿ ಪ್ರೇರಣೆ ನೀಡಿದವರ ಕುರಿತಾಗಿ ವಿವರಿಸಲಾಗಿದೆ. ಇಲ್ಲಿ ಮುಖ್ಯವಾಗಿ ಗ್ರಾಮಗಳಲ್ಲಿ ಕಾರ್ಯನಿರತರಾಗಿರುವ ಸೇವಾ ಪ್ರತಿನಿಧಿಗಳು, ಇತರ ಸಂಘಗಳ ಸದಸ್ಯರು, ಸಂಘಕ್ಕೆ ಸೇರಿ ಅದರ ಪ್ರಯೋಜನವನ್ನು ಪಡೆದುಕೊಂಡ ತಮ್ಮ ಸ್ನೇಹಿತರು, ಅಂಗನವಾಡಿ ಕಾರ್ಯಕರ್ತೆಯರು ಮಹಿಳೆಯರಿಗೆ ಸಂಘಗಳಿಗೆ ಸೇರಲು ಪ್ರೇರಣೆ ನೀಡಿರುವುದಾಗಿ ತಿಳಿಸಿದ್ದಾರೆ.

ಮೇಲಿನ ಕೋಷ್ಟಕ ತಿಳಿಸುವಂತೆ ೪೦% ಸದಸ್ಯರಿಗೆ ಸಂಘದ ಇತರ ಸದಸ್ಯರು ಸಂಘಕ್ಕೆ ಸೇರಲು ಪ್ರೇರಣೆ ನೀಡಿದ್ದಾರೆ. ಇನ್ನು ೧೮% ಸದಸ್ಯರಿಗೆ ಅವರ ಸ್ನೇಹಿತರು ಸಲಹೆ ನೀಡಿದ್ದಾರೆ.ಇನ್ನು ನಮೂನೆ ಸದಸ್ಯರ ಪೈಕಿ ೪೨% ಮಂದಿಗೆ ಸೇವಾ ಪ್ರತಿನಿಧಿಗಳು, ಅಂಗನವಾಡಿ ಕಾರ್ಯಕರ್ತೆಯರು ಸಂಘಕ್ಕೆ ಸೇರಲು ಸಲಹೆ ನೀಡಿದ್ದಾರೆ. ಹೀಗೆ ಗ್ರಾಮೀಣ ಮಹಿಳೆಯರು ಬೇರೆಯವರಿಂದ ಮಾಹಿತಿ ಪಡೆದು ಸಂಘಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಉತ್ತಮವಾಗಿದ್ದರೆ.

೪.೪ ಮಾದರಿ ಸದಸ್ಯರ ಆರ್ಥಿಕ ಬದಲಾವಣೆ

ಈ ರೀತಿಯಾಗಿ ಮಾದರಿ ಸದಸ್ಯರ ಸಾಮಾನ್ಯ ಮಾಹಿತಿಯನ್ನು ಪಡೆದುಕೊಳ್ಳುವವುದರ ಜೊತೆಗೆ ಸ್ವ-ಸಹಾಯ ಸಂಘಗಳಿಗೆ ಸೇರಿದ ಬಳಿಕ ಅವರ ಆರ್ಥಿಕ ಸ್ಥಿತಿಗತಿಗಳಲ್ಲಾದ ಬದಲಾವಣೆ ಕುರಿತು ಪ್ರಶ್ನೆಗಳನ್ನು ಕೇಳಲಾಗಿತ್ತು. ಈ ಪ್ರಶ್ನೆಗಳಿಗೆ ಅವರು ನೀಡಿದ ಉತ್ತರದ ಆಧಾರದ ಮೇಲೆ ನಡೆಸಲಾಗಿದೆ.

ಸುಳ್ಯ ತಾಲೂಕು ಗ್ರಾಮೀಣ ಪ್ರದೇಶವಾಗಿದ್ದು ಹೆಚ್ಚಿನ ಮಹಿಳೆಯರು ಕೂಲಿ, ಕೃಷಿಯನ್ನು ತಮ್ಮ ಜೀವನೋಪಾಯಕ್ಕಾಗಿ ಅವಲಂಬಿಸಿದ್ದಾರೆ ಎಂದು ಕೋಷ್ಟಕ ೩ರಲ್ಲಿ ಗಮನಿಸಲಾಗಿದೆ. ಕನಿಷ್ಠ ಆದಾಯ, ಶಿಕ್ಷಣ, ತರಬೇತಿಗಳ ಕೊರತೆ, ನಿರ್ಧಾರ ತೆಗೆದುಕೊಳ್ಳುವಿಕೆ ಹಾಗೂ ಮಾಹಿತಿಯ ಕೊರತೆ ಇವೇ ಮುಂತಾದವು ಗ್ರಾಮೀಣ ಮಹಿಳೆಯರ ಸಮಸ್ಯೆಗಳಾಗಿವೆ. ಗ್ರಾಮೀಣ ಪ್ರದೇಶದಲ್ಲಿ ಮನೆಗೆಲಸ ನಿರ್ವಹಿಸುವ ಕೌಶಲ್ಯತೆ ಮಹಿಳೆಗಿದೆ. ಅದರೆ ಈ ಕೌಶಲ್ಯತೆಗೆ ಮಾನ್ಯತೆ ಇಲ್ಲ. ಉದ್ಯೋಗದಲ್ಲಿ ಅವರ ಪಾಲು, ಆದಾಯ ತರುವ ಚಟುವಟಿಕೆಗಳಲ್ಲಿ ಅವರ ಭಾಗವಹಿಸುವಿಕೆಯಲ್ಲಿ ಹಲವು ರೀತಿಯ ಅಡೆತಡೆಗಳಿವೆ. ಮಹಿಳಾ ಕಾರ್ಮಿಕರು ಪುರುಷ ಕಾರ್ಮಿಕರಂತೆ ಸರಿಸಮವಾಗಿ ಕೆಲಸ ಮಾಡಲಾರರು ಎನ್ನುವ ನಂಬಿಕೆಯಿಂದ ಪುರುಷರಿಗಿಂತ ಕಡಿಮೆ ಕೂಲಿ ನೀಡಲಾಗುತ್ತಿದೆ. ಈ ಎಲ್ಲಾ ಸಮಸ್ಯೆಗಳಿಂದಾಗಿ ಮಹಿಳಾ ಸ್ವ-ಸಹಾಯ ಸಂಘಗಳು ಇಂದು ಅನೇಕ ರೀತಿಯಲ್ಲಿ ತಿಳಿಯುತ್ತಿದೆ. ಇದರಿಂದ ಮಹಿಳೆಯರಲ್ಲಿ ಹಣಕಾಸಿನ ಉಳಿತಾಯ ಸಾಧ್ಯವಾಗಿದೆ. ಸ್ವಸಹಾಯ ಸಂಘಗಳಿಂದಾಗಿ ಮಹಿಳಾ ಸದಸ್ಯರಿಗೆ ಹಣಕಾಸಿನ ವ್ಯವಹಾರ ಜ್ಞಾನ, ಅರಿವು ಮತ್ತು ಸದ್ಬಳಕೆ ಬಗ್ಗೆ ಜಾಗೃತಿ

ಉಂಟಾಗಿದೆ. ಆ ಮೂಲಕ ಹಣಕಾಸಿನ ಹರಿವು ಹೆಚ್ಚಾಗಿ ಅವರಲ್ಲಿ ಆರ್ಥಿಕ ಸಬಲೀಕರಣಕ್ಕೂ ದಾರಿಯಾಗಿದೆ.

ಸ್ವ-ಸಹಾಯ ಸಂಘಗಳಿಗೆ ಸೇರಿದ ಬಳಿಕ ಆದ ಆರ್ಥಿಕ ಬದಲಾವಣೆಯ ಮಾನದಂಡಗಳಾಗಿ ಐದು ಅಂಶಗಳನ್ನು ಸೇರಿಸಲಾಗಿದೆ. ಉದ್ಯೋಗ ಅವಕಾಶದಲ್ಲಿ ಆಗಿರುವ ಬದಲಾವಣೆ, ತಮ್ಮ ಆದಾಯದಲ್ಲಿ ಆಗಿರುವ ಬದಲಾವಣೆ, ಆಸ್ತಿಗಳಿಸುವಿಕೆಯಲ್ಲಿ ಆದ ಬದಲಾವಣೆ, ಹಣಕಾಸಿನ ವ್ಯವಹಾರ ನಡೆಸುವಲ್ಲಿ ಆದ ಬದಲಾವಣೆ ಹಾಗೂ ಉದ್ಯಮಶೀಲತೆಯಲ್ಲಿ ಆಗಿರುವ ಬದಲಾವಣೆ ಕುರಿತು ಹಂತಹಂತವಾಗಿ ವಿಶ್ಲೇಷಿಸಲಾಗಿದೆ.

ಕೋಷ್ಟಕ: ೬

ಸ್ವ-ಸಹಾಯ ಸಂಘದ ಸದಸ್ಯರ ಉದ್ಯೋಗ ಅವಕಾಶದಲ್ಲಿ ಆದ ಬದಲಾವಣೆ

ಸಂಘಗಳು	ಅತ್ಯುತ್ತಮ	ಉತ್ತಮ	ಸಾಧಾರಣ	ಕಡಿಮೆ	ಒಟ್ಟು
ನವೋದಯ	೯	೬೬	೧೦	೮	೩೩
ಸ್ತ್ರೀಶಕ್ತಿ	೯	೬	೯	೧೦	೩೯
ಧರ್ಮಸ್ಥಳ	೧	೮	೭	೧೭	೩೩
ಒಟ್ಟು	೧೯	೨೦	೨೬	೩೫	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಕೋಷ್ಟಕ ೬ರಲ್ಲಿ ಮಹಿಳೆಯರಿಗೆ ಸ್ವ-ಸಹಾಯ ಸಂಘಕ್ಕೆ ಸೇರಿದ ಬಳಿಕ ಉದ್ಯೋಗ ಅವಕಾಶದಲ್ಲಿ ಆದ ಬದಲಾವಣೆಯ ಕುರಿತು ವಿವರಿಸಲಾಗಿದೆ. ಸುಳ್ಯ ತಾಲೂಕಿನ ಜನರು ಹೆಚ್ಚಾಗಿ ಕೃಷಿಯನ್ನು ತಮ್ಮ ಆರ್ಥಿಕತೆಯನ್ನಾಗಿ ಅವಲಂಬಿಸಿದ್ದಾರೆ. ಆದುದರಿಂದ ಮಹಿಳೆಯರು ಸಂಘಗಳಿಂದ ಸಾಲಪಡೆದು ಅದನ್ನು ಕೃಷಿ ಚಟುವಟಿಕೆಗಳಿಗೆ ಉಪಯೋಗಿಸುತ್ತಾರೆ. ನಮೂನೆ ಸದಸ್ಯರ ಮಾಹಿತಿ ಪ್ರಕಾರ ೧೯% ಮಹಿಳೆಯರು ಉದ್ಯೋಗ ಅವಕಾಶದಲ್ಲಿ ಅತ್ಯುತ್ತಮ ಬದಲಾವಣೆಯನ್ನು ಹೊಂದಿದ್ದಾರೆ. ೨೦%

ಮಹಿಳೆಯರು ಉತ್ತಮ ಬದಲಾವಣೆಯನ್ನು ಕಂಡುಕೊಂಡಿದ್ದೇವೆ ಎಂದು ತಿಳಿಸಿದ್ದಾರೆ. ಇನ್ನು ೨೬% ಸಾಧಾರಣ ಬದಲಾವಣೆ ಎಂದರೆ ೩೫% ಜನರು ಕಡಿಮೆ ಬದಲಾವವಣೆ ಸಾಧ್ಯವಾಗಿದೆ ಎಂದಿದ್ದಾರೆ. ಇವರಲ್ಲಿ ಗಮನಿಸಬೇಕಾದ ಮುಖ್ಯ ಅಂಶ ಎಂದರೆ ಸ್ವ-ಸಹಾಯ ಸಂಘಗಳಿಗೆ ಸೇರಿದ ಬಳಿಕ ಪ್ರತಿಯೊಬ್ಬರಿಗೂ ಸಹ ಸ್ವಲ್ಪ ಮಟ್ಟಿನ ಬದಲಾವಣೆಯಾದರೂ ಸಾಧ್ಯವಾಗಿದೆ. ಇಲ್ಲಿ ಹೊಸ ಉದ್ಯೋಗ ಪ್ರಾರಂಭಿಸುವುದಕ್ಕಿಂತ ಮುಖ್ಯವಾಗಿ ತಾವು ಈ ತನಕ ಅವಲಂಬಿಸಿದ ಉದ್ಯೋಗವನ್ನೇ ಸಂಘದ ಸಹಾಯದಿಂದ ಉತ್ತಮ ಪಡಿಸಿದ್ದಾರೆ ಎಂಬ ಅಂಶ ಕಂಡುಬರುತ್ತದೆ.

ಕೋಷ್ಟಕ: ೭

ಸ್ವ-ಸಹಾಯ ಸಂಘದ ಸದಸ್ಯರ ಆದಾಯದಲ್ಲಿ ಆದ ಬದಲಾವಣೆ

ಸಂಘಗಳ ಹೆಸರು	ಅತ್ಯುತ್ತಮ	ಉತ್ತಮ	ಸಾಧಾರಣ	ಕಡಿಮೆ	ಒಟ್ಟು
ನವೋದಯ	೨	೮	೧೭	೬	೩೩
ಸ್ತ್ರೀಶಕ್ತಿ	೯	೨೧	೪	-	೩೪
ಧರ್ಮಸ್ಥಳ	೨	೨೨	೯	-	೩೩
ಒಟ್ಟು	೧೩	೫೧	೩೦	೬	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಕೋಷ್ಟಕ ೭ರಲ್ಲಿ ಸ್ವ-ಸಹಾಯ ಸಂಘಕ್ಕೆ ಸೇರಿದ ಬಳಿಕ ಸದಸ್ಯರ ಆದಾಯದಲ್ಲಿ ಆದ ಬದಲಾವಣೆ ಕುರಿತು ವಿಶ್ಲೇಷಿಸಲಾಗಿದೆ. ಗ್ರಾಮೀಣ ಪ್ರದೇಶದ ಮಹಿಳೆಯರು ಹೆಚ್ಚಾಗಿ ಅಸಂಘಟಿತ ವಲಯದಲ್ಲಿ ದುಡಿಯುವ ಕಾರ್ಮಿಕರಾಗಿದ್ದಾರೆ. ಅಲ್ಲಿ ಅವರಿಗೆ ಸರಿಯಾದ ವೇತನ ಸಿಗುವವುದಿಲ್ಲ. ಸಿಕ್ಕಿದ ವೇತನದಲ್ಲೂ ಉಳಿತಾಯ ಕಷ್ಟ ಸಾಧ್ಯ. ಬ್ಯಾಂಕುಗಳಲ್ಲಿ ಹೋಗಿ ಉಳಿತಾಯ ಮಾಡುವಷ್ಟು ಹಣಕಾಸಿನ ವ್ಯವಹಾರ ತಿಳಿದಿರುವುದಿಲ್ಲ. ಆದುದರಿಂದ ಸ್ವ-ಸಹಾಯ ಸಂಘಗಳು ಮಹಿಳೆಯರಲ್ಲಿ ಹಣಕಾಸಿನ ಉಳಿತಾಯ ಮಾಡಿ ಆದಾಯದಲ್ಲಿ ಉತ್ತಮ ಬದಲಾವಣೆ ಹೊಂದುವಲ್ಲಿ ಸಹಕಾರಿಯಾಗಿದೆ.

ಮಾದರಿ ಸಮೀಕ್ಷೆಯ ಅಂಕಿ ಅಂಶಗಳ ಪ್ರಕಾರ ೧೩% ಮಹಿಳೆಯರು ತಮ್ಮ ಆದಾಯದಲ್ಲಿ ಅತ್ಯುತ್ತಮ ಬದಲಾವಣೆ ಹೊಂದಿದ್ದಾರೆ. ಅತಿ ಹೆಚ್ಚು ಅಂದರೆ ೫೧% ಮಹಿಳೆಯರು ತಮ್ಮ ಆದಾಯದಲ್ಲಿ ಉತ್ತಮ ಬದಲಾವಣೆ ಹೊಂದಿದ್ದಾರೆ. ೩೦% ಮಹಿಳೆಯರು ಸಾಧಾರಣ ಮಟ್ಟಿನ ಬದಲಾವಣೆ ಹೊಂದಿದರೆ ಕೇವಲ ೬% ಮಹಿಳೆಯರು ಸಾಧಾರಣ ಮಟ್ಟಿನ ಬದಲಾವಣೆ ಹೊಂದಿದ್ದೇವೆ ಎಂದು ಹೇಳಿದ್ದಾರೆ. ಮೇಲಿನ ಅಂಕಿ ಅಂಶ ಗಮನಿಸಿದಾಗ ಕಡಿಮೆ ಬದಲಾವಣೆ ಹೊಂದಿದ ಮಹಿಳೆಯರ ಶೇಖಡಾ ಪ್ರಮಾಣ ಅತ್ಯಂತ ಕಡಿಮೆ. ಆದುದರಿಂದ ಸ್ವ-ಸಹಾಯ ಸಂಘಕ್ಕೆ ಸೇರಿದ ಮೇಲೆ ಮಹಿಳೆಯರರಲ್ಲಿ ಆದಾಯದಲ್ಲಿ ಉತ್ತಮ ಬದಲಾವಣೆ ಸಾಧ್ಯವಿದೆ ಎಂದು ತಿಳಿಯಬಹುದಾಗಿದೆ.

ಕೋಷ್ಟಕ: ೮

ಸ್ವ-ಸಹಾಯ ಸಂಘಗಳ ಸದಸ್ಯರ ಆಸ್ತಿಗಳಿಕೆಯಲ್ಲಿ ಆದ ಬದಲಾವಣೆ

ಸಂಘಗಳು	ಅತ್ಯುತ್ತಮ	ಉತ್ತಮ	ಸಾಧಾರಣ	ಕಡಿಮೆ	ಒಟ್ಟು
ನವೋದಯ	೬	೧೨	೮	೭	೩೩
ಸ್ತ್ರೀಶಕ್ತಿ	೧೦	೧೦	೧೧	೩	೩೪
ಧರ್ಮಸ್ಥಳ	೮	೧೬	೫	೪	೩೩
ಒಟ್ಟು	೨೪	೩೮	೨೪	೧೪	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಕೋಷ್ಟಕ ೮ರಲ್ಲಿ ಸುಳ್ಯ ತಾಲೂಕಿನ ಮಾದರಿ ಸ್ವ-ಸಹಾಯ ಸಂಘಗಳ ಸದಸ್ಯರ ಆಸ್ತಿಗಳಿಕೆಯಲ್ಲಿ ಆದ ಬದಲಾವಣೆ ಕುರಿತು ಹೇಳಲಾಗಿದೆ. ಇಲ್ಲಿ ಆಸ್ತಿ ಎಂದರೆ ಚಿನ್ನ, ಗೃಹೋಪಯೋಗಿ ವಸ್ತುಗಳು, ಸೋಲಾರ್ ವ್ಯವಸ್ಥೆ, ಗೃಹ ನಿರ್ಮಾಣ ಇವೇ ಮುಂತಾದವುಗಳಾಗಿವೆ. ಸ್ವ-ಸಹಾಯ ಸಂಘಗಳಿಗೆ ಸೇರಿದ ಮೇಲೆ ಮಹಿಳೆಯರು ಈ ಉಳಿತಾಯದ ಹಣದಿಂದ ಅಥವಾ ಸಾಲ ಸೌಲಭ್ಯಪಡೆದು ಖರೀದಿ, ಮನೆಗೆ ಸೋಲಾರ್ ಅಳವಡಿಕೆ ಗೃಹ ನಿರ್ಮಾಣ ಮುಂತಾದ ವ್ಯವಸ್ಥೆಗಳನ್ನು

ಮಾಡಿಕೊಂಡಿದ್ದಾರೆ.ಮಾದರಿ ಸದಸ್ಯರ ಪೈಕಿ ಒಟ್ಟು ೨೪% ಸದಸ್ಯರು ಅತ್ಯತ್ತಮ ಬದಲಾವಣೆ ಆಗಿದೆ ಎಂದಿದ್ದಾರೆ. ೩೮% ಸದಸ್ಯರು ಉತ್ತಮ ಬದಲಾವಣೆ ಹೊಂದಿದ್ದಾರೆ. ಇನ್ನು ೨೪% ಮಹಿಳೆಯರು ಹೇಳುವಂತೆ ಅವರು ತಮ್ಮ ಜೀವನದಲ್ಲಿ ಸಾಧಾರಣ ರೀತಿಯ ಬದಲಾವಣೆ ಹೊಂದಿದ್ದಾರೆ. ಇನ್ನು ೧೪% ಮಹಿಳೆಯರು ಅಷ್ಟಾಗಿ ಬದಲಾವಣೆ ಹೊಂದಿಲ್ಲದಿದ್ದರೂ ಸ್ವಲ್ಪ ಮಟ್ಟಿನ ಬದಲಾವಣೆ ಆಗಿದ್ದೇವೆ ಎಂಬುದಾಗಿ ಮಾಹಿತಿ ನೀಡಿದ್ದಾರೆ.

ಕೋಷ್ಟಕ: ೯

ಸ್ವ-ಸಹಾಯ ಸಂಘದ ಸದಸ್ಯರ ಹಣಕಾಸು ವ್ಯವಹಾರದಲ್ಲಿ ಆದ ಬದಲಾವಣೆ

ಸಂಘಗಳು	ಅತ್ಯುತ್ತಮ	ಉತ್ತಮ	ಸಾಧಾರಣ	ಕಡಿಮೆ	ಒಟ್ಟು
ನವೋದಯ	೧೨	೧೩	೫	೩	೩೩
ಸ್ತ್ರೀಶಕ್ತಿ	೧೬	೧೭	೧	-	೩೪
ಧರ್ಮಸ್ಥಳ	೬	೨೪	೨	೧	೩೩
ಒಟ್ಟು	೩೪	೫೪	೮	೪	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಕೋಷ್ಟಕ ೯ರಲ್ಲಿ ಸ್ವ-ಸಹಾಯ ಸಂಘಗಳಿಗೆ ಸೇರಿದ ಬಳಿಕ ಮಹಿಳೆಯರಲ್ಲಿ ಆದ ಬದಲಾವಣೆಯ ಬಗ್ಗೆ ಹೇಳಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರ ಜೀವನ ನಾಲ್ಕು ಗೋಡೆಗಳ ಮಧ್ಯಕ್ಕೆ ಸೀಮಿತವಾಗಿತ್ತು. ಆದರೆ ಸ್ವ-ಸಹಾಯ ಸಂಘಗಳಿಗೆ ಸೇರಿದ ಬಳಿಕ ಮಹಿಳೆಯರು ಇಂದು ಹೊರಗಿನ ಪ್ರಪಂಚಕ್ಕೆ ತೆರೆದುಕೊಳ್ಳುತ್ತಿದ್ದಾರೆ. ಸ್ವ-ಸಹಾಯ ಸಂಘಗಳಲ್ಲಿ ಅವರ ವ್ಯವವಸ್ಥೆಗೆ ಸರಿಯಾಗಿ ವಾರಕ್ಕೊಮ್ಮೆ ಅಥವಾ ಹದಿನೈದು ದಿನಕ್ಕೊಮ್ಮೆ ಸಭೆ ಸೇರಿದ ಬಳಿಕ ಹಣ ಪಾವತಿಸಲು ಬ್ಯಾಂಕ್‌ಗಳಿಗೆ ಪರ್ಯಾಯ ವ್ಯವಸ್ಥೆಯಲ್ಲಿ ಸಂಘದ ಸದಸ್ಯರು ಹೋಗಬೇಕಾಗುತ್ತದೆ. ಹೀಗಾಗಿ ಇಂದು ಕೇವಲ ಪ್ರಾಥಮಿಕ ಶಿಕ್ಷಣ ಹೊಂದಿದ ಮಹಿಳೆಯರು ಕೂಡಾ ಬ್ಯಾಂಕ್‌ಗಳಿಗೆ ಹೋಗಿ ವ್ಯವಹಾರ ಮಾಡುವ

ಜ್ಞಾನವನ್ನು ಪಡೆದಿದ್ದಾರೆ. ಹಣಕಾಸಿನ ವ್ಯವಹಾರದ ಪೂರ್ಣ ತಿಳುವಳಿಕೆ ಅವರಿಗೆ ಬಂದಿದೆ. ತಮ್ಮ ಸಂಘದ ಹಣಕಾಸಿನ ವ್ಯವಹಾರಗಳ ಲೆಕ್ಕಪತ್ರಗಳನ್ನು, ಪುಸ್ತಕ ವ್ಯವವಹಾರಗಳನ್ನು ನಿರ್ವಹಿಸುವಲ್ಲಿ ಸಮರ್ಥರಾಗಿದ್ದಾರೆ.

ಸುಳ್ಯ ತಾಲೂಕಿನಲ್ಲಿ ನಡೆಸಿದ ಸಮೀಕ್ಷೆ ಪ್ರಕಾರ ೩೪% ಮಹಿಳೆಯರು ಹಣಕಾಸಿನ ವ್ಯವಹಾರದಲ್ಲಿ ಅತ್ಯುತ್ತಮ ಬದಲಾವವಣೆ ಹೊಂದಿದ್ದೇವೆ ಎಂದು ಹೇಳಿದ್ದಾರೆ. ಇನ್ನು ಅತ್ಯಧಿಕ ಅಂದರೆ ೫೪% ಮಹಿಳೆಯರು ಹಣಕಾಸಿನ ವ್ಯವಹಾರದಲ್ಲಿ ಉತ್ತಮ ಜ್ಞಾನ ಪಡೆದಿದ್ದಾರೆ. ಇನ್ನುಳಿದಂತೆ ಕೇವಲ ೮% ಮಹಿಳೆಯರು ಸಾಧಾರಣ ಮಟ್ಟಿನ ಬದಲಾವಣೆ ಹೊಂದಿದರೆ ೪% ಸದಸ್ಯರು ಕಡಿಮೆ ಬದಲಾವಣೆ ಹೊಂದಿದ್ದೇವೆ ಎಂದು ಮಾಹಿತಿ ನೀಡಿದ್ದಾರೆ. ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಗ್ರಾಮೀಣ ಭಾಗದ ಮಹಿಳೆಯರಿಗೆ ಈ ರೀತಿಯ ಸ್ವ-ಸಹಾಯ ಸಂಘಗಳು ವ್ಯವಹಾರ ಜ್ಞಾನ ಹೆಚ್ಚಳಕ್ಕೆ ಅತ್ಯಂತ ಸಹಕಾರಿಯಾಗಿದೆ ಎನ್ನಬಹುದಾಗಿದೆ.

ಕೋಷ್ಟಕ: ೧೦

ಸ್ವ-ಸಹಾಯ ಸಂಘದ ಸದಸ್ಯರ ಉದ್ಯಮಶೀಲತೆಯಲ್ಲಿ ಆದ ಬದಲಾವಣೆ

ಸಂಘಗಳು	ಅತ್ಯುತ್ತಮ	ಉತ್ತಮ	ಸಾಧಾರಣ	ಕಡಿಮೆ	ಒಟ್ಟು
ನವೋದಯ	೨	೧೨	೬	೧೩	೩೩
ಸ್ತ್ರೀಶಕ್ತಿ	೯	೮	೮	೯	೩೪
ಧರ್ಮಸ್ಥಳ	೨	೯	೬	೧೬	೩೩
ಒಟ್ಟು	೧೩	೨೯	೨೦	೩೮	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಕೋಷ್ಟಕ ೧೦ ಸ್ವ-ಸಹಾಯ ಸಂಘಗಳಿಗೆ ಸೇರಿದ ಮೇಲೆ ಮಹಿಳೆಯರಿಗೆ ಉದ್ಯಮ ಶೀಲತೆಯಲ್ಲಿ ಆದ ಬದಲಾವಣೆಯನ್ನು ತಿಳಿಸುತ್ತದೆ. ಮಹಿಳಾ ಸ್ವ-ಸಹಾಯ ಸಂಘಗಳು ಅನೇಕ ಅಸಂಘಟಿತ, ಬಡತನ

ರೇಖೆಗಿಂತ ಕೆಳಗಿನ ಜನರಿಗೆ ಸಹಾಯಕವಾಗಿದೆ. ಸ್ವ-ಸಹಾಯ ಸಂಘಗಳಿಂದ ಬರುವ ಹಣವನ್ನು ತಮ್ಮತಮ್ಮಲ್ಲೇ ವಿನಿಮಯ ಅಥವಾ ಸಾಲರೂಪದಲ್ಲಿ ಪಡೆದು ಅವರು ಸ್ವ-ಉದ್ಯೋಗ ಕೈಗೊಳ್ಳಲು ಸಹಕಾರಿಯಾಗಿದೆ. ಇಂದು ಹಲವು ಕಡೆ ಮಹಿಳೆಯರು ಸಣ್ಣ ವ್ಯಾಪಾರ, ಕಿರು ಅಂಗಡಿಗಳನ್ನು, ಹೋಟೇಲುಗಳನ್ನು ರಚಿಸಿ ಜೀವನ ಸಾಗಿಸುತ್ತಿದ್ದಾರೆ.

ಪ್ರಸ್ತುತ ಅಧ್ಯಯನದ ಪ್ರಕಾರ ೧೩% ಮಹಿಳೆಯರು ಸ್ವ-ಸಹಾಯ ಸಂಘಗಳಿಂದಾಗಿ ಉದ್ಯಮಶೀಲತೆಯಲ್ಲಿ ಅತ್ಯುತ್ತಮ ಬದಲಾವಣೆ ಹೊಂದಿದ್ದೇವೆ ಎಂದಿದ್ದಾರೆ. ೨೯% ಸದಸ್ಯರು ಉತ್ತಮ ಬದಲಾವಣೆ ಹೊಂದಿದ್ದರೆ ೨೦% ಮಹಿಳೆಯರು ಸಾಧಾರಣ ಮಟ್ಟದ ಬದಲಾವಣೆ ಹೊಂದಿದ್ದೇನೆ ಎಂದು ತಿಳಿಸಿದ್ದಾರೆ. ಇನ್ನು ೩೮% ಮಹಿಳೆಯರು ಕಡಿಮೆ ಬದಲಾವಣೆ ಹೊಂದಿದ್ದಾರೆ. ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಸುಳ್ಯ ತಾಲೂಕು ಕೃಷಿ ಪ್ರಧಾನವಾದ ಪ್ರದೇಶ. ಇಲ್ಲಿ ಮಹಿಳೆಯರು ಸ್ವ-ಸಹಾಯ ಸಂಘಗಳಿಂದ ಪ್ರಯೋಜನ ಪಡೆದುಕೊಂಡು ಸ್ವ-ಉದ್ಯೋಗ ಪ್ರಾರಂಭಿಸುವ ಬದಲಾಗಿ ಕೃಷಿ ಕ್ಷೇತ್ರ ಉತ್ತಮಪಡಿಸಲು ತಮ್ಮ ಜ್ಞಾನವನ್ನೇ ಬಳಸಿಕೊಳ್ಳುತ್ತಿದ್ದಾರೆ. ಕೇವಲ ಕೆಲವೇ ಮಂದಿ ಸ್ವ-ಉದ್ಯೋಗ ಪ್ರಾರಂಭಿಸಿದ್ದಾರೆ.

೪.೫ ಮಾದರಿ ಸದಸ್ಯರ ಸಾಮಾಜಿಕ ಬದಲಾವಣೆ

ಇಂದು ಸಮಾಜದಲ್ಲಿ ಮಹಿಳೆಯರ ಸಾಮಾಜಿಕ ಸ್ಥಿತಿ ತುಂಬಾ ಉತ್ತಮವಾಗಿಲ್ಲ. ಪುರುಷ ಪ್ರಧಾನ ಗ್ರಾಮೀಣ ಸಮಾಜಗಳಲ್ಲಿ ಮಹಿಳೆಯರನ್ನು ಅನೇಕ ಸಾಮಾಜಿಕ ಕಟ್ಟುಪಾಡುಗಳ ಅಡಿಯಲ್ಲಿ ಕೀಳು ದೃಷ್ಟಿಯಿಂದ ನೋಡಲಾಗುತ್ತಿದೆ. ಗ್ರಾಮೀಣ ಸಮಾಜದಲ್ಲಿ ಅವರನ್ನು ಅಡುಗೆ ಮನೆಗೆ ಮಾತ್ರ ಸೀಮಿತಗೊಳಿಸಿ ಶಿಕ್ಷಣವನ್ನು ಕೊಡದೆ ಲಿಂಗಭೇದ ಮಾಡಿ, ಸ್ತ್ರೀಯರು ಅನೇಕ ಸಾಮರ್ಥ್ಯಗಳನ್ನು ಹೊಂದಿದ್ದರೂ ಕೂಡಾ ಸಾಮಾಜಿಕ ಸ್ಥಾನಮಾನಗಳಲ್ಲಿ ತಾರತಮ್ಯ ಮಾಡಲಾಗುತ್ತಿತ್ತು. ವಾಸ್ತವವಾಗಿ ಅವರಿಗೆ ಸಮಾಜದಲ್ಲಿ ಉನ್ನತ ಸ್ಥಾನಗಳನ್ನು ಕಲ್ಪಿಸಿಕೊಡದೆ ಈ ಪುರುಷ ಪ್ರಧಾನ ಸಮಾಜ ತಮ್ಮ ಸ್ವಾರ್ಥಕ್ಕಾಗಿ ಕೆಳ ಹಂತದ ಸ್ಥಿತಿಗಳನ್ನು ಅವರನ್ನು ಕಾಣುತ್ತಿದ್ದರು. ಆದರೆ ಸ್ವ-ಸಹಾಯ ಸಂಘಗಳು

ಪ್ರಾರಂಭಗೊಂಡ ಮೇಲೆ ಮಹಿಳೆಯರ ಪರಿಸ್ಥಿತಿ ಸುಧಾರಿಸಿದೆ. ಮಹಿಳೆಯರು ಸ್ವ-ಸಹಾಯ ಸಂಘಗಳಿಂದಾಗಿ ಸಮಾಜದಲ್ಲಿಯೂ ಸಹ ಮೇಲೆ ಬರುತ್ತಿದ್ದಾರೆ. ಇದರಿಂದಾಗಿ ಅವರಿಗೆ ಸಮಾಜದಲ್ಲಿನ ಸ್ಥಾನಮಾನಗಳು ಗೌರವಗಳು ಹೆಚ್ಚಾಗಿವೆ.

ಪ್ರಸ್ತುತ ಅಧ್ಯಯನದಲ್ಲಿ ಮಹಿಳೆಯರ ಸಾಮಾಜಿಕ ಜೀವನದಲ್ಲಿ ಆದ ಬದಲಾವಣೆಯನ್ನು ಮೂರು ವಿಭಾಗಗಳಾಗಿ ವಿಂಗಡಿಸಿ ವಿಶ್ಲೇಷಿಸಲಾಗಿದೆ. ಸ್ವ-ಸಹಾಯ ಸಂಘಗಳಿಗೆ ಸೇರಿದ ಬಳಿಕ ಅವರಲ್ಲಿ ಆದ ಬಡತನ ನಿವಾರಣೆ, ತಮ್ಮ ಹಾಗೂ ಕುಟುಂಬದವರ ಶಿಕ್ಷಣ ಮಟ್ಟದಲ್ಲಿ ಆದ ಬದಲಾವಣೆ ಹಾಗೂ ಒಟ್ಟಾಗಿ ತಮ್ಮ ಜೀವನಕ್ರಮದಲ್ಲಿ ಆದ ಬದಲಾವಣೆಯನ್ನು ಸಾಮಾಜಿಕ ಬದಲಾವಣೆಯ ಮೂರು ಮಾನದಂಡಗಳಾಗಿ ಬಳಸಿಕೊಳ್ಳಲಾಗಿದೆ.

ಕೋಷ್ಟಕ: ೧೧

ಸ್ವ-ಸಹಾಯ ಸಂಘದ ಸದಸ್ಯರ ಬಡತನ ನಿವಾರಣೆ

ಸಂಘಗಳು	ಅತ್ಯುತ್ತಮ	ಉತ್ತಮ	ಸಾಧಾರಣ	ಕಡಿಮೆ	ಒಟ್ಟು
ನವೋದಯ	೧೦	೨೦	೩	-	೩೩
ಸ್ತ್ರೀಶಕ್ತಿ	೧೦	೧೬	೮	-	೩೪
ಧರ್ಮಸ್ಥಳ	೩	೨೬	೪	-	೩೩
ಒಟ್ಟು	೨೩	೬೨	೧೫	-	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಕೋಷ್ಟಕ ೧೧ ರಲ್ಲಿ ಸ್ವ-ಸಹಾಯ ಸಂಘಗಳಿಗೆ ಸೇರಿದ ಬಳಿಕ ತಮ್ಮಲ್ಲಿ ಆದ ಬಡತನ ನಿವಾರಣೆಯ ಕುರಿತಾಗಿ ಸದಸ್ಯರು ನೀಡಿದ ಮಾಹಿತಿಯನ್ನು ವಿಶ್ಲೇಷಿಸಲಾಗಿದೆ. ಸುಳ್ಯ ತಾಲೂಕು ಕೃಷಿ ಪ್ರಧಾನ ಪ್ರದೇಶವಾಗಿದ್ದು ಜನರು ಕೃಷಿಯನ್ನು ಹೆಚ್ಚಾಗಿ ಜೀವನೋಪಾಯಕ್ಕಗಿ ನೆಚ್ಚಿಕೊಂಡಿರುತ್ತಾರೆ. ಇನ್ನುಳಿದಂತೆ ಜನರು ಕೂಲಿಯನ್ನು ಅವಲಂಬಿಸಿದ್ದಾರೆ. ಕೃಷಿಯು ಋತು ಆಧಾರಿತ

ಕಾರ್ಯವಾದುದರಿಂದ ಹಣ ಉಳಿತಾಯವು ಸಾಧ್ಯವಾಗದೆ ಬಡತನ ಎಂಬುದು ಜನರ ಸಾಮಾನ್ಯ ಪರಿಸ್ಥಿತಿಯಾಗಿತ್ತು. ನೋಬೆಲ್ ಪ್ರಶಸ್ತಿ ವಿಜೇತ ಅರ್ಥಶಾಸ್ತ್ರಜ್ಞ ಅಮರ್ತ್ಯಸೇನ ಹೇಳುವ ಪ್ರಕಾರ ಬಡತನವು ಕೇವಲ ಕಡಿಮೆ ಆದಾಯಕ್ಕೆ ಸಂಬಂಧಿಸಿದ್ದು ಮಾತ್ರವಲ್ಲ. ಬದಲಾಗಿ ಅದು ವ್ಯಕ್ತಿಯ ಮೂಲಭೂತ ಆರ್ಥಿಕ ಹಾಗೂ ಸಾಮಾಜಿಕ ದೌರ್ಬಲ್ಯವನ್ನು ಸೂಚಿಸುವ ಕೈಗನ್ನಡಿಯಗಿದೆ. ಅನಾರೋಗ್ಯ, ಒಂಟಿತನ, ಜ್ಞಾನದ ಕೊರತೆ, ಆಸ್ತಿ ಅಥವಾ ಉದ್ಯೋಗ ಇಲ್ಲದಿರುವುದು ಇತ್ಯಾದಿಗಳು ಬಡತನವನ್ನು ಪ್ರತಿಬಿಂಬಿಸುತ್ತದೆ. ಆದರೆ ಸ್ವ-ಸಹಾಯ ಸಂಘಗಳು ಪ್ರಾರಂಭಗೊಂಡ ನಂತರ ಮಹಿಳೆಯರು ಅದರ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ಬಡತನ ನಿವಾರಣೆಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಪ್ರಸ್ತುತ ಸುಳ್ಯ ತಾಲೂಕಿನಲ್ಲಿ ನಡೆಸಿದ ಅಧ್ಯಯನದ ಪ್ರಕಾರ ೨೩% ಮಹಿಳೆಯರಲ್ಲಿ ಸಂಘಗಳಿಗೆ ಸೇರಿದ ಬಳಿಕ ಅತ್ಯುತ್ತಮ ಬದಲಾವಣೆ ಆಗಿದೆ. ಅತಿಹೆಚ್ಚು ಎಂದರೆ ೬೨% ಮಹಿಳೆಯರು ತಮ್ಮ ಜೀವನದಲ್ಲಿ ಉತ್ತಮ ರೀತಿಯಲ್ಲಿ ಬಡತನ ನಿವಾರಣೆ ಆಗಿದೆ ಎಂದು ತಿಳಿಸಿದ್ದಾರೆ. ೧೫% ದಷ್ಟು ಮಹಿಳೆಯರು ಸಾಧಾರಣ ಬದಲಾವಣೆ ಹೊಂದಿದ್ದೇವೆ ಎಂದು ತಿಳಿಸಿದ್ದಾರೆ. ಗಮನಿಸಬೇಕಾದ ಅಂಶವೆಂದರೆ ಕಡಿಮೆ ಬದಲಾವಣೆ ಹೊಂದಿದ್ದೇವೆ ಎಂದು ತಿಳಿಸಿದ ಸಂಖ್ಯೆ ಶೂನ್ಯ. ಆದುದರಿಂದ ಗ್ರಾಮೀಣ ಬಡತನ ನಿವಾರಣೆಯಲ್ಲಿ ಸ್ವ-ಸಹಾಯ ಸಂಘಗಳು ಮಹತ್ತರ ಪಾತ್ರವಹಿಸುತ್ತವೆ ಎಂದು ಅಂಕಿ ಅಂಶಗಳ ಮೂಲಕ ತಿಳಿಯಬಹುದಾಗಿದೆ.

ಕೋಷ್ಟಕ: ೧೨

ಸ್ವ-ಸಹಾಯ ಸಂಘದ ಮಹಿಳೆಯರ ಶಿಕ್ಷಣ ಮಟ್ಟದಲ್ಲಿ ಆದ ಬದಲಾವಣೆ

ಸಂಘಗಳು	ಅತ್ಯುತ್ತಮ	ಉತ್ತಮ	ಸಾಧಾರಣ	ಕಡಿಮೆ	ಒಟ್ಟು
ನವೋದಯ	೬	೧೩	೧೪	-	೩೩
ಸ್ತ್ರೀಶಕ್ತಿ	೧೦	೨೧	೩	-	೩೪
ಧರ್ಮಸ್ಥಳ	೩	೨೫	೫	-	೩೩
ಒಟ್ಟು	೧೯	೫೯	೨೨	-	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಕೋಷ್ಟಕ ೧೨ ಸ್ವ-ಸಹಾಯ ಸಂಘಕ್ಕೆ ಸೇರಿದ ಬಳಿಕ ಮಹಿಳೆಯರ ಹಾಗೂ ಅವರ ಕುಟುಂಬದ ಸದಸ್ಯರ ಶಿಕ್ಷಣ ಮಟ್ಟದಲ್ಲಿ ಆದ ಬದಲಾವಣೆಯ ಕುರಿತಾಗಿ ಅಂಕಿ ಅಂಶ ನೀಡಲಾಗಿದೆ. ಮಹಿಳಾ ಸ್ವಸಹಾಯ ಸಂಘಗಳಲ್ಲಿ ಹೆಚ್ಚಾಗಿ ಅಕ್ಷರದ ಜ್ಞಾನ ಮತ್ತು ಲೆಕ್ಕಾಚಾರಗಳ ಬಗ್ಗೆ ಅರಿವು ಉಂಟಾಗುತ್ತದೆ. ಅಂದರೆ ಪ್ರತಿಬಾರಿಯೂ ಸದಸ್ಯರು ತಮ್ಮ ಜವಾಬ್ದಾರಿ, ಹಕ್ಕು, ಬಾಧ್ಯತೆಗಳನ್ನು ನಡೆಸಲು ಅವಕಾಶ ಇರುವುದರಿಂದ ಅಕ್ಷರಜ್ಞಾನ ಬೆಳೆಯುತ್ತದೆ. ಶಿಕ್ಷಣವು ಸಾಧನೆಗಳ ಪರಿಣಾಮಕಾರಿಯಾದ ಒಂದು ಸಾಧನವಾಗಿದೆ. ವ್ಯಕ್ತಿಯ ಚಾರಿತ್ರ್ಯ, ಸಂಸ್ಕೃತಿ, ವಿವೇಚನೆ, ನೈಪುಣ್ಯತೆ, ಜ್ಞಾನ ಮುಂತಾದ ಅಂಶಗಳನ್ನು ಶಿಕ್ಷಣವು ಅವಲಂಬಿಸಿದೆ. ಮಾನವ ಸಮಾಜ ನಿರಂತರವಾಗಿ ಸಾಗಲು ಶಿಕ್ಷಣವೇ ಕಾರಣ. ಶಿಕ್ಷಣವು ಮಾನವನಲ್ಲಿಯ ಹೊಸ ಹೊಸ ವಿಚಾರ, ಆಲೋಚನೆ ಹಾಗೂ ಆಕಾಂಕ್ಷೆಗಳು ಬೆಳೆಯುವಂತಾಗಲು ಸಹಾಯ ಮಾಡುವುದು.

ಶಿಕ್ಷಣ ಮಟ್ಟದಲ್ಲಿ ಬದಲಾವಣೆ ಎಂದರೆ ಇಲ್ಲಿ ಮುಖ್ಯವಾಗಿ ಎರಡು ಅಂಶಗಳನ್ನು ಸೇರಿಸಲಾಗಿದೆ. ಒಂದು ಸ್ವ-ಸಹಾಯ ಸಂಘಕ್ಕೆ ಸೇರಿದ ಮೇಲೆ ಮಹಿಳೆಯರಲ್ಲಿ ವೈಯಕ್ತಿಕವಾಗಿ ಶಿಕ್ಷಣ ಮಟ್ಟದಲ್ಲಿ ಆದ ಬದಲಾವಣೆ ಹಾಗೂ ಎರಡನೆಯದಾಗಿ ಅವರ ಕುಟುಂಬ ಸದಸ್ಯರ ಅಥವಾ ಮಕ್ಕಳಿಗೆ ಶಿಕ್ಷಣ

ಕೊಡಿಸುವಲ್ಲಿ ಆದ ಬದಲಾವಣೆ ಇವುಗಳ ಕುರಿತಾಗಿ ಹೇಳಲಾಗಿದೆ. ಸ್ವ-ಸಹಾಯ ಸಂಘಗಳಿಗೆ ಸೇರಿದ ಬಳಿಕ ಮಹಿಳೆಯರ ಶಿಕ್ಷಣ ಮಟ್ಟದಲ್ಲಿ ವ್ಯತ್ಯಾಸವಾಗಲು ಸಾಧ್ಯ. ಸ್ವಸಹಾಯ ಸಂಘಗಳಲ್ಲಿ ಮಹಿಳೆಯರಿಗೆ ಶಿಕ್ಷಣ, ಕಾನೂನಿನ ಬಗ್ಗೆ ಅರಿವು, ವರದಕ್ಷಿಣೆ ಬಗ್ಗೆ ಅರಿವಿನ ಮಾಹಿತಿ, ಮುಂತಾದ ಜಾಗೃತಿ ಉಂಟುಮಾಡುವ ವಿಷಯಗಳ ಬಗ್ಗೆ ಅವರಿಗೆ ಮಾಹಿತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಇವುಗಳ ಪ್ರಯೋಜನವನ್ನು ಪಡೆಯುವಲ್ಲಿ ಗ್ರಾಮೀಣ ಮಹಿಳೆಯರು ಯಶಸ್ವಿಯಾಗಿದ್ದಾರೆ.

ಮೇಲಿನ ಅಂಕಿಅಂಶಗಳ ಪ್ರಕಾರ ೧೯% ಮಹಿಳೆಯರ ಜೀವನದಲ್ಲಿ ಅವರ ಶಿಕ್ಷಣ ಮಟ್ಟದಲ್ಲಿ ಅತ್ಯುತ್ತಮ ಬದಲಾವಣೆ ಹೊಂದಿದ್ದಾರೆ. ಇನ್ನು ೫೯% ಮಹಿಳೆಯರು ಸ್ವ-ಸಹಾಯ ಸಂಘಕ್ಕೆ ಸೇರಿದ ಬಳಿಕ ಶಿಕ್ಷಣ ಮಟ್ಟದಲ್ಲಿ ಉತ್ತಮ ಬದಲಾವಣೆ ಸಾಧ್ಯವಾಗಿದೆ ಎಂದು ತಿಳಿಸಿದ್ದಾರೆ. ೨೨% ಮಹಿಳೆಯರು ಸಾಧಾರಣ ಬದಲಾವಣೆ ಹೊಂದಿರುವುದಾಗಿ ತಿಳಿಸಿದ್ದಾರೆ. ಮೇಲಿನ ಅಂಕಿ ಅಂಶದಲ್ಲಿ ಕಡಿಮೆ ಬದಲಾವಣೆ ಎಂಬ ಮಾಹಿತಿಯನ್ನು ಯಾರು ನೀಡಿಲ್ಲ. ಪ್ರಸ್ತುತ ಅಧ್ಯಯನದ ದತ್ತಾಂಶ ನೋಡಿದಾಗ ಶಿಕ್ಷಣ ಮಟ್ಟ ಹೆಚ್ಚಳದಲ್ಲಿ ಸ್ವ-ಸಹಾಯ ಸಂಘಗಳ ಪಾತ್ರ ಮುಖ್ಯವಾಗಿದೆ ಎಂದು ಇಲ್ಲಿ ಶಿಕ್ಷಣ ಮಟ್ಟ ಹೆಚ್ಚಳ ಎಂದರೆ ಮಹಿಳೆಯರರಿಗೆ ಸಮಾಜದ ಆಗುಹೋಗುಗಳ ಬಗೆಗಿನ ಜ್ಞಾನದ ಹೆಚ್ಚಳ ಎಂದೂ ಹೇಳಬಬಹುದು. ಸಂಘದಿಂದ ಪ್ರಯೋಜನವನ್ನು ಪಡೆದುಕೊಂಡು ಮಕ್ಕಳಿಗೂ ವಿದ್ಯಾಭ್ಯಾಸವನ್ನು ಕೊಡಿಸುತ್ತಿದ್ದಾರೆ. ಈ ರೀತಿಯಾಗಿ ಮಹಿಳೆಯರು ಸಂಘಗಳ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದಾರೆ.

ಕೋಷ್ಟಕ: ೧೩

ಸ್ವ-ಸಹಾಯ ಸಂಘದ ಜೀವನ ಕ್ರಮದಲ್ಲಿನ ವ್ಯತ್ಯಾಸ

ಸಂಘಗಳು	ಅತ್ಯುತ್ತಮ	ಉತ್ತಮ	ಸಾಧಾರಣ	ಕಡಿಮೆ	ಒಟ್ಟು
ನವೋದಯ	೧	೧೮	೧೨	೨	೩೩
ಸ್ತ್ರೀಶಕ್ತಿ	೧೩	೧೯	೨	-	೩೪
ಧರ್ಮಸ್ಥಳ	೫	೨೩	೫	-	೩೩
ಒಟ್ಟು	೧೯	೬೦	೧೯	೨	೧೦೦

ಮೂಲ: ಪ್ರಾಥಮಿಕ ದತ್ತಾಂಶ

ಕೋಷ್ಟಕ ೧೩ ಸ್ವ-ಸಹಾಯ ಸಂಘಕ್ಕೆ ಸೇರಿದ ಬಳಿಕ ಸದಸ್ಯರ ಜೀವವನಕ್ರಮದಲ್ಲಿ ಆದ ಬದಲಾವಣೆಯನ್ನು ಈ ಕೋಷ್ಟಕ ತಿಳಿಸುತ್ತದೆ. ಮಹಿಳೆಯರು ಸ್ವ-ಸಹಾಯ ಸಂಘದ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಮೇಲೆ ಅವರ ಜೀವನಕ್ರಮದಲ್ಲಿ ಹಲವಾರು ಬದಲಾವಣೆಗಳನ್ನು ಅವರೇ ಹೇಳಿಕೊಂಡಿದ್ದಾರೆ. ಜೀವನಕ್ರಮದಲ್ಲಿ ಬದಲಾಣೆ ಎಂದರೆ ಸಂಘದ ಸದಸ್ಯರೇ ಹೇಳಿಕೊಂಡ ಪ್ರಕಾರ ತಾವು ಉಪಯೋಗಿಸುವ ಗೃಹಬಳಕೆ ವಸ್ತುಗಳು, ತಿನ್ನುವ ಆಹಾರ ಧರಿಸುವ ಉಡುಪುಗಳು ಇವುಗಳಲ್ಲಿ ಬದಲಾವಣೆ ಆಗಿದೆ ಎನ್ನುತ್ತಾರೆ. ಸದಸ್ಯರೇ ಹೇಳಿಕೊಳ್ಳುವ ಪ್ರಕಾರ ಪ್ರತಿಯೊಬ್ಬ ಗ್ರಾಮೀಣ ಮಹಿಳೆ ಕೂಡಾ ಇಂದು ಮೊಬೈಲ್ ಸಂಪರ್ಕ ಹೊಂದಿದ್ದಾರೆ. ಮನೆಯಲ್ಲಿ ಹೊರಗಡೆ ಬಂದು ವ್ಯವವಹರಿಸುವ ಜ್ಞಾನ ಪಡೆದಿದ್ದಾರೆ.

ಮೇಲಿನ ಕೋಷ್ಟಕ ತಿಳಿಸುವಂತೆ ೧೯% ಮಹಿಳೆಯರು ಸ್ವ-ಸಹಾಯ ಸಂಘಕ್ಕೆ ಸೇರಿದ ಬಳಿಕ ಅತ್ಯುತ್ತಮ ಬದಲಾವಣೆ ಕಂಡಿದ್ದಾರೆ. ೬೦% ಮಹಿಳೆಯರು ತಮ್ಮ ನಿತ್ಯ ಜೀವನಕ್ರಮದಲ್ಲಿ ಉತ್ತಮ ಬದಲಾವಣೆ ಹೊಂದಲು ಸಾಧ್ಯವಾಗಿದೆ. ಇನ್ನು ೧೯% ಮಹಿಳೆಯರು ಕಡಿಮೆ ಮಟ್ಟಿನ ಬದಲಾವಣೆ ಹೊಂದಲು ಸಾಧ್ಯವಾಗಿದೆ ಎಂದು ಹೇಳಿದ್ದಾರೆ.

ಹೀಗೆ ಮೇಲಿನ ಅಂಕಿಅಂಶಗಳನ್ನು ಗಮನಿಸಿದಾಗ ಸ್ವ-ಸಹಾಯ ಸಂಘಗಳಿಂದಾಗಿ ಮಹಿಳೆಯರ ಸಾಮಾಜಿಕ ಬದುಕಿನಲ್ಲಿ ಅತ್ಯುತ್ತಮ ಬದಲಾವಣೆ ಹೊಂದಲು ಸಾಧ್ಯವಾಗಿದೆ. ಮಹಿಳೆಯರು ತಮ್ಮ ಬಡತನವನ್ನು ನಿವಾರಿಸಿಕೊಳ್ಳುವಲ್ಲಿ ಸಫಲರಾಗಿದ್ದಾರೆ. ತಮ್ಮ ಹಾಗೂ ಮನೆಯವರ ವಿದ್ಯಾಭ್ಯಾಸಕ್ಕೆ ಈ ಸಂಘಗಳು ಪ್ರೇರಣೆಯಾಗಿವೆ. ಇನ್ನು ಸ್ವ-ಸಹಾಯ ಸಂಘಕ್ಕೆ ಸೇರಿದ ಬಳಿಕ ಜೀವನಕ್ರಮದಲ್ಲೂ ಸಹ ಉತ್ತಮ ಬದಲಾವಣೆ ಸಾಧ್ಯವಾಗಿದೆ. ಸಮಾಜದಲ್ಲಿ ತಾವೂ ಸಹ ಎಲ್ಲರಂತೆ ಉತ್ತಮ ಬಾಳನ್ನು ಬಾಳಲು ಸ್ವ-ಸಹಾಯ ಸಂಘಗಳು ನೆರವಿಗೆ ಬಂದಿವೆ.

೪.೬ ಸ್ವ-ಸಹಾಯ ಸಂಘದಲ್ಲಿ ಸಾಲ, ಹಣಕಾಸಿನ ನಿರ್ವಹಣೆ

ಸಂಘಗಳು ನಿರಂತರ ಉಳಿತಾಯದ ಮೂಲಕ ತಮ್ಮ ಸ್ವಂತ ಬಂಡವಾಳವನ್ನು ಹೆಚ್ಚಿಸಿಕೊಳ್ಳುತ್ತವೆ. ಹೀಗೆ ಕೂಡಿಸಿದ ಹಣವನ್ನು ಸಣ್ಣ ಸಾಲ ನೀಡಲು ಸಭೆಯಲ್ಲಿ ಎಲ್ಲ ಸದಸ್ಯರೂ ಕೂಲಂಕುಷವಾಗಿ ಚರ್ಚಿಸಿ ಒಂದು ಸರಳ ಹಾಗೂ ಸುಲಲಿತವಾದ ಸಾಲನಿರ್ವಹಣಾ ನೀತಿಯನ್ನು ರೂಪಿಸಿಕೊಳ್ಳುತ್ತಾರೆ. ಸಂಘದಲ್ಲಿ ಸಾಲನಿರ್ವಹಣೆ ನಂಬಿಕೆ-ಪರಸ್ಪರ ವಿಶ್ವಾಸದ ನೆಲೆಗಟ್ಟಿನಲ್ಲಿ ನಡೆಯುತ್ತದೆ. ಇನ್ನೊಂದು ಅತಿ ಮುಖ್ಯವಾದ ವಿಷಯ ಎಂದರೆ ಯಾವುದೇ ಜಾಮೀನು ಭದ್ರತೆ ಹಾಗೂ ಕಾಗದ ಪತ್ರಗಳ ಪರಿಪಾಠವಿಲ್ಲದೆ ಸಾಲ ವ್ಯವಹಾರ ನಡೆಸಲಾಗುತ್ತದೆ. ಸಾಲಕ್ಕೆ ಸಂಬಂಧಪಟ್ಟ ನಿಬಂಧನೆಗಳು ಎಲ್ಲ ಸದಸ್ಯರ ಸಮಕ್ಷಮದಲ್ಲಿ ಚರ್ಚೆಯ ನಂತರ ಸಭೆಯಲ್ಲೇ ತೀರ್ಮಾನಿಸಲ್ಪಡುತ್ತದೆ. ಸಂಘದಲ್ಲಿ ಕೊಡಲಾಗುವ ಸಾಲಗಳಿಗೆ ವಿಧಿಸುವ ಬಡ್ಡಿದರಗಳು ಇತರ ಬ್ಯಂಕುಗಳು ವಿಧಿಸುವ ಬಡ್ಡಿದರಕ್ಕಿಂತ ಕಡಿಮೆ ಇರುತ್ತದೆ. ಹೀಗೆ ಪಡೆದ ಸಾಲದ ಮರುಪಾವತಿಯನ್ನು ವಾರದ/ತಿಂಗಳ ಕಂತುಗಳಲ್ಲಿ ಸಂಘದ ಸಭೆಯಲ್ಲಿಯೇ ಸಂಗ್ರಹಿಸಲಾಗುತ್ತದೆ.

ಪ್ರಸ್ತುತ ಅಧ್ಯಯನದಲ್ಲಿ ಸುಳ್ಯ ತಾಲೂಕಿನ ಸ್ವ-ಸಹಾಯ ಸಂಘಗಳ ೧೦೦ ಮಹಿಳಾ ಸದಸ್ಯರನ್ನು ಭೇಟಿಮಾಡಿ ಮಾಹಿತಿ ಸಂಗ್ರಹಿಸಲಾಗಿದೆ. ಹೀಗೆ ಸಂಗ್ರಹಿಸಿದ ಮಾಹಿತಿಯ ಪ್ರಕಾರ ೧೦೦% ಮಹಿಳೆಯರು ಸಂಘದಿಂದ ಸಾಲ ಸೌಲಭ್ಯವನ್ನು ಪಡೆದಿದ್ದಾರೆ. ಅವರು ಹೇಳುವ ಪ್ರಕಾರ ಸ್ವ-ಸಹಾಯ

ಸಂಘಗಳು ಜೀವನದ ದಿಕ್ಕನ್ನೇ ಬದಲಾಯಿಸಿದೆ. ಸ್ವ-ಸಹಾಯ ಸಂಘಗಳ ಹೊರತಾಗಿ ಬ್ಯಾಂಕುಗಳಿಂದ ಸಾಲ ಪಡೆಯಬೇಕಾದರೆ ಆಸ್ತಿವಿವರಗಳು, ಜಾಮೀನು ಭದ್ರತೆ ಹೀಗೆ ಯಾವುದೇ ದಾಖಲೆಗಳನ್ನು ನೀಡಬೇಕಾಗುತ್ತದೆ. ಆದರೆ ಈ ಸ್ವ-ಸಹಾಯ ಸಂಘಗಳಿಂದ ಸಾಲಪಡೆಯಬೇಕಾದರೆ ಪರಸ್ಪರ ವಿಶ್ವಾಸವೇ ಇಲ್ಲಿ ಮುಖ್ಯ ಅಸ್ತ್ರವಾಗಿದೆ. ಮಾದರಿ ಸದಸ್ಯರು ನೀಡಿದ ಮಾಹಿತಿ ಪ್ರಕಾರ ಸಂಘಗಗಳಲ್ಲಿ ಸಾಲ ಪಡೆದು ತಮ್ಮ ಅತ್ಯವಶ್ಯಕತೆಗಳನ್ನು ಪೂರೈಸಿಕೊಂಡಿದ್ದಾರೆ. ಮಕ್ಕಳಿಗೆ ಶಿಕ್ಷಣ ಕೊಡಿಸಲು, ಮಕ್ಕಳ ವಿವಾಹ ಸಂಬಂಧೀ ಖರ್ಚುವೆಚ್ಚಗಳಿಗೆ ಸಾಲ ಪಡೆದಿದ್ದಾರೆ. ಇಷ್ಟೇ ಅಲ್ಲದೆ ೫೦% ಕ್ಕಿಂತಲೂ ಹೆಚ್ಚಿನ ಸದಸ್ಯರು ಮನೆಗಳ ಪುನರ್‌ನಿರ್ಮಾಣಕ್ಕೆ ಸಾಲ ಪಡೆದಿದ್ದಾರೆ. ಸಂಘದಿಂದ ಸಾಲ ಪಡೆದು ಮನೆಗೆ ಸೌರವಿದ್ಯುತ್‌ನ್ನು ಅಳವಡಿಸಿಕೊಂಡಿದ್ದಾರೆ. ಇಷ್ಟೇ ಅಲ್ಲದೆ ವಾಹನ ಖರೀದಿಗೂ ಈ ಸಾಲ ಸೌಲಭ್ಯ ನೆರವಾಗಿದೆ. ಸಂಘದಲ್ಲಿ ಸದಸ್ಯರಾದ ಮಹಿಳೆಯರು ಸಾಲ ಪಡೆದು ರಿಕ್ಷಾ ಖರೀದಿಸಿ ಅದನ್ನು ಬಾಡಿಗೆಗೆ ಓಡಿಸುತ್ತಾ ಜೀವನ ಸಾಗಿಸುತ್ತಿದ್ದಾರೆ. ಈ ರೀತಿಯಾಗಿ ಸ್ವ-ಸಹಾಯ ಸಂಘಗಳು ಮಹಿಳಾ ಅಭ್ಯುದಯಕ್ಕೆ ಸಹಕಾರಿಯಾಗಿದೆ.

ಸ್ವ-ಸಹಾಯ ಸಂಘಕ್ಕೆ ಸೇರಿದ ಮಹಿಳೆಯ ಸಂಘದಿಂದ ತಾವು ಪ್ರಯೋಜನವನ್ನು ಪಡೆದುದಲ್ಲದೆ, ಇತರರಿಗೂ ಸಂಘಕ್ಕೆ ಸೇರಲು ಪ್ರೇರಣೆ ನೀಡುತ್ತೇವೆ ಎಂದು ಹೇಳಿದ್ದಾರೆ. ಸಮೀಕ್ಷೆ ಸಂದರ್ಭ ಭೇಟಿ ಮಾಡಿದ ೧೦೦% ಮಹಿಳೆಯರೂ ಕೂಡಾ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದರಿಂದಾಗಿ ನಾವು ಕಂಡುಕೊಳ್ಳಬಹುದಾದ ಅಂಶವೇನೆಂದರೆ ಮಹಿಳಾ ಸಬಲೀಕರಣದಲ್ಲಿ ಸ್ವ-ಸಹಾಯ ಸಂಘಗಳ ಪಾತ್ರ ಅತ್ಯಂತ ಪ್ರಮುಖವಾಗಿದೆ ಎಂದು. ಮಹಿಳೆಯರು ತಮ್ಮ ಸುತ್ತಮುತ್ತಲಿನ ಮಹಿಳೆಯರಿಗೆ ಇಂತಹ ಸ್ವ-ಸಹಾಯ ಸಂಘಗಳಿಗೆ ಸೇರಲು ಪ್ರೇರಣೆ ನೀಡುತ್ತಿದ್ದಾರೆ. ಸಂಘಗಳಿಗೆ ಸೇರುವ ಮುಖಾಂತರ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುವತ್ತ ಗಮನ ಹರಿಸುತ್ತಿದ್ದಾರೆ.

ಸಮೀಕ್ಷೆ ನಡೆಸಿದ ಸಂದರ್ಭದಲ್ಲಿ ಮಹಿಳೆಯರೇ ನೀಡಿದ ಮಾಹಿತಿ ಪ್ರಕಾರ ಸ್ವ-ಸಹಾಯ ಸಂಘಗಳಿಗೆ ಸೇರಿದ ಮೇಲೆ ಅವರ ಜೀವನದಲ್ಲಿ ಉತ್ತಮ ಬದಲಾವಣೆ ಉಂಟಾಗಿದೆ. ಈ ಹಿಂದೆ ಮನೆಯಲ್ಲಿ ಹೊರಗೆ ಬಂದು ವ್ಯವಹಾರ ನಡೆಸಲು ತಿಳಿಯದವರೂ ಸಹ ಇಂದು ಬ್ಯಾಂಕ್‌ನಲ್ಲಿ ಹಣಕಾಸಿನ

ವ್ಯವಹಾರ, ಇತರ ಎಲ್ಲಾ ಕಚೇರಿ ಕೆಲಸಗಳನ್ನು ನಿಭಾಯಿಸುವಷ್ಟರ ಮಟ್ಟಿಗೆ ಜ್ಞಾನವಂತರಾಗಿದ್ದಾರೆ.ಸಂಘದ ಮೂಲಕ ಶಿಕ್ಷಣ ಪಡೆದು ಇಂದು ಸಮಾಜದಲ್ಲಿ ಗುರುತಿಸುವಂತಹ ವ್ಯಕ್ತಿಯಾಗಿದ್ದಾರೆ. ರಾಜಕೀಯವಾಗಿಯೂ ಮುನ್ನಡೆದಿದ್ದಾರೆ.

ಪ್ರಸ್ತುತ ಅಧ್ಯಯನದಲ್ಲಿ ಸರಕಾರ ಹಾಗೂ ಸರಕಾರೇತರ ಸಂಸ್ಥೆಗಳ ಸ್ವಸಹಾಯ ಸಂಘಗಳನ್ನು ಆಯ್ಕೆಗೊಳಿಸಿ ಸಮೀಕ್ಷೆ ನಡೆಸಲಾಗಿತ್ತು. ಅಧ್ಯಯನದ, ದತ್ತಾಂಶಗಳ ಕ್ರೋಢೀಕರಣದ ನಂತರ ಕಂಡುಬಂದ ಅಂಶವೆಂದರೆ ಮಹಿಳೆಯರು ಈ ಎಲ್ಲಾ ಸ್ವಸಹಾಯ ಸಂಘಗಳಿಂದಲೂ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ. ಸ್ವಸಹಾಯ ಸಂಘಗಳಲ್ಲಿ ತೊಡಗಿಸಿಕೊಳ್ಳುವ ಮಹಿಳೆಗೆ ಸರಕಾರದ ಸಂಘ ಅಥವಾ ಸರಕಾರೇತರ ಸಂಘ ಎಂಬ ವ್ಯತ್ಯಾಸವಿಲ್ಲ. ಆಕೆಯ ಮುಖ್ಯ ಉದ್ದೇಶ ಉಳಿತಾಯ ಮಾಡುವುದು. ಸಮಾಜದಲ್ಲಿ ಮುಂದೆ ಬರಬೇಕೆಂಬ ಇಚ್ಛೆಯೊಂದಿಗೆ ಸಂಘಗಳಿಗೆ ಸೇರಿದ್ದು ಗುರಿತಲುಪುವಲ್ಲಿ ಯಶಸ್ವಿಯಾಗಿದ್ದಾರೆ ಎನ್ನಬಹುದು.

ಅಧ್ಯಾಯ ೫

ಸಾರಾಂಶ, ಉಪಸಂಹಾರ

೫.೧ ಅಧ್ಯಯನದ ಸಾರಾಂಶ, ಫಲಿತಾಂಶ

೫.೨ ಸಲಹೆಗಳು

೫.೧ ಅಧ್ಯಯನದ ಸಾರಾಂಶ, ಫಲಿತಾಂಶ

ಸ್ವಸಹಾಯ ಸಂಘಗಳು ಮತ್ತು ಮಹಿಳಾ ಸಬಲೀಕರಣ : ಸುಳ್ಯ ತಾಲೂಕಿನಲ್ಲಿ ಒಂದು ಅಧ್ಯಯನ ಎಂಬ ಶೀರ್ಷಿಕೆಯಡಿಯಲ್ಲಿ ಕೈಗೊಂಡ ಅಧ್ಯಯನ ಇದಾಗಿದ್ದು ಸುಳ್ಯ ತಾಲೂಕಿನಲ್ಲಿ ಮುಖ್ಯವಾಗಿರುವ ಸರಕಾರ ಹಾಗೂ ಸರಕಾರೇತರ ಸ್ವಸಹಾಯ ಸಂಘಗಳು ಗ್ರಾಮೀಣ ಮಹಿಳೆಯರು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಬಲೀಕಣಗೊಳ್ಳುವಲ್ಲಿ ಯಾವ ರೀತಿ ಪ್ರಮುಖ ಪಾತ್ರ ವಹಿಸಿದೆ ಎಂದು ವಿಶ್ಲೇಷಿಸುತ್ತದೆ. ಸುಳ್ಯ ತಾಲೂಕಿನಲ್ಲಿ ಕ್ಷೇತ್ರಕಾರ್ಯ ನಡೆಸಿ ಮಾಹಿತಿಗಳನ್ನು ಸಂಗ್ರಹಿಸಿ, ಈ ದತ್ತಾಂಶಗಳ ಆಧಾರದ ಮೇಲೆ ಮಹಿಳಾ ಸಬಲೀಕರಣದ ಕುರಿತಾಗಿ ಬೆಳಕು ಚೆಲ್ಲುತ್ತದೆ. ಅಧ್ಯಯನ ನಡೆಸುವ ಸಂದರ್ಭ ಕೆಲವೊಂದು ಉದ್ದೇಶಗಳನ್ನಿಟ್ಟುಕೊಳ್ಳಲಾಗಿತ್ತು.ಈ ಉದ್ದೇಶಗಳ ಪ್ರಕಾರ ಅಧ್ಯಯನವು ಹಂತ ಹಂತವಾಗಿ ಸಾಗಿದೆ.

ಕೃಷಿ ಪ್ರಧಾನ ದೇಶವಾದ ಭಾರತದಲ್ಲಿ ಸುಮಾರು ಶೇ. ೫೦ ಕ್ಕೂ ಹೆಚ್ಚಿನ ಮಹಿಳೆಯರು ಕೃಷಿಯಿಂದಲೇ ಜೀವನ ಸಾಗಿಸುತ್ತಿದ್ದಾರೆ. ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರು ಕೃಷಿ ವಲಯದಲ್ಲಿ ಉದ್ಯೋಗಿಗಳಾಗಿದ್ದು, ಕೃಷಿಕಾರ್ಯಗಳಲ್ಲಿ ಶ್ರಮವಹಿಸಿ ದುಡಿದು, ರಾಷ್ಟ್ರದ ಆರ್ಥಿಕ ಬೆಳವಣಿಗೆಯ ದರವನ್ನು ತೀವ್ರಗೊಳಿಸುವ ಕಾರ್ಯದಲ್ಲಿ ಪ್ರಮುಖ ಪಾತ್ರಧಾರಿಗಳಾಗಿದ್ದಾರೆ. ಕೃಷಿಯ ಜೊತೆಗೆ ಕೃಷಿ ಆಧಾರಿತ ಕೆಲಸಕಾರ್ಯಗಳಾದ ಪಶುಸಾಕಾಣಿಕೆ, ಹೈನುಗಾರಿಕೆ ಇತ್ಯಾದಿ ಚಟುವಟಿಕೆಗಳಲ್ಲಿ ಮಹಿಳೆಯರು ತೊಡಗಿ ಕುಟುಂಬದ ಆದಾಯ ವೃದ್ಧಿಸಲು ಸಹಾಯಕರಾಗಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಜನರು ಅನಕ್ಷರಸ್ಥರು ಅಥವಾ ಕಡಿಮೆ ವಿದ್ಯಾಭ್ಯಾಸ ಉಳ್ಳವರೂ, ಬಡವರೂ ಆಗಿದ್ದು ಇವರೆಲ್ಲ ಅನೇಕ ಸಾಂಪ್ರದಾಯಿಕ ಕಟ್ಟುಪಾಡುಗಳಲ್ಲಿ ಮಹಿಳೆಯರಿಗೆ ಸಮಾಜದಲ್ಲಿ ಉನ್ನತ ಸ್ಥಾನಮಾನಗಳನ್ನು ನೀಡದೆ ಅವರನ್ನು ಕೀಳುಮಟ್ಟದಿಂದ ನೋಡಲಾಗುತ್ತಿದೆ. ಓೀಗಾಗಿ ಮಹಿಳೆಯರು ಗೃಹಕೃತ್ಯಗಳಿಗೆ ಮಾತ್ರ ಸೀಮಿತರಾಗಿರುವರು. ಹೊಲಗದ್ದೆಗಳಲ್ಲಿ ಮಹಿಳೆಯರು ಪುರುಷರಿಗೆ ಸಮಾನವಾಗಿ ದುಡಿದರೂ ಪುರುಷರ ಕೂಲಿದರದ ಅರ್ಧದಷ್ಟು ಮಾತ್ರ ಕೂಲಿ

ನೀಡಲಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಜಾತಿ ಪದ್ಧತಿಯು ಸಾಮಾಜಿಕ ಸ್ಥಾನಮಾನಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದು, ಜಾತಿ ಆಧಾರಿತ ಸ್ಥಾನಮಾನಗಳನ್ನು ಕಲ್ಪಿಸಲಾಗಿದ್ದು, ಮೇಲ್ವರ್ಗದವರು ಅಧಿಕ ಸಂಖ್ಯೆಯಲ್ಲಿ ಭೂಒಡೆಯರಾಗುತ್ತಿದ್ದಾರೆ. ಹೀಗಾಗಿ ಅವರ ಆರ್ಥಿಕ ಸ್ಥಿತಿಯು ಉತ್ತಮವಾಗಿರುತ್ತದೆ.

ಭಾರತ ಸ್ವಾತಂತ್ರ್ಯ ಪಡೆದು ಸುಮಾರು ಐದಾರು ದಶಕಗಳು ಗತಿಸಿದರೂ ಮಹಿಳೆಯರ ಸ್ಥಾನಮಾನಗಳಲ್ಲಿ ಗಮನಾರ್ಹವಾದ ಬದಲಾವಣೆಗಳು ಆಗದಿರುವುದು ವಿಪರ್ಯಾಸ. ಇಂತಹ ಸಂದರ್ಭದಲ್ಲಿ ಹಳ್ಳಿ ಜನರಿಗೆ ಸ್ವಸಹಾಯ ಸಂಘಗಳು ಉಂಟುಮಾಡಿದ ಪ್ರಗತಿಪರ ಕಾರ್ಯಚಟುವಟಿಕೆಗಳ ಬಗೆಗೆ ಅಧ್ಯಯನ ನಡೆಸಲಾಗಿದೆ. ಮಹಿಳೆಯರನ್ನು ಪುರುಷರಿಗೆ ಹೋಲಿಕೆ ಮಾಡಿ ನೋಡಿದಾಗ ಮಹಿಳೆಯರು ಅನೇಕ ಕ್ಷೇತ್ರಗಳಲ್ಲಿ ಹಿಂದೆ ಬಿದ್ದಿರುವುದು ಕಂಡುಬರುತ್ತದೆ.ಭಾರತೀಯ ಸಮಾಜದ ಇತಿಹಾಸವನ್ನು ಗಮನಿಸಿದಾಗ ಪುರುಷಪ್ರಧಾನ ಸಮಾಜವಾಗಿರುವುದು ಕಂಡುಬರುತ್ತದೆ. ಪ್ರಾಚೀನ ಕಾಲದಿಂದಲೂ ಮಹಿಳೆಯರನ್ನು ಅವರ ಜೀವನದ ಪ್ರತಿಹಂತದಲ್ಲೂ ಶೋಷಣೆ ನಡೆದಿರುವುದನ್ನು ನಾವು ಕಾಣುತ್ತೇವೆ. ಆದರೆ ಇಂದು ಆಧುನಿಕತೆಯ ಪ್ರಭಾವದಿಂದ ಮಹಿಳೆಯರಿಗೆ ಎಲ್ಲಾ ಕ್ಷೇತ್ರಗಳಲ್ಲೂ ವಿಪುಲವಾದ ಅವಕಾಶಗಳು ದೊರೆತಿದ್ದು, ಅವರ ಸ್ಥಾನಮಾನಗಳಲ್ಲಿ ಗಮನಾರ್ಹವಾದ ಬದಲಾವಣೆ ಕಂಡುಬರುತ್ತದೆ. ಆದರೆ ಈ ಆಧುನಿಕತೆಯು ಗ್ರಾಮೀಣ ಮಹಿಳೆಯರನ್ನು ಇನ್ನೂ ತಲುಪಿಲ್ಲ. ಈ ನಿಟ್ಟಿನಲ್ಲಿ ಸ್ವಸಹಾಯ ಸಂಘಗಳು ಪ್ರಮುಖ ಪಾತ್ರ ವಹಿಸುತ್ತವೆ. ಗ್ರಾಮೀಣ ಮಹಿಳೆಯರಿಗೆ ಎಲ್ಲಾ ರಂಗಗಳಲ್ಲಿ ವಿಪುಲವಾದ ಅವಕಾಶಗಳನ್ನು ಕಲ್ಪಿಸಿ ಅವರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಸಬಲೀಕರಣಗೊಳಿಸಿ ಸಶಕ್ತರನ್ನಾಗಿಸುವಲ್ಲಿ ಸ್ವಸಹಾಯ ಸಂಘಗಳ ಪಾತ್ರ ಅಪಾರವಾಗಿದೆ ಎಂದು ಈ ಅಧ್ಯಯನದಲ್ಲಿ ತಿಳಿದುಬಂದಿದೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಸಂಗ್ರಹಿಸಿದ ದತ್ತಾಂಶ ಹಾಗೂ ಸಂದರ್ಶನ ನಡೆಸಿದ ಆಧಾರದ ಮೇಲೆ ಅಧ್ಯಯನದ ಫಲಿತಾಂಶವನ್ನು ಈ ಕೆಳಗಿನಂತೆ ಗಮನಿಸಬಹುದಾಗಿದೆ.

ಸ್ವಸಹಾಯ ಸಂಘಗಳಿಂದಾಗಿ ಮಹಿಳೆಯರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳಲ್ಲಿ ಬದಲಾವಣೆ ಉಂಟಾಗಿದೆ. ಸಾಮಾಜಿಕವಾಗಿ ಇಂದು ಮಹಿಳೆಯರು ಸಮಾಜದಲ್ಲಿ ಗುರುತಿಸಲ್ಪಡುವ ವ್ಯಕ್ತಿಗಳಾಗಿದ್ದಾರೆ. ಅವರ ಬಡತನ ನಿವಾರಣೆಯಲ್ಲಿ ಸ್ವಸಹಾಯ ಸಂಘಗಳು ಮಹತ್ತರ ಪಾತ್ರ ವಹಿಸುತ್ತದೆ. ಉದ್ಯೋಗಾವಕಾಶಗಳನ್ನು ಕಲ್ಪಿಸುವಲ್ಲಿ ಸಂಘಗಳು ಸಹಾಯಕವಾಗಿದೆ. ಗ್ರಾಮೀಣ ಮಹಿಳೆಯರಿಗೆ ಆದಾಯ ತರುವ ಚಟುವಟಿಕೆಗಳನ್ನು ನಡೆಸಲು ಅವಕಾಶ ಕಲ್ಪಿಸಿದೆ. ಆರ್ಥಿಕವಾಗಿ ದುರ್ಬಲ ಮಹಿಳೆಯರಿಗೆ ಕಿರುಹಣಕಾಸು ಸಂಸ್ಥೆಗಳ ಮುಖಾಂತರ ಸಾಲ ಸೌಲಭ್ಯವನ್ನು ಒದಗಿಸಿ ಮಹಿಳೆಯರ ಬಾಳನ್ನು ಬೆಳಗಿದೆ. ಗ್ರಾಮೀಣ ಪ್ರದೇಶದ ಬಡಜನರು ಸಾಕಷ್ಟು ಜಮೀನನ್ನು ಹೊಂದಿಲ್ಲ. ಇಂತಹ ಸಂದರ್ಭದಲ್ಲಿ ಯಾವುದೇ ದಾಖಲೆಗಳಿಲ್ಲದೆ ಸಂಘದ ಇತರ ಸದಸ್ಯರ ಒಪ್ಪಿಗೆಯ ಮೇರೆಗೆ ಸಾಲ ಸೌಲಭ್ಯ ಒದಗಿಸಿ ಕೊಡುತ್ತದೆ. ಸ್ವಸಹಾಯ ಸಂಘದಿಂದ ಪ್ರಯೋಜನ ಪಡೆದ ಮಹಿಳೆಯರು ಹೋಟೇಲು ಉದ್ಯಮ, ಪಶುಸಂಗೋಪನೆ, ಹೈನುಗಾರಿಕೆ, ಕೃಷಿಗೆ ಸಹಾಯ, ತರಕಾರಿ ಕೃಷಿ ಮೊದಲಾದ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಇಷ್ಟೇ ಅಲ್ಲದೆ ಅಗರಬತ್ತಿ ತಯಾರಿ, ಸೋಪು, ಫಿನಾಯಿಲ್ ಗಳ ಉತ್ಪನ್ನ, ಹಾಳೆತಟ್ಟೆ ತಯಾರಿ, ಕಾಂಪೋಸ್ಟ್ ಗೊಬ್ಬರ ತಯಾರಿ, ತಿಂಡಿತಿನಿಸುಗಳ ತಯಾರಿ ಮೊದಲಾದ ಸ್ವ ಉದ್ಯೋಗಗಳನ್ನು ಕೈಗೊಂಡು ನಿರ್ವಹಿಸುತ್ತಾ ಬರುತ್ತಿದ್ದಾರೆ. ಇದರಿಂದ ಬಂದ ಆದಾಯದಲ್ಲಿ ತೆಗೆದ ಸಾಲ ಮರುಪಾವತಿ ಮಾಡುತ್ತಿದ್ದಾರೆ. ಪ್ರಸ್ತುತ ಅಧ್ಯಯನದಲ್ಲಿ ೧೦೦ ಶೇ.ಸದಸ್ಯರು ಸಾಲವನ್ನು ಸಮಯಕ್ಕೆ ಸರಿಯಾಗಿ ಸಂದಾಯ ಮಾಡುತ್ತಿದ್ದಾರೆ.

ಗ್ರಾಮೀಣ ಮಹಿಳೆಯರು ಇಂದು ಹೆಚ್ಚಿನ ಸಂಖ್ಯೆಯಲ್ಲಿ ಸ್ವಸಹಾಯ ಸಂಘಗಳಿಗೆ ಸೇರಲು ಆಸಕ್ತಿ ತೋರಿಸುತ್ತಿದ್ದಾರೆ. ತಮ್ಮ ವೈಯಕ್ತಿಕ ಆಸಕ್ತಿಯಿಂದ ಅಥವಾ ಇತರರ ಪ್ರೇರಣೆ ಮೇರೆಗೆ ಸಂಘಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ. ಸಂದರ್ಶನ ನಡೆಸಿದ ೧೦೦ ಫಲಾನುಭವಿಗಳ ಪೈಕಿ ಹೆಚ್ಚಿನವರು ಉಳಿತಾಯ ಮಾಡುವ ಉದ್ದೇಶದಿಂದ ಸ್ವಸಹಾಯ ಸಂಘಗಳ ಸದಸ್ಯರಾಗಿದ್ದಾರೆ. ಇನ್ನು ಕೆಲವರು ಸಮಾಜದಲ್ಲಿ ಗುರುತಿಸುವ ವ್ಯಕ್ತಿಯಾಗಬೇಕು ಎಲ್ಲರಂತೆ ತಾನು ಕೂಡ ಮುಂದುವರಿಯಬೇಕು, ಕೇವಲ ನಾಲ್ಕು ಗೋಡೆಗಳ ಮಧ್ಯೆ ಸೀಮಿತವಾಗಿರದೆ ತಾನೂ ಕೂಡಾ ಮುಂದುವರಿಯಬೇಕು ಎನ್ನುವ

ದೃಷ್ಟಿಯಿಂದ ಸಂಘಗಳ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ ಎಂಬುದಾಗಿ ಈ ಅಧ್ಯಯನದಲ್ಲಿ ತಿಳಿದುಕೊಳ್ಳಲಾಗಿದೆ. ಸ್ವಸಹಾಯ ಸಂಘಗಳಿಗೆ ಸೇರಿದ ಮೇಲೆ ಸರಕಾರದಿಂದ ಸಿಗುವ ಎಲ್ಲಾ ಸೌಲಭ್ಯಗಳ ಪ್ರಯೋಜನ ಪಡೆದುಕೊಳ್ಳಲು ಸಾಧ್ಯವಾಗಿದೆ.

ಸುಳ್ಯ ತಾಲೂಕಿನ ಮಹಿಳೆಯರು ಹೆಚ್ಚಾಗಿ ಕೃಷಿಯನ್ನೇ ಅವಲಂಬಿಸಿದ್ದಾರೆ. ಹೀಗಾಗಿ ಸ್ವಸಹಾಯ ಸಂಘಗಳಿಂದ ಸಾಲ ಪಡೆದು ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗಿದೆ. ಆದರೆ ಇನ್ನೂ ವ್ಯವಸ್ಥಿತ ಹಾಗೂ ವೈಜ್ಞಾನಿಕ ಕೃಷಿ ತಂತ್ರಜ್ಞಾನ ಅಳವಡಿಕೆಗಾಗಿ ಮಹಿಳೆಯರಿಗೆ ಗ್ರಾಮ ಮಟ್ಟದಲ್ಲಿ ತರಬೇತಿ ನೀಡಿದರೆ ಸಹಾಯಕವಾಗಲಿದೆ. ಗ್ರಾಮೀಣ ಮಹಿಳೆಯರು ಸಾಮಾಜಿಕವಾಗಿ, ಆರ್ಥಿಕವಾಗಿ ಬೆಳವಣಿಗೆ ಹೊಂದಿರುವುದು ಮಾತ್ರವಲ್ಲದೆ ಶೈಕ್ಷಣಿಕವಾಗಿಯೂ, ರಾಜಕೀಯವಾಗಿಯೂ ಮುಂದುವರಿದುದು ಕಂಡುಬರುತ್ತದೆ. ಸ್ವಸಹಾಯ ಸಂಘಗಳಿಗೆ ಸೇರಿದ ಬಳಿಕ ಆಶಾ ಕಾರ್ಯಕರ್ತೆಯರಾಗಿ, ಗ್ರಾಮ ಪಂಚಾಯತ್ ಸದಸ್ಯರಾಗಿ ಆಯ್ಕೆಗೊಂಡವರನ್ನು ಗುರುತಿಸಬಹುದಾಗಿದೆ. ಸಂಘಗಳಿಗೆ ಸೇರಿದ ಬಳಿಕ ತಮ್ಮ ಜ್ಞಾನದ ಮಟ್ಟ ಹೆಚ್ಚಳವಾದುದಲ್ಲದೆ ಮಕ್ಕಳನ್ನು ಶಾಲೆಗೆ ಕಳುಹಿಸಿ ವಿದ್ಯಾಭ್ಯಾಸ ಕೊಡಿಸುವತ್ತ ಗಮನಹರಿಸುತ್ತಿದ್ದಾರೆ.

ಬಡತನ ನಿವಾರಣೆಯಲ್ಲಿ ಸ್ವಸಹಾಯ ಸಂಘಗಳ ಪಾತ್ರ ಅತ್ಯಂತ ಮಹತ್ವವಾದುದು ಎಂದು ಸಮೀಕ್ಷೆಯಿಂದ ಕಂಡುಕೊಳ್ಳಬಹುದಾಗಿದೆ. ಸಂಗ್ರಹಿಸಿದ ದತ್ತಾಂಶದ ಆಧಾರದಲ್ಲಿ ಹೇಳುವುದಾದರೆ ೨೩% ಮಹಿಳೆಯರು ಅತ್ಯುತ್ತಮ ಹಾಗೂ ೬೨% ಮಹಿಳೆಯರು ಉತ್ತಮ ರೀತಿಯಲ್ಲಿ ಬಡತನ ನಿವಾರಣೆಯಾಗಿದೆ ಎಂದು ಹೇಳಿರುವುದನ್ನು ಗಮನಿಸಬಹುದಾಗಿದೆ. ಸ್ವಸಹಾಯ ಸಂಘದ ಸಹಾಯದಿಂದ ಮನೆಗೆ ಸೌರವಿದ್ಯುತ್ ಅಳವಡಿಕೆ, ಪೀಠೋಪಕರಣಗಳ ಖರೀದಿ, ಗೃಹೋಪಯೋಗಿ ವಸ್ತುಗಳ ಖರೀದಿ ಮುಂತಾದವು ಸಾಧ್ಯವಾಗಿದೆ. ಕಿರುಸಾಲ ಪಡೆದು ಸ್ವ ಉದ್ಯೋಗ, ಗುಡಿಕೈಗಾರಿಕೆ ನಡೆಸುವ ಉದಾಹರಣೆಗಳನ್ನು ಕಾಣಬಹುದಾಗಿದೆ. ಈ ಹಂತದಲ್ಲಿ ಅವರಿಗೆ ಇನ್ನೂ ಹೆಚ್ಚಿನ ತರಬೇತಿ ನೀಡಿದಲ್ಲಿ ಇನ್ನೂ ಉತ್ತಮಗೊಂಡು ಮುಂದುವರಿಯಲು ಸಾಧ್ಯವಿದೆ. ಇದರಿಂದ ಅವರ ಆದಾಯದ ಮಟ್ಟ ಹೆಚ್ಚಳಗೊಂಡು ಗ್ರಾಮೀಣ ಮಹಿಳೆಯರ ಜೀವನಮಟ್ಟದಲ್ಲಿ ಇನ್ನಷ್ಟು ಸುಧಾರಣೆ ನಿರೀಕ್ಷಿಸಬಹುದಾಗಿದೆ.

೫.೨ ಸಲಹೆಗಳು

ಅಧ್ಯಯನ ಸಂದರ್ಭದಲ್ಲಿ ಸಂಗ್ರಹಿಸಿದ ದತ್ತಾಂಶದ ಆಧಾರದ ಮೇಲೆ ಗ್ರಾಮೀಣ ಮಹಿಳೆಯರಲ್ಲಿ ಬದಲಾವಣೆಯಾದುದನ್ನು ಗಮನಿಸಬಹುದಾಗಿದೆ. ಆದರೆ ಈ ಬದಲಾವಣೆ ವ್ಯಾಪಕ ಮಟ್ಟದಲ್ಲಿಲ್ಲ. ಈ ನಿಟ್ಟಿನಲ್ಲಿ ಕೆಲವು ಸಲಹೆಗಳನ್ನು ನೀಡಲಾಗಿದೆ.

- ಗ್ರಾಮೀಣ ಪ್ರದೇಶದ ಎಲ್ಲಾ ಮಹಿಳೆಯರು ಸ್ವಸಹಾಯ ಸಂಘಗಳ ಪ್ರಯೋಜನ ಪಡೆದುಕೊಂಡಿಲ್ಲ. ಈ ನಿಟ್ಟಿನಲ್ಲಿ ಗಮನಹರಿಸಿ ಕ್ರಮಕೈಗೊಳ್ಳಬೇಕು.
- ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಕೂಡಾ ಅನಕ್ಷರಸ್ಥರನ್ನು ಕಾಣಬಹುದಾಗಿದೆ. ಆದುದರಿಂದ ಅವರಿಗೆ ಶಿಕ್ಷಣ ಒದಗಿಸುವಲ್ಲಿ ಗಮನಹರಿಸಬೇಕು.
- ಶೈಕ್ಷಣಿಕವಾಗಿ ಇನ್ನು ಮುಂದುವರಿಯಲು ಸ್ವಸಹಾಯ ಸಂಘಗಳ ಸದಸ್ಯರ ಮಕ್ಕಳಿಗೆ ವಿದ್ಯಾರ್ಥಿ ವೇತನದಂತಹ ಪ್ರೋತ್ಸಾಹ ನೀಡಬೇಕು.
- ಕೃಷಿಕ ಮಹಿಳೆಯರಿಗೆ ತಾವು ಬೆಳೆದ ಬೆಳೆಗಳಿಗೆ, ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿ ಸೂಕ್ತ ಬೆಲೆ ನಿಗದಿಪಡಿಸುವಲ್ಲಿ ಕ್ರಮಕೈಗೊಳ್ಳಬೇಕು.
- ಸ್ವಉದ್ಯೋಗ ಪ್ರಾರಂಭಿಸುವವರಿಗೆ ಉದ್ಯೋಗ ಪ್ರಾರಂಭಿಸಲು ಪ್ರೋತ್ಸಾಹ ಧನ ನೀಡಬೇಕು.

ಸ್ವಸಹಾಯ ಸಂಘದಿಂದ ಮಹಿಳೆಯರು ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸುವುದು ಸಾಧ್ಯ. ಆದರೆ ಆಕೆಯ ಸರ್ವತೋಮುಖ ಸಬಲೀಕರಣದ ಮೇಲೆ ಪುರುಷರ ಆಚಾರ ವಿಚಾರಗಳು ಸಹ ಪ್ರಭಾವ ಬೀರುತ್ತವೆ. ಭಾರತ ದೇಶ ಸಾಮಾಜಿಕ ಕಳಕಳಿ ಮತ್ತು ಸಂಪ್ರದಾಯಗಳಿಂದ ಕೂಡಿದ ದೇಶ. ಕೆಲವು ಸಂದರ್ಭಗಳಲ್ಲಿ ಪುರುಷರ ಕೆಟ್ಟ ವಿಚಾರಗಳನ್ನು ಸಹಿಸಿಕೊಂಡು ಮಹಿಳೆಯರು ಬದುಕುತ್ತಾರೆ. ಪುರುಷರ ಅಪ್ಪಣೆ ಮೀರಲಾರದೆ ಮಹಿಳೆಯರು ಸ್ವಸಹಾಯ ಸಂಘದ ಸೇವೆಯಿಂದ ವಂಚಿತರಾದ ಹಲವು ಉದಾಹರಣೆಗಳು ಕಂಡುಬಂದಿವೆ.

ಸ್ವಸಹಾಯ ಸಂಘಗಳು ಮಹಿಳಾ ಸಬಲೀಕರಣದ ವಿಚಾರದಲ್ಲಿ ದಿಟ್ಟ ಹೆಜ್ಜೆ ಇಟ್ಟಿವೆ ಎಂಬುವರಲ್ಲಿ ಎರಡು ಮಾತಿಲ್ಲ. ಸುಳ್ಯ ತಾಲೂಕಿನಲ್ಲಿ ಸ್ತ್ರೀಶಕ್ತಿ ಯೋಜನೆ ಸ್ವಸಹಾಯ ಸಂಘಗಳು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ನವೋದಯ ಸ್ವಸಹಾಯ ಸಂಘಗಳು ಮಹಿಳೆಯರ ಸಬಲೀಕರಣದಲ್ಲಿ ಅಭೂತಪೂರ್ವ ಸಾಧನೆ ಮಾಡಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಸರಕಾರ, ಸರಕಾರೇತರ ಹಾಗೂ ಸಹಕಾರಿ ರಂಗದ ಯೋಜನೆಗಳು ಸಮಾನ ರೀತಿಯಲ್ಲಿ ಗ್ರಾಮೀಣ ಜನರನ್ನು ಅದರಲ್ಲೂ ಮುಖ್ಯವಾಗಿ ಮಹಿಳೆಯರನ್ನು ತಲುಪಿವೆ. ಆಧುನೀಕರಣದ ಹೆಸರಿನಲ್ಲಿ ಮುಂದುವರಿಯುತ್ತಿರುವ ಈ ಸಮಾಜದಲ್ಲಿ ಗ್ರಾಮೀಣ ಮಹಿಳೆಯರು ಸಹ ಇಂದು ನಗರ ಪ್ರದೇಶದ ಜನರಂತೆ ಮುಂದುವರಿಯಲು ಸಾಧ್ಯವಾಗುತ್ತಿದೆ. ನಬಾರ್ಡ್ ಹಾಗೂ ಇತರ ಬ್ಯಾಂಕುಗಳ ಮೂಲಕ ಸಿಗುವ ಕಿರುಹಣಕಾಸನ್ನು ಬಳಸಿಕೊಂಡು ಗ್ರಾಮೀಣ ಮಹಿಳೆಯರು ಮುನ್ನುಗ್ಗುತ್ತಿದ್ದಾರೆ. ಸಾಮಾಜಿಕವಾಗಿ ಉತ್ತನ ಸ್ಥಾನವನ್ನು ಗಳಿಸಿಕೊಳ್ಳತ್ತಾ ಆರ್ಥಿಕವಾಗಿ ಸ್ವಾವಲಂಬಿಗಳಾಗುತ್ತಿದ್ದಾರೆ. ಗ್ರಾಮೀಣ ಮಹಿಳೆಯರ ಸಬಲೀಕರಣದಲ್ಲಿ, ಅವರ ಜೀವನವನ್ನು ರೂಪಿಸುವಲ್ಲಿ ಸ್ವಸಹಾಯ ಸಂಘಗಳು ಅತ್ಯಂತ ಪ್ರಮುಖ ಪಾತ್ರವಹಿಸುತ್ತವೆ.

ಪರಾಮರ್ಶನ ಗ್ರಂಥಗಳು

೧. ಮಹಿಳಾಭಿವೃದ್ಧಿಯ ಆಯಾಮಗಳು, ಡಾ. ಕೆ ಶಿವಚಿತ್ತಪ್ಪ. ಜ್ಞಾನೋದಯ ಪಬ್ಲಿಕೇಶನ್ಸ್ : ಮೈಸೂರು, ೨೦೧೧.

೨. ಮಹಿಳೆ, ಶಿಕ್ಷಣ ಮತ್ತು ಸಮಾಜ, ಡಾ. ಸಿ. ಡಿ. ವೆಂಕಟೇಶ್. ಅನ್ನದಾನಿ ಭೈರವ ಪ್ರಕಾಶನ: ಬೆಂಗಳೂರು, ೨೦೧೨

೩. ಮಹಿಳಾ ಸಬಲೀಕರಣ ಮತ್ತು ರಾಜಕೀಯ ಪ್ರಾತಿನಿಧತ್ವ, ಡಾ. ಎಂ. ರಾಚಪ್ಪಾಜಿ. ವಾಣಿ ಪ್ರಕಾಶನ : ಮೈಸೂರು, ೨೦೧೧.

೪. ಗ್ರಾಮೀಣ ಮಹಿಳೆಯರ ಸಾಮಾಜಿಕ ಆರ್ಥಿಕ ಹಿನ್ನೆಲೆ, ಡಾ. ಉತ್ತಮ ಅ. ಕಾಂಬಳೆ. ಸಚಿನ್ ಪಬ್ಲಿಷರ್ಸ್ : ಬೆಂಗಳೂರು, ೨೦೧೧.

೫. ಮಹಿಳಾ ಅಧ್ಯಯನ , ನೇಮಿಚಂದ್ರ. ಅಂಕಿತ ಪುಸ್ತಕ ಪ್ರಕಾಶನ : ಬೆಂಗಳೂರು, ೨೦೧೧.

೬. ಮಹಿಳಾ ಅಧ್ಯಯನ, ಡಾ. ಎಂ ಉಷಾ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ ಹಂಪಿ, ೨೦೧೦.

೭. ಗ್ರಾಮೀಣ ಅಭಿವೃದ್ಧಿ, ಡಾ. ಜಯವಂತ ನಾಯಕ್ ಮತ್ತು ಶ್ರೀ ನಾರಾಯಣ ಯಾಜಿ. ಪ್ರಸಾರಾಂಗ ಮಂಗಳೂರು ವಿಶ್ವವಿದ್ಯಾನಿಲಯ, ೨೦೧೦.

೮. ಮಹಿಳೆ ಮತ್ತು ಅಭಿವೃದ್ಧಿ, ಡಾ. ಜಯಶೀಲ, ಶೌಕತ್ ಅಲಿ ಎಂ ಮೇಗಲಮನಿ, ಸುಧಾಕರ ಎಸ್. ಕಿಸಾನ್ ಪ್ರಕಾಶನ : ಬೆಂಗಳೂರು, ೨೦೦೭.

೯. ಹೊಸ್ತಿಲಿಂದೀಚೆಗೆ, ಚಂದ್ರಕಲಾ ನಂದಾವರ. ಹೇಮಾಂಶು ಪ್ರಕಾಶನ : ಮಂಗಳೂರು, ೧೯೯೧.

೧೦. ಮಹಿಳಾ ಅಧ್ಯಯನಗಳು ಆರ್ಥಿಕ ಸಾಮಾಜಿಕ ನೆಲೆಗಳು ಮತ್ತು ಸಬಲೀಕರಣ, ಪ್ರೊ. ಒಡೆಯರ್ ಡಿ ಹೆಗ್ಗಡೆ, ಎನ್ ಅನ್ನಪೂರ್ಣೇಶ್ವರಿ. ಶ್ರೀ ವಿಶಾಲ್ ಎಂಟರ್‌ಪ್ರೈಸಸ್ : ಬೆಂಗಳೂರು, ೨೦೦೯.

೧೧. ಮಹಿಳಾ ಸಬಲೀಕರಣದ ವಿವಿಧ ಹೆಜ್ಜೆಗಳು, ಡಾ. ಎಂ. ರಾಚಪ್ಪಾಜಿ, ಡಾ. ಎಸ್. ನಾಗರಾಜು. ಸಂದೀಪ್ ಪ್ರಕಾಶನ : ಚಾಮರಾಜನಗರ, ೨೦೧೦.

೧೨.ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ – ಅಂಶಗಳ ನೋಟ. ಜಿಲ್ಲಾಸಂಖ್ಯಾ ಸಂಗ್ರಹಣಾಧಿಕಾರಿ, ದಕ್ಷಿಣ ಕನ್ನಡ ಮಂಗಳೂರು, ೨೦೧೩.

೧೩.ಶ್ರೀಕ್ಷೇತ್ರ ಧರ್ಮಸ್ಥಳಗ್ರಾಮಾಭಿವೃದ್ಧಿ ಯೋಜನೆ (ರಿ) ಸಂಕ್ಷಿಪ್ತ ವಾರ್ಷಿಕ ವರದಿ, ಕಾರ್ಯವಾಹಕ ನಿರ್ದೇಶಕರು : ಧರ್ಮಸ್ಥಳ, ೨೦೧೦ – ೨೦೧೧.

೧೪.ಜ್ಞಾನವಿಕಾಸ ಮಹಿಳಾ ಕಾರ್ಯಕ್ರಮ, ಕಾರ್ಯನಿರ್ವಾಹಕ ನಿರ್ದೇಶಕರು : ಧರ್ಮಸ್ಥಳ.

೧೫.ನವವಿಕಾಸ, ನವೋದಯ ಗ್ರಾಮವಿಕಾಸ ಚಾರಿಟೇಬಲ್ ಟ್ರಸ್ಟ್ (ರಿ) : ಮಂಗಳೂರು. ೨೦೦೮.

ಅನುಬಂಧ - ೧

ಪ್ರಶ್ನಾವಳಿ

1. ಸ್ವ ಸಹಾಯ ಸಂಘದ ಸದಸ್ಯರ ಹೆಸರು :

2. ವಯಸ್ಸು :

3. ವಿದ್ಯಾರ್ಹತೆ :

   1) ಪ್ರಾಥಮಿಕ ☐ 2) ಪ್ರೌಢ ☐ 3) ಪದವಿ ಪೂರ್ವ ☐

   4) ಪದವಿ ☐ 5) ಅನಕ್ಷರಸ್ಥ ☐ 6) ನವಸಾಕ್ಷರ ☐

4. ವೃತ್ತಿ

   1) ಕುಲಕಸುಬು ☐ 2) ಕೂಲಿ ☐ 3) ಕೃಷಿ ☐

   4) ಖಾಸಗಿ ಸಂಸ್ಥೆ ಉದ್ಯೋಗ ☐ 5) ಸರ್ಕಾರಿ ಉದ್ಯೋಗಿ ☐

5. ವೈವಾಹಿತೆ ಸ್ಥಿತಿ

   1) ವಿವಾಹಿತೆ ☐ 2) ಅವಿವಾಹಿತೆ ☐

6. ಕುಟುಂಬದ ಸದಸ್ಯರ ಸಂಖ್ಯೆ

7. ಸ್ವ ಸಹಾಯ ಸಂಘದಲ್ಲಿನ ಸದಸ್ಯತ್ವದ ಅವಧಿ:

8. ಸಂಘಕ್ಕೆ ಸೇರಲು ನಿಮಗೆ ಸಲಹೆ ನೀಡಿದರು ಯಾರು?

   1) ಸಂಘದ ಸದಸ್ಯರು ☐ 2) ಸ್ನೇಹಿತರು ☐ 3) ಇತರರು ☐

9. ಸ್ವಸಹಾಯ ಸಂಘಕ್ಕೆ ಸೇರಿದ ಉದ್ದೇಶವೇನು?

10. ಸ್ವ ಸಹಾಯ ಸಂಘಕ್ಕೆ ಸೇರಿದ ಉದ್ದೇಶವೇನು?

ಬದಲಾವಣೆಯ ಸೂಚಕಗಳು	ಅತ್ಯುತ್ತಮ	ಉತ್ತಮ	ಸಾಧಾರಣ	ಕಡಿಮೆ
1. ಉದ್ಯೋಗ ಅವಕಾಶ				
2. ಆದಾಯ				
3. ಆಸ್ತಿ				
4. ಹಣಕಾಸಿನ ವ್ಯವಹಾರ				
5. ಉದ್ಯಮ ಶೀಲತೆ				

11. ಸಂಘಕ್ಕೆ ಸೇರಿದ ಬಳಿಕ ನಿಮ್ಮಲ್ಲಿ ಆದ ಸಾಮಾಜಿಕ ಬದಲಾವಣೆ

ಬದಲಾವಣೆಯ ಸೂಚಕಗಳು	ಅತ್ಯುತ್ತಮ	ಉತ್ತಮ	ಸಾಧಾರಣ	ಕಡಿಮೆ
1. ಬಡತನ ನಿವಾರಣೆ				
2. ಶಿಕ್ಷಣಮಟ್ಟ ಹೆಚ್ಚಳ				
3. ಜೀವನಕ್ರಮ ವ್ಯತ್ಯಾಸ				

12. ಕುಟುಂಬ ವಾರ್ಷಿಕ ಆದಾಯ

ಸಂಘಕ್ಕೆ ಸೇರುವ ಮೊದಲು	ಸಂಘಕ್ಕೆ ಸೇರಿದ ನಂತರ

13. ಸಂಘದಲ್ಲಿ ಉಳಿತಾಯ ಕ್ರಮ

ಉಳಿತಾಯದ ವಿಧ	ವಾರಕ್ಕೊಮ್ಮೆ	ಹದಿನೈದು ದಿನಕ್ಕೊಮ್ಮೆ	ತಿಂಗಳಿಕೊಮ್ಮೆ	ಉಳಿತಾಯ ಮೊತ್ತ	ಈವರೆಗಿನ ಒಟ್ಟು ಉಳಿತಾಯ

14. ಸ್ವಸಹಾಯ ಸಂಘದಿಂದ ಪಡೆದುಕೊಂಡ ಸಾಲದ ಬಗ್ಗೆ ಮಾಹಿತಿ

ಉದ್ದೇಶ	ಒಟ್ಟು ಮೊತ್ತ	ಈವರೆಗೆ ಎಷ್ಟು ಬಾರಿ ಸಾಲ ಪಡೆದಿದ್ದೀರಿ	ಸಂದಾಯ

15. ನೀವು ಸಂಘಕ್ಕೆ ಸೇರಲು ಇತರರಿಗೆ ಪ್ರೇರಣೆ ನೀಡುತ್ತೀರಾ?

1) ಹೌದು ☐ 2) ಅಲ್ಲ ☐

16. ಸಂಘದ ಸಹಾಯದಿಂದ ಸ್ವ ಉದ್ಯೋಗ ಮಾಡುತ್ತಿದ್ದೀರಾ? ಮಾಡುತ್ತಿದ್ದಲ್ಲಿ ಯಾವುದು?

17. ಸ್ವ ಸಹಾಯ ಸಂಘಕ್ಕೆ ಸೇರಿದ ನಂತರ ನಿಮ್ಮ ಜೀವನದಲ್ಲಿ ಆದ ಬದಲಾವಣೆಯ ಕುರಿತು ನಿಮ್ಮ ಒಟ್ಟು ಅನಿಸಿಕೆ ಏನು?

ಅನುಬಂಧ – ೨

ಸುಳ್ಯ ತಾಲೂಕಿನ ಭೂಪಟ

